ಅಧ್ಯಾಯ ೧೦

# ನ್ಯಾಯಾಡಳಿತ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ಕಾನೂನು ಸುವ್ಯವಸ್ಥೆ ಮತ್ತು ನ್ಯಾಯಾಡಳಿತವು ಧರ್ಮಶಾಸ್ತ್ರದ ಆಧಾರದ ಮೇಲೆ ಆಚರಣೆಯಲ್ಲಿತ್ತು. ಕಾನೂನು ಕಟ್ಟಳೆಗಳು ಶಿಸ್ತುಬದ್ಧವಾಗಿದ್ದವು ಎಂಬುದು ಶಾಸನಾಧಾರಗಳಿಂದ ವ್ಯಕ್ತವಾಗುತ್ತದೆ. ಈ ಜಿಲ್ಲೆಯನ್ನು ಆಳಿದ ಅತ್ಯಂತ ಪ್ರಾಚೀನ ರಾಜವಂಶವಾದ ಆಳುಪರ ಕಾಲದಲ್ಲಿ ರಾಜದ್ರೋಹ ಮತ್ತು ಕಳ್ಳತನದ ಆರೋಪಗಳು ಸಾಬೀತಾದರೆ ಗಡಿಪಾರು ಮಾಡುವ ದಂಡಸಂಹಿತೆಯು ಜಾರಿಯಲ್ಲಿತ್ತೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಕೇವಲ ಸಣ್ಣಪುಟ್ಟ ತಪ್ಪುಗಳಿಗೆ ಸರಳವಾದ ಶಿಕ್ಷೆಗಳನ್ನು ನೀಡುವುದು ಕ್ರಮವಾಗಿದ್ದರೂ, ಹಲವು ತೀವ್ರತರವಾದ ಕಾನೂನು ಉಲ್ಲಂಘನೆಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿತ್ತು. ಆಳುಪರ ಆಳ್ವಿಕೆಯ ಕಾಲದಲ್ಲಿ 'ರಾಜ್ಯ', 'ವಿಷಯ' ಮತ್ತು 'ನಟ್ಟು' ಅಥವಾ 'ನಾಡು'ಗಳೆಂಬ ಪ್ರಮುಖ ಆಡಳಿತ ಘಟಕಗಳಿದ್ದವು. ಉಡುಪಿ ತಾಲೂಕಿನ ವಡ್ಡರ್ಸೆಯ ಕ್ರಿ.ಶ. ಏಳನೆಯ ಶತಮಾನದ ಶಾಸನವು ನಾಡಿನ ಮಡುಮೆ ಅಥವಾ ಆಡಳಿತದ ಬಗ್ಗೆ ವಿವರಗಳನ್ನು ನೀಡುತ್ತಾ, ಗುಂಡಣ್ಣನೆಂಬ ಆಳುಪ ಕಂದವರ್ಮನ ಬಲಗೈ ಬಂಟನು ನಾಡಿನ ಆಡಳಿತವನ್ನು ನಿಯಂತ್ರಿಸುವಲ್ಲಿ ಆಳ್ವರಸರ ರಾಜ್ಯದ ನ್ಯಾಯಾಂಗ ನೀತಿಯನ್ನು ದಕ್ಷತೆಯಿಂದ ಅನುಸರಿಸುತ್ತಿದ್ದನೆಂದು ಉಲ್ಲೇಖಿಸುತ್ತದೆ.

ಶಾಸನಗಳಲ್ಲಿ ಪದೇ ಪದೇ ಉಲ್ಲೇಖವಾಗಿರುವಂತೆ 'ರಾಜ್ಯಾಭಿವೃದ್ಧಿ ಪ್ರವರ್ಧಮಾನಮ್' ಎಂಬುದು ಆಳುಪರ ಆಡಳಿತದ ತಾರಕಮಂತ್ರವಾಗಿತ್ತು. ರಾಜನೇ ರಾಜ್ಯದಲ್ಲಿ ಉನ್ನತ ನ್ಯಾಯಾಧೀಶನಾಗಿದ್ದನು. ಮಧ್ಯಯುಗೀನ ಆಳುಪರ ಕಾಲದಲ್ಲಿ ತುಳುನಾಡಿನಲ್ಲಿ ಬಳಕೆಯಲ್ಲಿದ್ದ ನ್ಯಾಯವ್ಯವಹಾರಗಳ ಮಾಹಿತಿಯು ಆ ಕಾಲದ ಶಾಸನಗಳಿಂದ ಸಾಕಷ್ಟು ತಿಳಿದುಬರುತ್ತದೆ. ಆಳುಪರ ಕಾಲದಲ್ಲಿ ಗುರುತರ ಅಪರಾಧಗಳನ್ನು ಮಾಡಿದರೆ ಅವನನ್ನು ನಾಲ್ಕು ಜಾತಿಯವರಿಂದ ಬಹಿಷ್ಕಾರ ಹಾಕುವ ಪದ್ಧತಿಯು ರೂಢಿಯಲ್ಲಿತ್ತು. ಹೀಗೆ ಬಹಿಷ್ಕೃತರಾದ ಅಪರಾಧಿಗಳನ್ನು ಆ ಕಾಲದ ಶಾಸನಗಳಲ್ಲಿ "ಹೊರಹಿನವರು" ಎಂದು ಕರೆಯಲಾಗಿದೆ. ಸಾಧಾರಣ ಅಪರಾಧಗಳಿಗೆ ಸಾಮಾನ್ಯವಾಗಿ ಹೊನ್ನಿನ ದಂಡ ವಿಧಿಸಲಾಗುತ್ತಿತ್ತು. ಉದಾಹರಣೆಗೆ ಕ್ರಿ.ಶ.೧೨೦೮ಕ್ಕೆ ಸೇರಿದ ಒಂದನೆಯ ಕುಲಶೇಖರನ ಆಳ್ವಿಕೆಯ ಶಾಸನವೊಂದರಲ್ಲಿ ನಮೂದಿತ ದಾನಗಳನ್ನು ತಿರಸ್ಕರಿಸುವವರಿಗೆ 'ನಾಲ್ಕು ಜಾತಿಯೊಳು ಬ್ರಾಹ್ಮಣ ಮಾಡಿದಡೆ–ನಾಲ್ಕು ಜಾತಿಯಿಂ ಪೊರಗು; ಸೆಟ್ಟಿ ಮಾಡಿದಡೆ ಸರ್ವಸ್ವ ಬಳಂಜದಿಂ ಪೊರಗು; ಒಕ್ಕಲು ಮಕ್ಕಳು ಮಾಡಿದಡೆ ತಲೆಸಾವಿರ ಹೊನ್ನುದಂಡ" ಎನ್ನುತ್ತದೆ. ಇದೇ ಶಾಸನದಲ್ಲಿ ರಾಜನೂ ಕೂಡಾ ತಪ್ಪಿತಸ್ಥನಾದಲ್ಲಿ ದಂಡನೆಗೆ ಗುರಿಯಾಗುತ್ತಿದ್ದನೆಂದು ತಿಳಿದುಬರುತ್ತದೆ. "ಇಂತಿ ಇವೆಲ್ಲಮಂ ವಿಚಾರಿಸಿ ರಕ್ಷಿಸದಿದ್ದಡೆ ಅರಸಿಂಗೆ

ಗಂಗೆ ರಾಮೇಶ್ವರದಲು ಸಾವಿರ ಕಪಿಲೆ ಸಾವಿರ ಬ್ರಾಹ್ಮಣರ ಕೊಂದಪಾಪ' ಎಂದು ಉಕ್ತವಾಗಿದೆ. ಉದ್ಯಾವರದ ವಿನಾಯಕ ದೇವರ ಧರ್ಮಶಾಸನ, ಕಾಪು ಗ್ರಾಮದಲ್ಲಿರುವ ಕ್ರಿ.ಶ. ೧೩೭೫ರ ಶಾಸನ, ಕುಂದಾಪುರ ತಾಲೂಕಿನ ಹಟ್ಟಿಯಂಗಡಿ ಶಾಸನ ಮುಂತಾದವು ದಂಡಗಳ ಬಗ್ಗೆ, ದಾನವನ್ನು ಉಲ್ಲಂಘಿಸಿದ್ದಕ್ಕೆ ನೀಡಲಾಗುವ ಶಿಕ್ಷೆಯ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ನೀಡುತ್ತದೆ.

ವಿಜಯನಗರ ಆಳ್ವಿಕೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶವು ಆಡಳಿತಾತ್ಮಕ ವಿಕೇಂದ್ರೀಕರಣಕ್ಕೆ ಒಳಪಟ್ಟಿತು. ವೇದಗಳ ಆಧಾರದ ಮೇಲೆ ರೂಪುಗೊಂಡಿದ್ದ ಧಾರ್ಮಿಕ ನೀತಿ ಸಂಹಿತೆಯು ವಿಜಯನಗರದ ನ್ಯಾಯಾಡಳಿತದ ಮೂಲ ತಳಹದಿಯಾಗಿತ್ತೆಂಬುದು ಗಮನೀಯವಾಗಿದೆ. ಈ ಸಾಮಾಜಿಕ ರಚನೆಯನ್ವಯ ಚಾತುರ್ವರ್ಣ ಆಧಾರವೇ ಮೂಲಭೂತ ನಿಯಮವಾಗಿದ್ದುದು ವ್ಯಕ್ತವಾಗುತ್ತದೆ. ಇದರ ಪ್ರಕಾರ ಉಡುಪಿ ಶಿವಳ್ಳಿಯ ಕ್ರಿ.ಶ. ಎಂಟನೆಯ ಶತಮಾನದ ಶಾಸನದ ಪ್ರಕಾರ 'ಶಿವಳ್ಳಿಯ ಬ್ರಾಹ್ಮಣ' ನ್ಯಾಯಾಡಳಿತದಲ್ಲಿ ಅತ್ಯಂತ ಪ್ರಭಾವೀ ಸ್ಥಾನವನ್ನು ಪಡೆದಿದ್ದನೆಂಬುದು ವ್ಯಕ್ತವಾಗುತ್ತದೆ. ಉದ್ಯಾವರದ ಕ್ರಿ.ಶ. ಎಂಟನೆಯ ಶತಮಾನದ ಶಾಸನವು ಶಿವಳ್ಳಿ, ವಾರಣಾಸಿ ಮತ್ತು ಬನವಾಸಿ ಕೇಂದ್ರಗಳನ್ನು ಯಾರಾದರೂ ನಾಶಮಾಡಲು ಪ್ರಯತ್ನಿಸಿದರೆ ಅಕ್ಷಮ್ಯವಾದ ಐದು ವಿಶಿಷ್ಟ ಪಾಪಗಳಿಗೆ ಗುರಿಯಾಗುವರೆಂದು ಎಚ್ಚರಿಸುತ್ತದೆ. ಈ ರೀತಿಯ ವ್ಯಕ್ತಿಗಳ ಬಗೆಗೆ ಎಚ್ಚರಿಸುವ ಶಾಸನಾಧಾರಗಳು ಹೇರಳವಾಗಿ ಕಂಡುಬರುತ್ತವೆ. ಪ್ರತಿಯೊಂದು ಪ್ರಾಂತ ಅಥವಾ ಆಡಳಿತ ಪ್ರದೇಶಗಳೂ ಅಂದಿನ ಧಾರ್ಮಿಕ ನಂಬಿಕೆಗಳ ಆಧಾರದ ಮೇಲೆ ಧಾರ್ಮಿಕ ನೀತಿಗಳನ್ನು ಹಾಗೂ ಧರ್ಮಶಾಸ್ತ್ರದ ಹಿನ್ನೆಲೆಯಲ್ಲಿ ಕಟ್ಟುಪಾಡುಗಳನ್ನು ವಿಧಿಸುವ ಪದ್ಧತಿಗಳನ್ನು ಹೊಂದಿದ್ದವು. ಇದಲ್ಲದೆ ಆಯಾ ಜಾತಿ ಅಥವಾ ಸಮುದಾಯದವರೂ ತಮ್ಮ ಪರಿವಿಧಿಗನುಗುಣವಾಗಿ ಕಾನೂನು ಕಟ್ಟುಪಾಡುಗಳನ್ನು ರೂಪಿಸಿಕೊಂಡು ತಮ್ಮ ತಮ್ಮ ಸಮಾಜದ ಹಿತರಕ್ಷಣೆಯನ್ನು ಮಾಡುತ್ತಿದ್ದುದು ಸಾಮಾನ್ಯವಾಗಿತ್ತು.

ಪ್ರಾಚೀನ ಕಾಲದಲ್ಲಿ ಆಧುನಿಕ ದೃಷ್ಟಿಯಲ್ಲಿ ಕಂಡುಬರುವ ನ್ಯಾಯಾಲಯಗಳ ಸ್ವರೂಪಗಳು ಕಂಡುಬರುವುದಿಲ್ಲ. ಆದರೆ ಹಲವು ಶಾಸನಗಳು ನಾಡಿನ ಆಡಳಿತ, ಗ್ರಾಮದ ಆಡಳಿತ ಹಾಗೂ ಪಂಚಾಯ್ತಿ ಆಡಳಿತವನ್ನು ಕುರಿತು ತಿಳಿಸುತ್ತವೆ. ಗ್ರಾಮಚಾವಡಿಯು ನ್ಯಾಯಸ್ಥಾನವಾಗಿದ್ದಿತು. ಇದು ಗ್ರಾಮಣಿ, ಮಧ್ಯಸ್ಥ, ಜನ್ನಿ, ಹೆಗ್ಡೆ ಮೊದಲಾದ ಪ್ರಮುಖರನ್ನೊಳಗೊಂಡಿತ್ತು. ಇವರು ಸಾಮಾನ್ಯ ವಿವಾದಗಳನ್ನು ನಿರ್ಣಯಿಸುತ್ತಿದ್ದರು. ಗ್ರಾಮಸಭೆಯು ಗ್ರಾಮದ ವಿವಾದಗಳನ್ನು ಪರಿಹರಿಸಿ ಗ್ರಾಮದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಿತು. ಗ್ರಾಮಸಭೆಯು ಆಧುನಿಕ ಕಾಲದ ಕಲೆಕ್ಟರ್ ಹಾಗೂ ಮ್ಯಾಜಿಸ್ಟ್ರೇಟರ ಕರ್ತವ್ಯಗಳನ್ನು ಪರಿಪಾಲಿಸುತ್ತಿದ್ದಿತು. ಪ್ರತಿಯೊಂದು ಸಮುದಾಯವು ಗುರಿಕಾರರ ನಾಯಕತ್ವದಲ್ಲಿ ತಮ್ಮದೇ ಸಭೆಯನ್ನು ಹೊಂದಿದ್ದು, ಅವರು ತಮ್ಮ ಸಮುದಾಯದೊಳಗೆ ನ್ಯಾಯಪರಿಪಾಲನೆ ಮಾಡಲು ಜವಾಬ್ದಾರರಾಗಿದ್ದರು. ಗ್ರಾಮ ಪಂಚಾಯಿತಿಯಲ್ಲಿ ಕೈಗೊಂಡ ತೀರ್ಮಾನಗಳು ಮತ್ತು ವಿಧಿಸಲಾದ ಶಿಕ್ಷೆಗಳ ಬಗ್ಗೆ ಅತೃಪ್ತಿಯಿದ್ದರೆ, 'ಸೀಮೆ' 'ನಾಡು' ಅಥವಾ 'ಮಾಗಣೆ' ಮಟ್ಟದಲ್ಲಿದ್ದ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಲು ಅವಕಾಶವಿತ್ತು. ನಾಡು ಅಥವಾ ಸೀಮೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ನಾಡಪ್ರಭುಗಳು ಈ ನ್ಯಾಯವಿತರಣಾ ಸಮಿತಿಯ ಅಧ್ಯಕ್ಷರಾಗಿರುತ್ತಿದ್ದರು. ಸೀಮೆಯ ಅಥವಾ ನಾಡಿನ ಕೇಂದ್ರಸ್ಥಾನದ ಚಾವಡಿಯಲ್ಲಿ ಈ ಸಮಿತಿ ಸಭೆ ಸಮಾವೇಶಗೊಂಡು ಪ್ರಮುಖ ವ್ಯಾಜ್ಯಗಳನ್ನು ಮತ್ತು ಸಮಸ್ಯೆಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ತೀರ್ಮಾನಗಳನ್ನು ನೀಡುತ್ತಿತ್ತು. ತಮ್ಮ ಆಡಳಿತ ಪರಿಧಿಯೊಳಗಿದ್ದ ಗ್ರಾಮಗಳ ಪಂಚಾಯಿತಿಯ ತೀರ್ಮಾನಗಳನ್ನು ಪರಿಶೀಲಿಸುವ ವಿಶೇಷ ಅಧಿಕಾರವು ಸೀಮೆ ಅಥವಾ ನಾಡು ನ್ಯಾಯವಿತರಣಾ ಸಮಿತಿಗೆ ಇದ್ದುದರ ಬಗೆಗೆ ಹಲವಾರು ಆಧಾರಗಳಿವೆ. ಈ ಎಲ್ಲ ವಿವಾದಗಳು ಸಾಮಾನ್ಯವಾಗಿ ಗ್ರಾಮಮಟ್ಟದಲ್ಲಿ ಅಥವಾ ನಾಡುಮಟ್ಟದಲ್ಲಿ ತೀರ್ಮಾನವಾಗುತ್ತಿದ್ದವು. ಆದರೆ ಯಾವುದಾದರೂ ಒಂದೊಂದು ಮೊಕದ್ದಮೆಯನ್ನು ಪ್ರಾಂತ್ಯ ಮಟ್ಟಕ್ಕೂ ತೆಗೆದುಕೊಂಡು ಹೋಗುತ್ತಿದ್ದ ಉದಾಹರಣೆಗಳು ಅತಿ ವಿರಳವಾಗಿ ಕಂಡುಬರುತ್ತಿದ್ದವು. ಮಧ್ಯಸ್ಥನ ಪಾತ್ರ ಈ ನ್ಯಾಯಾಲಯಗಳಲ್ಲಿ ಪ್ರಮುಖವಾಗಿದ್ದಿತು. ಆತನ ಕರ್ತವ್ಯ ಆಡಳಿತಕ್ಕಿಂತ ನ್ಯಾಯನಿರ್ಣಯ ಮತ್ತು ಮಧ್ಯಸ್ಥಿಕೆಯದಾಗಿತ್ತು. ಕೆಲವು ಪಟ್ಟಣ ಅಥವಾ ನಗರ ಕೇಂದ್ರಗಳಾದ ಬಾರಕೂರು, ಮಂಗಳೂರು, ಕಾರ್ಕಳ, ಬಸರೂರು, ವೇಣುಪುರ ಮುಂತಾದ ಪ್ರದೇಶಗಳಲ್ಲಿ ಕಾಲಕ್ರಮೇಣ ಅಸ್ತಿತ್ವಕ್ಕೆ ಬಂದ 'ಹಲರು' ಎಂದು ಕರೆಯಲಾಗುವ ಪೌರಾಡಳಿತ ಪರಿಷತ್ತು ನಗರದ ಸಾಮಾನ್ಯ ಆಡಳಿತಕ್ಕೆ ಸಂಬಂಧಪಟ್ಟ ಪ್ರಕರಣಗಳನ್ನು ನಿರ್ಣಯಿಸುತ್ತಿತ್ತು. ವ್ಯಾಪಾರಕ್ಕೆ ಸಂಬಂಧಪಟ್ಟ ವಿವಾದಗಳನ್ನು ವರ್ತಕ ಸಂಘಗಳನ್ನು ಪ್ರತಿನಿಧಿಸುವ ಸೆಟ್ಟಿಕಾರ ಸಂಘಗಳು ನಿರ್ಣಯಿಸುತ್ತಿದ್ದುದಾಗಿ ಹಾಗೂ ಗಂಭೀರ ಪ್ರಕರಣಗಳನ್ನು ಮಾತ್ರ ರಾಜನಲ್ಲಿ ಕೊಂಡೊಯ್ಯುತ್ತಿದ್ದುದಾಗಿ ತಿಳಿದುಬರುತ್ತದೆ. ವರ್ತಕ ಸಂಘಗಳ ಅಧಿಕಾರಿಯೇ ತೀರ್ಮಾನಗಳನ್ನು ನೀಡುತ್ತಿದ್ದುದು ಹಲವು ನಗರ ಕೇಂದ್ರಗಳಲ್ಲಿ ಇತ್ತೀಚಿನವರೆಗೂ ಕಂಡುಬರುತ್ತಿತ್ತು. ಇಂಥ ವ್ಯವಸ್ಥೆಯಲ್ಲಿ ನಖರ, ಸೆಟ್ಟಿಕಾರ, ನಖರಹಂಜಮಾನ ಮತ್ತು ಕೋಲಬಳಿಯ ಎಂಬ ಪ್ರಮುಖ ವ್ಯಾಪಾರಿ ಸಂಘಗಳು ಹೊಯ್ಸಳರ ಕಾಲದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಪ್ರಧಾನ ಪಾತ್ರ ವಹಿಸಿದ್ದವೆಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಹೊಯ್ಸಳರ ಶಾಸನಗಳಲ್ಲಿ ವಿವಿಧ

ವಾಣಿಜ್ಯ ಕೇಂದ್ರಗಳ ಸೆಟ್ಟಿಕಾರ ಸಂಘಗಳ ಸಂಖ್ಯಾಬಲವು ಉಕ್ತವಾಗಿರುತ್ತವೆ. ಉದಾ: ಬಾರಕೂರಿನ ಮೂರುಕೇರಿಯ ಮೂವರು ಸೆಟ್ಟಿಕಾರರು, ಮೂಡಬಿದರೆಯ ಎಂಟು ಮಂದಿ ಸೆಟ್ಟಿಕಾರರು ಇತ್ಯಾದಿ.

ವಿಜಯನಗರ ಕಾಲದ ಶಾಸನಗಳಲ್ಲಿ ಉಕ್ತವಾಗಿರುವ ಹುದ್ದೆಗಳಲ್ಲಿ 'ಮಧ್ಯಸ್ಥ' (ನ್ಯಾಯಾಧೀಶ) ಎಂಬ ಅಂಕಿತವು ಕಾಣಿಸಿಕೊಳ್ಳುತ್ತದೆ. ವಿವಿಧ ಅಧಿಕಾರಿಗಳುಳ್ಳ ಸಾಮ್ರಾಜ್ಯದ ಆಡಳಿತ ವರ್ಗವನ್ನು 'ಕಟ್ಟಳೆಯವರು' 'ಸಮಸ್ತ ಕಟ್ಟಳೆ'ಯವರು ಎಂದು ಕರೆಯಲ್ಪಡುತ್ತಿದ್ದುದು ಹಾಗೂ ರಾಜಕೀಯ ಅಪಾದನೆಯ ವಿಚಾರಣೆಯಲ್ಲಿ ಕಾರ್ಯಾಂಗವೇ ನ್ಯಾಯಾಲಯದ ಕಾರ್ಯನಿರ್ವಹಿಸುತ್ತಿದ್ದುದು ಕಂಡುಬರುವುದು. ಆದರೆ ತುಳುನಾಡಿನ ಶಾಸನಗಳಾವುದರಲ್ಲಿಯೂ ಮರಣದಂಡನೆಯ ಪ್ರಸ್ತಾಪವು ಕಂಡುಬರುವುದಿಲ್ಲ. ಗುರುತರ ಅಪರಾಧಗಳಿಗೂ ಲಘುವಾದ ದಂಡವನ್ನು ವಿಧಿಸಿದುದು ಕಂಡುಬರುತ್ತದೆ. ಉದಾಹರಣೆಗೆ ಕ್ರಿಶ. ೧೩೪೨ರಲ್ಲಿ ಮಲೆಯ ದಂಡನಾಯಕ ಬಾರಕೂರನ್ನು ಆಳುತ್ತಿದ್ದಾಗ ಬ್ರಾಹ್ಮಣನನ್ನು ಕೊಂದ ಅಪರಾಧಕ್ಕಾಗಿ ಗೋವಿಂದ ಮತ್ತು ಕೃಷ್ಣ ಎಂಬಿಬ್ಬರು ಅಪರಾಧಿಗಳಿಗೆ ತ್ರಿಮೂರ್ತಿದೇವರ ದೇವಾಲಯಕ್ಕೆ ದಾನ ನೀಡುವಂತೆ ತೀರ್ಪು ನೀಡಿದುದು ಶಾಸನಗಳಿಂದ ತಿಳಿದುಬರುತ್ತದೆ. ಸಾಮ್ರಾಜ್ಯದ ಅಧಿಕಾರಿಗಳಿಗೆ ಮತ್ತು ತುಳುನಾಡಿನ ತುಂಡರಸರಿಗೆ ವಿವಾದ ಉಂಟಾದಾಗ, ವರ್ತಕ ಸಂಘಗಳಿಗೆ ಮತ್ತು ಜನತೆಗೆ ವಿವಾದ ಉಂಟಾದಾಗ ಪ್ರಭಾವಶಾಲಿ ವ್ಯಕ್ತಿಗಳ ಅಥವಾ ಸಂಘಗಳ ಮಧ್ಯಸ್ಥಿಕೆಯ ಮೂಲಕ ಅಂಥ ವ್ಯಾಜ್ಯಗಳನ್ನು ತೀರ್ಮಾನಿಸುವುದು ವಾಡಿಕೆಯಾಗಿತ್ತೆಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಬಾರಕೂರು ರಾಜ್ಯದ ರಾಜ್ಯಪಾಲ ಅಣ್ಣಪ್ಪ ಒಡೆಯನು ಶಿವಳ್ಳಿ ಗ್ರಾಮವನ್ನು ಕ್ರಿಶ. ೧೪೭೬ರಲ್ಲಿ ದಾಳಿಮಾಡಿ ಆ ಊರನ್ನು ಸುಟ್ಟಾಗ ಬಾರಕೂರಿನ ವಿವಿಧ ವರ್ತಕ ಮತ್ತು ಜನಸಾಮಾನ್ಯರ ಸಂಘಗಳು ಮಧ್ಯಸ್ಥಿಕೆ ವಹಿಸಿ ಶಿವಳ್ಳಿ ಗ್ರಾಮದವರಿಗೆ ಉಂಟಾಗಿದ್ದ ಕಷ್ಟನಷ್ಟಗಳನ್ನು ಪರಿಹರಿಸಿದುದಾಗಿ ಶಾಸನಗಳಿಂದ ತಿಳಿದುಬರುತ್ತದೆ.

ಕ್ರಿಶ. ೧೪೯೯ರ ಕೊಡಿಯಾಲ್‌ಬೈಲು ಶಾಸನವು ಹಂಜಮಾನರ ಐದು ಮಸೀದಿಗಳನ್ನು (ಪಳ್ಳಿಗಳು) ಮಂಗಳೂರು ರಾಜ್ಯಪಾಲನು ನಾಶಗೊಳಿಸಿದ ವಾರ್ತೆಯನ್ನು ಕೇಳಿ, ಹಂಜಮಾನರಿಗೆ ಆದ ಅನ್ಯಾಯದ ಅಂಶವನ್ನು ವಿಚಾರಣೆ ನಡೆಸಲು ಅರಸನು ಬೈಚಪ್ಪ ದಂಡನಾಯಕನ ಮೂಲಕ ಆ ಮಸೀದಿಗಳನ್ನು ಮತ್ತೆ ಕಟ್ಟಿಸಿ, ಹಂಜಮಾನರಿಗೆ ಹಿಂದಿನ ಸ್ಥಾನಮಾನವನ್ನು ಕಲ್ಪಿಸಿದ್ದಲ್ಲದೆ ಪರಿಹಾರ ದಾನಗಳನ್ನು ಮಾಡಿದುದಾಗಿ ಶಾಸನಗಳಿಂದ ವ್ಯಕ್ತವಾಗುತ್ತದೆ.

ಕ್ರಿಶ. ೧೪೪೪ರಲ್ಲಿ , ಬಸರೂರಿನ ನಖರ ಸಂಘದ ಕೆಲವು ಸದಸ್ಯರು ತಿರುಮಹಡಮಳ ಮತ್ತು ಬೊಮ್ಮಸೆಟ್ಟಿ ಸಾವಿಗೆ ಕಾರಣವಾದಾಗ ಬಸರೂರ ಪಡುವಕೇರಿಯ ಸೆಟ್ಟಿಕಾರ ಸಂಘವು ವಿಚಾರಣೆ ನಡೆಸಿ, ಆಪಾದಿತರು ನಖರೇಶ್ವರ ಮಹಾದೇವರಿಗೆ ಅಪರಾಧಕ್ಕೆ ಪರಿಹಾರವಾಗಿ ಧನಕನಕಾದಿ ದಾನಗಳನ್ನು ನೀಡಬೇಕೆಂದು ತೀರ್ಪು ನೀಡಿದ್ದಾಗಿ ಶಾಸನಗಳಿಂದ ವ್ಯಕ್ತವಾಗುತ್ತದೆ.

ಕ್ರಿ. ಶ. ೧೪೬೮–೬೯ರಲ್ಲಿ ಮಂಗಳೂರು ರಾಜ್ಯದ ರಾಜ್ಯಪಾಲನಿಗೂ ಬಂಗವಾಡಿಯ ದೊರೆಯಾದ ಕಾಮಿರಾಯ ಅರಸನಿಗೂ ವೈಮನಸ್ಯ ಹುಟ್ಟಿದ್ದರ ಪರಿಣಾಮವಾಗಿ ವಿಠರಸನು ಕಾಮಿರಾಯ ಅರಸನಿಗೆ ಸೇರಿದ ಕೊಡಿಯಾಲ (ಮಂಗಳೂರು) ಮತ್ತು ನೀರುವಾರ ಗ್ರಾಮಗಳನ್ನು ಸುಟ್ಟನು. ಅದರ  ಪರಿಹಾರವಾಗಿ ಕಾಮಿರಾಯ ಮತ್ತು ಅವನ ಸಾಮಂತನಿದ್ದಿರಬಹುದಾದ ದೇವಣ್ಣ ಕೊಠರಿಯವರಿಗೆ ಉಜಿರೆ (ಪುತ್ತೂರು ತಾಲ್ಲೂಕಿನ ಉಜ್ರೆ) ಗ್ರಾಮವನ್ನು ಬಿಟ್ಟುಕೊಡಲಾಯಿತು. ಅಂದಿನಿಂದ ಆ ಗ್ರಾಮದವರು ತಮಗೇ ತೆರಿಗೆ ಸಂದಾಯ ಮಾಡಬೇಕೆಂದು ಕಾಮಿರಾಯ ಅರಸ ಹಾಗೂ ದೇವಣ್ಣ ಕೊಠರಿ ಹೊರಡಿಸಿದ ಆಜ್ಞೆಯು ಕ್ರಿಶ. ೧೪೬೯ರ ಉಜ್ರೆ ಶಾಸನದಿಂದ ತಿಳಿದುಬರುತ್ತದೆ.

ಬಸವರಾಜನ ಕೃತಿಯಾದ 'ಶಿವತತ್ತ್ವ ರತ್ನಾಕರ'ದಿಂದ ಸ್ವಲ್ಪಮಟ್ಟಿಗೆ ಕೆಳದಿ ನ್ಯಾಯದ ಬಗ್ಗೆ ತಿಳಿಯಬಹುದಾಗಿದೆ. ಕೆಲವು ಶಾಸನಗಳ ಆಕರದಿಂದ ರಾಜ್ಯ ಅನುಸರಿಸುತ್ತಿದ್ದ ಕೆಲವು ನಿರ್ದಿಷ್ಟ ಕಾನೂನುಗಳಿದ್ದವೆಂದು ಕಂಡುಬರುತ್ತದೆ. ಅದರಲ್ಲಿ ಪ್ರಮುಖವಾದುದು ಅಳಿಯ ಸಂತಾನವೆಂದು ಕರೆಯುವ ವಿಶಿಷ್ಟ ಕಾನೂನು, ಕೆಳದಿಯ ಕಲ್ಲುಕುಟಿಗರಲ್ಲಿ ಈ ಕಾನೂನು ಜಾರಿಯಲ್ಲಿದ್ದು, ಅದರ ಪ್ರಕಾರ ಮಹಿಳೆಯರ ಮೂಲಕ ಪುರುಷರಿಗೂ ಆಸ್ತಿ ಬರುತ್ತಿತ್ತು.

ಮಾತೃಮೂಲ ಪದ್ಧತಿಯ ಈ ಕಾನೂನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾರಿಯಲ್ಲಿದ್ದು ಅದನ್ನು "ಅಳಿಯಕಟ್ಟು" ಎಂದು ಕರೆಯಲಾಗುತ್ತದೆ. ಕೇರಳದ ಬಹುದೊಡ್ಡ ಜನ ಸಮುದಾಯದಲ್ಲಿ ಈ "ಕಟ್ಟು" ಆಚರಣೆ "ಮರುಮಕ್ಕತ್ತಾಯಂ" ಎಂಬ ಹೆಸರಿನಲ್ಲಿ

ಆಚರಣೆಯಲ್ಲಿದೆ. ಪ್ರಸಿದ್ಧ ಸಂಶೋಧಕ ದಿವಂಗತ ಮಂಜೇಶ್ವರ ಗೋವಿಂದ ಪೈಗಳು ತಿಳಿಸುವಂತೆ "ಅಳಿಯಕಟ್ಟು ದಕ್ಷಿಣ ಅಮೇರಿಕಾದ Hispaniola ಎಂಬ ಪ್ರದೇಶದ ಮೂಲ ನಿವಾಸಿಗಳಲ್ಲೂ New Granada ಮತ್ತು Bogota ಎಂಬ ಪ್ರದೇಶಗಳಲ್ಲಿಯೂ, ಉತ್ತರ ಅಮೇರಿಕಾದ Huron ಮತ್ತು Natchez ಎಂಬ ಜನರಲ್ಲಿಯೂ, ಆಫ್ರಿಕಾ ಖಂಡದ Niger ಎಂಬ ನದಿಯತ್ತಣ ನಿಗ್ರೋ ಜನರಲ್ಲಿಯೂ ಸುಮಾತ್ರ ದ್ವೀಪದ ಮಲಯ ಜನರ ಕೆಲ ಜಾತಿಗಳಲ್ಲಿಯೂ, ಸಿಂಹಳ ದ್ವೀಪದ Bintenneಯ ಪಕ್ಕದಲ್ಲಿರುವ ಒಂದು ಜಿಲ್ಲೆಯಲ್ಲಿಯೂ, ಭಾರತ ಭೂಮಿಯಲ್ಲೇ ಪೂರ್ವ ಬಂಗಾಳದ Sychet ಬೆಟ್ಟಗಳಲ್ಲಿರುವ ಕಾಸೀ (Tipperah) ಎಂಬ ಜನರಲ್ಲಿಯೂ, ತಿಪ್ಪೇರಾ (Kasi) ತ್ರಿಪುರ ದೇಶ ರಾಜಕುಟುಂಬದಲ್ಲಿಯೂ ಹಿಂದಿನಿಂದ ಬಳಕೆಯಲ್ಲಿತ್ತು ಮತ್ತು ಈಗಲೂ ಇದೆ. ಅದರಂತೆ ದಕ್ಷಿಣ ಕನ್ನಡದ ಅಳಿಯಕಟ್ಟಿನ ಮೂಲ ಕ್ರಿಸ್ತ ಪೂರ್ವದಷ್ಟು ಹಿಂದೆ ಸರಿಯುತ್ತದೆ. ಹೀಗಾಗಿ ಅವರ ಅಭಿಪ್ರಾಯದಂತೆ ಭೂತಾಳ ಪಾಂಡ್ಯನು ಈ ಕಟ್ಟಿಗೆ ಮೂಲನಲ್ಲ. ಆತನಿಂದ ಮೊದಲೇ ಆಚರಣೆಯಲ್ಲಿದ್ದ ಅಳಿಯಕಟ್ಟಿಗೆ ಅವನು ಒಂದು ನೀತಿ ನಿಯಮಗಳ ಚೌಕಟ್ಟನ್ನು ನೀಡಿ "ರಾಜಮುದ್ರೆ"ಯನ್ನು ಒತ್ತಿರಬೇಕು. ಹೀಗಾಗಿ ಜನರು ಇದನ್ನು 'ಭೂತಾಳಪಾಂಡ್ಯಕಟ್ಟು' ಎಂದು ಕರೆದಿರಬೇಕು.

ಅಳಿಯಕಟ್ಟಿನ ನಿಯಮದಂತೆ ಪರಂಪರಾಗತವಾಗಿ ಬಂದ ಭೂಮಿ–ಕಾಣಿ, ಧನ–ಕನಕ, ಮನೆ–ಮಠಗಳ ಹಕ್ಕು ಹೆಣ್ಣಿಗೆ, ಹೆಣ್ಣಿನ ಮಕ್ಕಳಿಗೆ, ಹೆಣ್ಣಿನ ಹೆಣ್ಣು ಮಕ್ಕಳ ಮಕ್ಕಳಿಗೆ–ಹೀಗೆ ಸಲ್ಲುತ್ತ ಹೋಗುತ್ತದೆ. ಹೆಣ್ಣಿನ ಗಂಡು ಮಕ್ಕಳಿಗೆ ಅವರ ಜೀವನಾಂತ್ಯದವರೆಗೆ ಮಾತ್ರ ಅನುಭವಿಸುವ ಹಕ್ಕು. ಗಂಡಿನ ಮರಣಾನಂತರ ಆತನ ಸ್ವಾಧೀನವಿದ್ದ ಕೌಟುಂಬಿಕ ಪರಂಪರಾಗತ ಭೂಮಿ ಮನೆಗಳು ಆತನ ಮಕ್ಕಳಿಗೆ ಸಲ್ಲುವುದಿಲ್ಲ; ಬದಲು ಅದು ಆತನ ಸೋದರಿಗೆ ಅಥವಾ ಸೋದರಿಯ ಮಕ್ಕಳಿಗೆ ಸಲ್ಲುತ್ತದೆ. ಗಂಡನ ಮರಣಾನಂತರ ಹೆಣ್ಣಿಗೆ ಆತನ ಕುಟುಂಬದ ಮನೆ ಭೂಮಿಗಳಲ್ಲಿ ಯಾವುದೇ ರೀತಿಯ ಹಕ್ಕು ಇರಲಿಲ್ಲ.

ಸ್ವಾತಂತ್ರ್ಯೋತ್ತರದಲ್ಲಿ ಹಿಂದೂ ಕಾನೂನು ಐವತ್ತರ ದಶಕದಲ್ಲಿ ಸಮಗ್ರವಾಗಿ ಕ್ರೋಡೀಕರಣಗೊಂಡಾಗ ಆಸ್ತಿ ಸೊತ್ತುಗಳಿಗೆ ಸಂಬಂಧಪಟ್ಟಂತೆ "ಹಿಂದೂ ಉತ್ತರಾಧಿತ್ವ ಅಧಿನಿಯಮ–೧೯೫೬" ಜಾರಿಗೆ ಬಂದು ಅಳಿಯ ಸಂತಾನ ಕಾನೂನಿನ ಹೆಚ್ಚಿನ ವಿಧಿಗಳನ್ನು ರದ್ದು ಮಾಡಿ, ಕೇವಲ ಕೆಲವೊಂದು ವಿಧಿಗಳನ್ನೂ ಉಳಿಸಿಕೊಳ್ಳಲಾಯಿತು. ಅದೇ ಅಧಿನಿಯಮಕ್ಕೆ ೨೦೦೫ರಲ್ಲಿ ಮತ್ತೊಂದು ತಿದ್ದುಪಡಿ ತಂದು ಅಳಿದುಳಿದ ಅಳಿಯ ಸಂತಾನ ಕಾನೂನಿನ ವಿಧಿಗಳನ್ನು ರದ್ದುಗೊಳಿಸಲಾಯಿತು. ಈ ಅಳಿಯಕಟ್ಟು ಕಾನೂನು ಶತಶತಮಾನಗಳಿಂದ ಇಪ್ಪತ್ತನೆಯ ಶತಮಾನದ ಮಧ್ಯ ಭಾಗದವರೆಗೆ ಅಂದರೆ ೧೭–೬–೧೯೫೬ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾರಿಯಲ್ಲಿದ್ದಿತು.ಹೀಗೆ ಶಾಸನಗಳ ಆಧಾರದ ಮೇಲೆ ಕಾನೂನು ಸುವ್ಯವಸ್ಥೆ ಮತ್ತು ನ್ಯಾಯಾಡಳಿತದ ಕಾಲಾನುಕಾಲ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ.

## ಆಧುನಿಕ ಕಾಲ

*ವಿಜಯನಗರದ ಕಾಲದಲ್ಲಿ ಕಂದಾಯಕ್ಕೆ ಸಂಬಂಧಪಟ್ಟ ಆಡಳಿತಾಧಿಕಾರಿಗಳೇ ಬಹುತೇಕ ದಂಡಾಧಿಕಾರಿಗಳಾಗಿದ್ದರ ಬಗ್ಗೆ ದಾಖಲೆಗಳಿವೆ. ವಿಜಯನಗರದ ಪತನದ ನಂತರ ಆಧುನಿಕ ಕಾಲದವರೆಗೂ ಇದೇ ಪದ್ಧತಿ ಮುಂದುವರಿದಿದ್ದಾಗಿ ತಿಳಿದುಬರುತ್ತದೆ. ಆದ್ದರಿಂದ ಆಧುನಿಕ ಕಾಲದವರೆಗೆ ಪ್ರತ್ಯೇಕ ನ್ಯಾಯಾಂಗವೆನ್ನುವುದು ರೂಪುಗೊಂಡಿರಲಿಲ್ಲ. ಇಂದಿನ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯು ೧೭೯೩ರಲ್ಲಿ ಬಂಗಾಳದಲ್ಲಿ ಜಾರಿಗೆ ಬಂದು, ೧೮೦೨ರಲ್ಲಿ ಈ ಪದ್ಧತಿಯನ್ನು ಮದರಾಸ್ ಪ್ರಾಂತ್ಯಕ್ಕೂ ವಿಸ್ತರಿಸಲಾಯಿತು. ೧೮೦೨ರಲ್ಲಿ ಕೋರ್ಟ್ ಆಫ್ ಫೌಜ್‌ದಾರಿ ಅದಾಲತ್, ಕೋರ್ಟ್ ಆಫ್ ಸರ್ಕ್ಯೂಟ್ (ಸಂಚಾರಿ ನ್ಯಾಯಾಲಯ) ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳನ್ನು ಮದರಾಸು ಪ್ರೆಸಿಡೆನ್ಸಿಯಲ್ಲಿ ಸ್ಥಾಪಿಸಲಾಯಿತು. ೧೮೦೨ರಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಕಚೇರಿಯನ್ನು ಜಿಲ್ಲೆಯ ಸಿವಿಲ್ ನ್ಯಾಯಾಧೀಶರ ವ್ಯಾಪ್ತಿಗೆ ತರಲಾಯಿತು. ೧೮೦೨ರಲ್ಲಿ ನಾಲ್ಕು ಸಂಚಾರಿ ನ್ಯಾಯಾಲಯಗಳು ಫೋರ್ಟ್ ಸೇಂಟ್ ಜಾರ್ಜ್ ಸರ್ಕಾರದಡಿ ರಚನೆಗೊಂಡವು. ೧೮೦೬ರಲ್ಲಿ ಈ ನ್ಯಾಯಾಲಯಗಳ ಪ್ರದೇಶದ ಅಧಿಕಾರ ವ್ಯಾಪ್ತಿಯಲ್ಲಿ ಮಾರ್ಪಾಡು ಮಾಡಿ, ಅವುಗಳನ್ನು ಉತ್ತರ, ಕೇಂದ್ರ, ದಕ್ಷಿಣ ಮತ್ತು ಪಶ್ಚಿಮ ವಿಭಾಗಗಳ ಅಥವಾ ಪ್ರಾಂತ್ಯಗಳ ಸಂಚಾರಿ ನ್ಯಾಯಾಲಯಗಳೆಂದು ಪದನಾಮೀಕರಿಸಲಾಯಿತು. ಅದರಂತೆ ಕೆನರಾ ಹಾಗೂ ಸೋಂದ ಪ್ರಾಂತ್ಯವು ಪಶ್ಚಿಮ ವಿಭಾಗದಡಿ ಬಂದಿತು.

೧೮೦೪ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯು ಪ್ರಭಾರಿ ದಂಡಾಧಿಕಾರಿಯಾಗಿದ್ದನು. ೧೮೦೬ರಲ್ಲಿ ಮದರಾಸು ಪ್ರೆಸಿಡೆನ್ಸಿಯ ಹಲವಾರು ಜಿಲ್ಲೆಗಳಲ್ಲಿ ಜಿಲ್ಲಾ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. ಅದೇ ವರ್ಷದಲ್ಲಿ ಕೆನರಾ ಮತ್ತು ಸೋಂದಾ ಪ್ರಾಂತಗಳಿಗಾಗಿ

*ಈ ಭಾಗವು 'ಪೊಲಿ ೨೦೦೦' ಗ್ರಂಥವನ್ನು ಆಧರಿಸಿದೆ.

ಜಿಲ್ಲಾ ನ್ಯಾಯಾಲಯಗಳನ್ನು ಮಂಗಳೂರಿನಲ್ಲಿ ಸ್ಥಾಪಿಸಲಾಯಿತು. ಕಚೇರಿಯ ಮುಖ್ಯಸ್ಥ ಬ್ರಿಟಿಷ್ ಅಧಿಕಾರಿಯಾಗಿದ್ದು, ಅವನ ಪದನಾಮವು ನ್ಯಾಯಾಧೀಶ ಹಾಗೂ ದಂಡಾಧಿಕಾರಿಯಾಗಿತ್ತು. ಜಿಲ್ಲಾಧಿಕಾರಿಯಲ್ಲಿದ್ದ ದಂಡಾಧಿಕಾರವನ್ನು ರದ್ದುಪಡಿಸಲಾಯಿತು. ಜಿಲ್ಲಾ ನ್ಯಾಯಾಧೀಶನಡಿ ಜೈಲು ಸಿಬ್ಬಂದಿ, ಮುಸ್ಲಿಂ ಕಾನೂನಿನಲ್ಲಿ ವಿವರಿಸಿದ ಮುಫ್ತಿ ಮತ್ತು ಹಿಂದೂ ಕಾನೂನಿನಲ್ಲಿ ವಿವರಿಸಲಾದ ಪಂಡಿತನು ಮತ್ತು ಹಲವಾರು ಲಿಪಿಕ ಹಾಗೂ ನ್ಯಾಯಿಕ ಅಧಿಕಾರಿಗಳು ಇದ್ದರು. ಜಿಲ್ಲಾ ನ್ಯಾಯಾಧೀಶನಿಗೆ ಇಂದಿನ ಸರ್ಕಾರಿ ವಕೀಲನ ಸೌಲಭ್ಯವನ್ನು ಒದಗಿಸಲಾಗಿದ್ದಿತು. ಜಿಲ್ಲಾ ನ್ಯಾಯಾಲಯದ ಅಧೀನದಲ್ಲಿ ನೋಂದಣಿ ನ್ಯಾಯಾಲಯ ಮತ್ತು ಅದರಡಿ ಸ್ಥಳೀಯ ಕಮಿಷನರ್ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿದ್ದವು. ಸರ್ಕಾರಿ ನೌಕರರೊಬ್ಬರನ್ನು 'ರಿಜಿಸ್ಟ್ರಾರ್'ರಾಗಿ ನೇಮಿಸಲಾಗುತ್ತಿತ್ತು. ಜಮೀನುದಾರರು, ಜಹಗೀರ್‌ದಾರರು, ವ್ಯಾಪಾರಿಗಳು, ಖಾಜಿ ಮೊದಲಾದ ಗಣ್ಯರಲ್ಲಿ ಒಬ್ಬರನ್ನು ಸ್ಥಳೀಯ ಕಮಿಷನರನ್ನಾಗಿ ಆಯ್ಕೆ ಮಾಡಲಾಗುತ್ತಿತ್ತು. ಅವರನ್ನು ಸದರ್ ಅಮೀನರೆಂದು ಕರೆಯಲಾಗುತ್ತಿತ್ತು. ೧೮೪೩ರಲ್ಲಿ ಅವರ ಪದನಾಮವನ್ನು ಪ್ರಧಾನ ಸದರ್ ಅಮೀನರೆಂದು ಬದಲಾಯಿಸಲಾಯಿತು. ಅವರು ಗೇಣಿದಾರರು ಹಾಗೂ ರೈತರ ಮೊಕದ್ದಮೆಗಳಲ್ಲಿ ಮುನ್ಸೀಫರಂತೆ ಕಾರ್ಯನಿರ್ವಹಿಸುತ್ತಿದ್ದರು.

೧೮೦೮ರ ಜುಲೈನಲ್ಲಿ ಜಿಲ್ಲಾ ನ್ಯಾಯಾಧೀಶರ ಕಚೇರಿಯನ್ನು ಮಂಗಳೂರಿನಿಂದ ಹೊನ್ನಾವರಕ್ಕೆ ಬದಲಾಯಿಸಲಾಯಿತು. ಆದರೆ ಪ್ರಮುಖ ವ್ಯಾಪಾರಿಗಳು ಮತ್ತು ಶ್ರೀಮಂತ ರೈತರ ಕೋರಿಕೆಯ ಮೇರೆಗೆ ೧೮೧೨ರಲ್ಲಿ ಮತ್ತೆ ಇದನ್ನು ಮಂಗಳೂರಿಗೆ ವರ್ಗಾಯಿಸಲಾಯಿತು. ೧೮೧೬ರಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಪೊಲೀಸರ ಕರ್ತವ್ಯಗಳು ಜಿಲ್ಲಾ ನ್ಯಾಯಾಧೀಶರಿಂದ ಜಿಲ್ಲಾಧಿಕಾರಿಗೆ ವರ್ಗಾವಣೆಯಾಯಿತು. ಅಲ್ಲದೆ ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಕ್ರಿಮಿನಲ್ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. ೧೮೧೬ರಲ್ಲಿ ತಾಲೂಕು ಕೇಂದ್ರಗಳಲ್ಲಿ ಜಿಲ್ಲಾ ಮುನ್ಸೀಫ್‌ರನ್ನು ನೇಮಕ ಮಾಡಲಾಯಿತು. ಅದೇ ವರ್ಷ ಗ್ರಾಮ ಮುಖ್ಯಸ್ಥರನ್ನು ಮುನ್ಸೀಫರನ್ನಾಗಿ ನೇಮಿಸಲಾಯಿತು.

೧೯ನೆಯ ಶತಮಾನದ ಪೂರ್ವಾರ್ಧದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ರಿಟಿಷ್ ನ್ಯಾಯಿಕ ಪದ್ಧತಿಯು ಪ್ರಾರಂಭವಾಗಿ ಬೆಳವಣಿಗೆಯನ್ನು ಕಂಡಿತು. ಅದು ವ್ಯವಸ್ಥಿತ ನ್ಯಾಯಿಕ ಅಧಿಕಾರವಾಗಿದ್ದು, ಅದರಲ್ಲಿ ವಿವಿಧ ವರ್ಗದ ಅಧಿಕಾರಿಗಳ ಕಾರ್ಯಚಟುವಟಿಕೆ ಮತ್ತು ಸವಲತ್ತುಗಳನ್ನು ವಿವರಿಸಲಾಗಿತ್ತು. ನ್ಯಾಯಾಂಗವು ವಸಾಹತು ನಿಯಂತ್ರಣ ಹಾಗೂ ನ್ಯಾಯಾಧಿಕಾರದ ಪ್ರಮುಖ ಯಂತ್ರವಾಗಿತ್ತು. ಬ್ರಿಟಿಷ್ ಪೂರ್ವ ಅವಧಿಯಲ್ಲಿ ಅನುಸರಿಸುತ್ತಿದ್ದ ಮಧ್ಯಸ್ಥಿಕೆಯ ತತ್ತ್ವವನ್ನು ಇದು ತೆರೆಮರೆಗೆ ಸರಿಸಿತು. ವಿವಾದಗಳನ್ನು ನಿರ್ಣಯಿಸುತ್ತಿದ್ದ ಮಧ್ಯಸ್ಥರು, ಜಮೀನ್ದಾರರು ಮತ್ತು ಗ್ರಾಮ ಮುಖ್ಯಸ್ಥರ ಪಾತ್ರವು ಗಣನೀಯವಾಗಿ ಕಡಿಮೆಯಾಯಿತು.

ಬ್ರಿಟಿಷರ ಈ ನ್ಯಾಯ ಪದ್ಧತಿಯು ವಿಳಂಬ ಸ್ವರೂಪದ್ದಾಗಿದ್ದು, ಸ್ಥಳೀಯರಿಗೆ ಅದು ದುಬಾರಿಯಾಗಿ ಕಂಡಿತು. ಶುಲ್ಕಗಳು, ಸ್ಟಾಂಪುಗಳು, ಜುಲ್ಮಾನೆಗಳು ಜನರಿಗೆ ಹೊಸದಾಗಿದ್ದು ಅದನ್ನು ಒಪ್ಪಲು ಅವರು ಸಿದ್ಧರಿರಲಿಲ್ಲ. ಆದರೆ, ಸ್ಥಳೀಯರ ವಿರೋಧವನ್ನು ಬಲವಂತವಾಗಿ ದಮನಗೊಳಿಸಲಾಯಿತು. ಸ್ಥಳೀಯ ಮುಖಂಡರನ್ನು ದಸ್ತಗಿರಿ ಮಾಡಿ, ನ್ಯಾಯಾಲಯಗಳಲ್ಲಿ ಅವರ ವಿರುದ್ಧ ಕಾನೂನು ವಿಚಾರಣೆ ನಡೆಸಲಾಯಿತು. ನ್ಯಾಯಾಡಳಿತದಲ್ಲಿ ಅನ್ಯಾಯ, ವಿಳಂಬಕಾರಿ ನೀತಿ ಮತ್ತು ಭ್ರಷ್ಟತೆಯಿದ್ದುದು ಆಡಳಿತಾತ್ಮಕ ದಾಖಲೆಗಳಲ್ಲಿ ರುಜುವಾತಾಗಿದೆ. ಮನ್ರೊ ಸ್ಥಳೀಯರಿಂದಲೇ ಸುವ್ಯವಸ್ಥಿತ ನ್ಯಾಯ ದೊರಕಿಸಿಕೊಡಲು ಸಾಧ್ಯವೆಂಬುದನ್ನು ತಿಳಿಸಿದ್ದಾಗ್ಯೂ, ಸ್ಥಳೀಯರನ್ನು ನ್ಯಾಯಾಂಗದ ಉನ್ನತ ಹುದ್ದೆಗಳಲ್ಲಿ ನೇಮಕ ಮಾಡಿಕೊಳ್ಳಲಿಲ್ಲ. ೧೮೨೭ರಲ್ಲಿ ಸ್ಥಳೀಯ ಕ್ರಿಮಿನಲ್ ಮತ್ತು ಸಿವಿಲ್ ನ್ಯಾಯಾಲಯಗಳನ್ನು ಸ್ಥಾಪಿಸಿದರೂ ಯುರೋಪಿಯನ್ನರ ಮೇಲೆ ಸ್ಥಳೀಯರಿಗೆ ಅಧಿಕಾರವಿರಲಿಲ್ಲವೆಂಬುದು ಹಿಂದಿನ ಆಡಳಿತ ದಾಖಲೆಗಳಿಂದ ತಿಳಿದುಬರುತ್ತದೆ.

ನ್ಯಾಯಾಂಗ ಮತ್ತು ಕಾರ್ಯಾಂಗದ ಪ್ರತ್ಯೇಕೀಕರಣಕ್ಕೆ ಮೊದಲು, ದಕ್ಷಿಣ ಕನ್ನಡ ಜಿಲ್ಲೆಯ ನ್ಯಾಯಾಂಗ ಇಲಾಖೆಯನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಜಿಲ್ಲಾ ನ್ಯಾಯಾಧೀಶರ ಅಧೀನದಲ್ಲಿದ್ದ ಸಿವಿಲ್ ನ್ಯಾಯಾಂಗ ವಿಭಾಗ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರ ನಿಯಂತ್ರಣದಲ್ಲಿದ್ದ ಕ್ರಿಮಿನಲ್ ನ್ಯಾಯಾಂಗ ವಿಭಾಗ. ಜಿಲ್ಲಾ ಮುನ್ಸೀಫ್ ನ್ಯಾಯಾಲಯ ಮತ್ತು ಸ್ಟೇಷನರಿ ಉಪ ಮ್ಯಾಜಿಸ್ಟ್ರೇಟರ ನ್ಯಾಯಾಲಯ ಅನುಕ್ರಮವಾಗಿ ಮೇಲಿನ ಎರಡು ನ್ಯಾಯಾಲಯಗಳಿಗೆ ಸೇರಿದವುಗಳಾಗಿದ್ದವು. ಸಿವಿಲ್ ನ್ಯಾಯಾಂಗ ವಿಭಾಗವು ಜಿಲ್ಲಾ ನ್ಯಾಯಾಧೀಶರ ಅಧೀನದಲ್ಲೂ, ಕ್ರಿಮಿನಲ್ ನ್ಯಾಯಾಂಗ ವಿಭಾಗವು ಜಿಲ್ಲಾ ಮ್ಯಾಜಿಸ್ಟ್ರೇಟರ ಅಧೀನದಲ್ಲೂ ಇತ್ತು. ಸಿವಿಲ್ ನ್ಯಾಯಕ್ಕೆ ಸಂಬಂಧಿಸಿದಂತೆ ಒಂದು ಜಿಲ್ಲಾ ನ್ಯಾಯಾಲಯ ಮತ್ತು ಒಂದು ಅಧೀನ ನ್ಯಾಯಾಧೀಶರ ನ್ಯಾಯಾಲಯ ಮಂಗಳೂರಲ್ಲೂ ಮತ್ತು ಆರು ಜಿಲ್ಲಾ ಮುನ್ಸೀಫ್ ನ್ಯಾಯಾಲಯಗಳು ಮಂಗಳೂರು, ಕಾಸರಗೋಡು, ಕುಂದಾಪುರ, ಉಡುಪಿ, ಕಾರ್ಕಳ ಮತ್ತು ಪುತ್ತೂರಿನಲ್ಲಿದ್ದವು.

ಉಡುಪಿ ತಾಲೂಕಿಗೆ ಸಂಬಂಧಪಟ್ಟಂತೆ ೧೮೪೬ರಲ್ಲೇ ಜಿಲ್ಲಾ ಮುನ್ಸೀಫ್ ನ್ಯಾಯಾಲಯವು ಬಾರ್ಕೂರಿನಲ್ಲಿ ಕಾರ್ಯ ಮಾಡುತ್ತಿತ್ತು. ೧೮೮೨ರಲ್ಲಿ ಕುಂದಾಪುರದಲ್ಲಿ ಮುನ್ಸೀಫ್ ನ್ಯಾಯಾಲಯ ಸ್ಥಾಪಿಸಲ್ಪಟ್ಟಿತು.

೧೮೯೮ರಲ್ಲಿ ಬಾರ್ಕೂರಿನಿಂದ ಉಡುಪಿಗೆ ಜಿಲ್ಲಾ ಮುನ್ಸೀಫ್ ನ್ಯಾಯಾಲಯವನ್ನು ವರ್ಗಾಯಿಸಲಾಯಿತು. ಉಡುಪಿ ತಾಲೂಕಿನ ಉತ್ತರದ ೩೩ ಹಳ್ಳಿಗಳು ಮತ್ತು ಪೂರ್ವದ ೧೪ ಹಳ್ಳಿಗಳ ಹೊರತಾಗಿ ಉಳಿದಂತೆ ಸಂಪೂರ್ಣ ಕಂದಾಯ ವಿಭಾಗವು ಉಡುಪಿ ಜಿಲ್ಲಾ ಮುನ್ಸೀಫ್ ನ್ಯಾಯಾಲಯದ ಕಾರ್ಯವ್ಯಾಪ್ತಿಗೆ ಸೇರಿದ್ದಿತು. ಹಾಗೆಯೇ ಕುಂದಾಪುರದ ಕಂದಾಯ ವಿಭಾಗ ಮತ್ತು ಉಡುಪಿ ತಾಲೂಕಿನ ೩೩ ಹಳ್ಳಿಗಳು ಕುಂದಾಪುರದ ಮುನ್ಸೀಫ್ ನ್ಯಾಯಾಲಯದ ವ್ಯಾಪ್ತಿಗೂ, ಮಂಗಳೂರು ತಾಲೂಕಿನ ೪೨ ಹಳ್ಳಿಗಳು ಹಾಗೂ ಉಡುಪಿ ತಾಲೂಕಿನ ೧೪ ಹಳ್ಳಿಗಳು ಕಾರ್ಕಳದ ಮುನ್ಸೀಫ್ ನ್ಯಾಯಾಲಯದ ಕಾರ್ಯವ್ಯಾಪ್ತಿಗೂ ಒಳಪಟ್ಟಿದ್ದವು. ಕ್ರಿಮಿನಲ್ ನ್ಯಾಯಕ್ಕೆ ಸಂಬಂಧಪಟ್ಟಂತೆ, ಮಂಗಳೂರಿನಲ್ಲಿ ಒಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಪುತ್ತೂರಿನಲ್ಲೊಂದು ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಕಾರ್ಕಳದಲ್ಲೊಂದು ಮೊದಲ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಮಂಗಳೂರು, ಕುಂದಾಪುರ, ಉಡುಪಿ, ಪುತ್ತೂರು ಮತ್ತು ಬಂಟ್ವಾಳಗಳಲ್ಲಿ ಐದು ಸಬ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಿದ್ದವು. ಸ್ವಾತಂತ್ರ್ಯ ಪೂರ್ವದಲ್ಲಿ, ತಾಲೂಕಿನಲ್ಲಿನ ಗ್ರಾಮಗಳಲ್ಲಿ ಪಟೇಲರು ಮ್ಯಾಜಿಸ್ಟ್ರೇಟರಂತೆ ನ್ಯಾಯ ತೀರ್ಮಾನ ಮಾಡುತ್ತಿದ್ದ ವ್ಯವಸ್ಥೆಯೂ ಇತ್ತು. ಐನೂರು ರೂ. ಮೌಲ್ಯದವರೆಗಿನ ದಾವೆಗಳನ್ನು ಪಟೇಲರೇ ಗ್ರಾಮ ಚಾವಡಿಯಲ್ಲಿ ತೀರ್ಮಾನಿಸುತ್ತಿದ್ದರು. ಪಟೇಲರಿಗೆ ದಂಡಾಧಿಕಾರ ಇರಲಿಲ್ಲವಾದ್ದರಿಂದ ರಾಜಿಯ ಮೂಲಕವೇ ಎಲ್ಲ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು. ನೀರು, ಆಸ್ತಿ, ದಾರಿ ವಿವಾದಗಳಂಥವು ಪಟೇಲರ ವ್ಯಾಪ್ತಿಗೆ ಬರುತ್ತಿದ್ದವು.

ಗ್ರಾಮ ನ್ಯಾಯಾಲಯದ ಈ ಪರಿಕಲ್ಪನೆಯಲ್ಲಿ ದೇವಸ್ಥಾನ, ಗ್ರಾಮದ ಚಾವಡಿ, ಅರಳೀಕಟ್ಟೆ ಅಥವಾ ಪಂಚಾಯಿತಿ ಕಟ್ಟೆ–ಇವು ನ್ಯಾಯಾಲಯಗಳಾಗಿದ್ದವು. ಪಟೇಲರ ತೀರ್ಪು ಅಂತಿಮವಾಗಿರಲಿಲ್ಲ. ಈ ತೀರ್ಪನ್ನು ಪ್ರಶ್ನಿಸಿ ಮುನ್ಸೀಫ್ ನ್ಯಾಯಾಲಯ ಮತ್ತು ಸಂಬಂಧಪಟ್ಟ ಇತರ ಮೇಲಿನ ನ್ಯಾಯಾಲಯಗಳಿಗೆ ಅಪೀಲು ಹೋಗಬಹುದಿತ್ತು. ನ್ಯಾಯಾಲಯಗಳಲ್ಲಿ ಪ್ರಾದೇಶಿಕ ಭಾಷೆ ಕನ್ನಡದಲ್ಲಿ ನ್ಯಾಯನಿರ್ಣಯಗಳು ಇರುತ್ತಿದ್ದವು ಎಂಬುದು ಗಮನಾರ್ಹ. ೧೯೫೫ರ ವರೆಗೆ ಕುಂದಾಪುರದ ನ್ಯಾಯಾಲಯದಲ್ಲಿ ಲಿಖಿತ ವ್ಯವಹಾರಗಳು (ದಾವೆ, ಮಧ್ಯಂತಕ್ಕೆ ಅರ್ಜಿ ಇತ್ಯಾದಿ) ಕನ್ನಡದಲ್ಲಿದ್ದವೆಂಬುದಕ್ಕೆ ಹಿಂದಿನ ದಾಖಲೆಗಳು ಸಾಕ್ಷಿಯಾಗಿವೆ. ]

ಪಟೇಲ ಮುಂತಾದ ಆನುವಂಶಿಕ ಹುದ್ದೆಗಳು ರದ್ದಾದಂತೆ ಈ ವ್ಯವಸ್ಥೆಯು ನಿಂತಿತು. ೧೯೫೬ರಲ್ಲಿ ಹೊಸ ಮೈಸೂರು ರಾಜ್ಯ ಉದಯವಾದಾಗ ೧೯೫೧ರ ಮೈಸೂರು ಅಧಿನಿಯಮವನ್ನು ಜಾರಿಗೆ ತರಲಾಯಿತು. ಅದರಂತೆ ಪ್ರತಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ನ್ಯಾಯಾಲಯ, ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ತಾಲೂಕು ಮಟ್ಟದಲ್ಲಿ ಮುನ್ಸೀಫ್ ನ್ಯಾಯಾಲಯ, ಪ್ರಥಮ ದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು.

ಅದರಂತೆ ಮಂಗಳೂರಿನಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ನ್ಯಾಯಾಧೀಶರ ನೇಮಕವನ್ನು ರಾಜ್ಯಪಾಲರು ಉಚ್ಚ ನ್ಯಾಯಾಲಯದೊಂದಿಗೆ ಚರ್ಚಿಸಿ ಮಾಡುತ್ತಾರೆ. ಉಳಿದ ನ್ಯಾಯ ಖಾತೆಯ ಅಧಿಕಾರಿಗಳನ್ನು ರಾಜ್ಯಪಾಲರು ಲೋಕಸೇವಾ ಆಯೋಗದ ಹಾಗೂ ಉಚ್ಚ ನ್ಯಾಯಾಲಯದೊಡನೆ ಸಮಾಲೋಚಿಸಿ ಮಾಡುತ್ತಾರೆ. ಜಿಲ್ಲಾ ಹಾಗೂ ಇತರ ನ್ಯಾಯಾಲಯಗಳ ಮೇಲೆ ಉಚ್ಚ ನ್ಯಾಯಾಲಯವು ನಿಯಂತ್ರಣ ಹೊಂದಿರುತ್ತದೆ.

೧೯೬೪ರ ಜುಲೈನಲ್ಲಿ ಹೊಸ ಮೈಸೂರು ಸಿವಿಲ್ ಅಧಿನಿಯಮವನ್ನು ಜಾರಿಗೆ ತಂದು ಏಕರೂಪದ ವೃಂದ (ಕೇಡರ್) ಹೊಂದಿರುವ ನ್ಯಾಯಾಧೀಶರ ಹುದ್ದೆಯನ್ನು ಸೃಜಿಸಲಾಯಿತು. ಮದರಾಸು ಪ್ರಾಂತದಡಿಯಿಂದ ಮೈಸೂರು ವ್ಯಾಪ್ತಿಗೆ ಬಂದ ಬೇರೆ ಬೇರೆ ಶ್ರೇಣಿ ನ್ಯಾಯಾಧೀಶರನ್ನು ಈ ಅಧಿನಿಯಮದಡಿ ಏಕರೂಪ ಶ್ರೇಣಿಯ ವ್ಯವಸ್ಥೆಗೆ ತರಲಾಯಿತು.

ಜಿಲ್ಲಾ ನ್ಯಾಯಾಲಯದ ಅಧೀನದಲ್ಲಿ ತಾಲೂಕು ಮಟ್ಟದ ಉಪ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತವೆ. ಸಿವಿಲ್ ವ್ಯಾಜ್ಯಗಳನ್ನು ಬಗೆಹರಿಸಲು ಸಿವಿಲ್ ನ್ಯಾಯಾಧೀಶರು, ಕ್ರಿಮಿನಲ್ ವ್ಯಾಜ್ಯಗಳನ್ನು ಬಗೆಹರಿಸಲು ಸೆಶನ್ ನ್ಯಾಯಾಧೀಶರು ಇರುತ್ತಾರೆ. ತಾಲೂಕುಮಟ್ಟದಲ್ಲಿ ಸಿವಿಲ್ ವ್ಯಾಜ್ಯಗಳ ವಿಚಾರಣೆಗಾಗಿ ಮುನ್ಸೀಫರು, ಕ್ರಿಮಿನಲ್ ವ್ಯಾಜ್ಯಗಳ ವಿಚಾರಣೆಗಾಗಿ ಮ್ಯಾಜಿಸ್ಟ್ರೇಟರು ಇರುತ್ತಾರೆ. ಕ್ರಿಮಿನಲ್

ಮೊಕದ್ದಮೆಗಳಿಗೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯವಿದ್ದರೂ, ತಾಲೂಕಿನ ತಹಸೀಲ್ದಾರ್ ಮತ್ತು ಉಪ ವಿಭಾಗಾಧಿಕಾರಿ ಕೆಲವು ಪ್ರಕರಣ(ಸೆಕ್ಷನ್)ಗಳಲ್ಲಿ ಕೆಲವು ಅಧಿಕಾರಗಳನ್ನು ಹೊಂದಿರುತ್ತಾರೆ. ಹಾಗೆಯೇ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಯು ದಂಡಾಧಿಕಾರಿಯಾಗಿರುತ್ತಾರೆ.

ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ (೨೦೦೪ರಲ್ಲಿದ್ದಂತೆ) ನ್ಯಾಯಾಲಯಗಳ ಪಟ್ಟಿಯನ್ನು ನೀಡಿದೆ.

೧) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು,ದಕ್ಷಿಣ ಕನ್ನಡ

೨) ೧ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೩) ೨ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೪) ೩ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೫) ತ್ವರಿತ ವಿಲೇವಾರಿ ನ್ಯಾಯಾಲಯ–I, ಮಂಗಳೂರು, ದಕ್ಷಿಣ ಕನ್ನಡ

೬) ಕಾರ್ಮಿಕ ನ್ಯಾಯಾಲಯ, ಮಂಗಳೂರು ,ದಕ್ಷಿಣ ಕನ್ನಡ

೭) ಪ್ರಧಾನ ಸಿವಿಲ್ ನ್ಯಾಯಾಧೀಶರು (ಹಿರಿಯ) ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ (ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್) ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೮) ೧ನೆಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಹಿರಿಯ) ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಮಂಗಳೂರು, ದಕ್ಷಿಣ ಕನ್ನಡ

೯) ೨ನೆಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಹಿರಿಯ) ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೧೦) ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಪುತ್ತೂರು

೧೧) ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೧೨) ೧ನೆಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೧೩) ೨ನೆಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೧೪) ೩ನೆಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೧೫) ೪ನೆಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೧೬) ೫ನೆಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೧೭) ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ–II ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೧೮) ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ–III ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೧೯) ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ–IV ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೨೦) ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ–V ನ್ಯಾಯಾಲಯ, ಮಂಗಳೂರು, ದಕ್ಷಿಣ ಕನ್ನಡ

೨೧) ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಕಿರಿಯ), ಬಂಟ್ವಾಳ

೨೨) ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಂಟ್ವಾಳ

೨೩) ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿರಿಯ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಪುತ್ತೂರು

೨೪) ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಪುತ್ತೂರು

೨೫) ಸಿವಿಲ್ ನ್ಯಾಯಾಧೀಶರು (ಕಿರಿಯ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

೨೬) ಸಿವಿಲ್ ನ್ಯಾಯಾಧೀಶರು (ಕಿರಿಯ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ

೨೭) * ಸಿವಿಲ್ ನ್ಯಾಯಾಧೀಶರು (ಕಿರಿಯ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಬಿದ್ರಿ

**ಜಿಲ್ಲಾ ನ್ಯಾಯಾಲಯ:** ಮಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಜಿಲ್ಲಾ ನ್ಯಾಯಾಧೀಶರು ಜಿಲ್ಲೆಯ ಉನ್ನತ ನ್ಯಾಯಾಧಿಕಾರಿಯಾಗಿರುತ್ತಾರೆ. ಇವರು ಜಿಲ್ಲೆಯಲ್ಲಿನ ನ್ಯಾಯಾಡಳಿತದ ಮುಖ್ಯಸ್ಥರಾಗಿದ್ದು, ತಮ್ಮ ಅಧೀನ ನ್ಯಾಯಾಲಯಗಳನ್ನು ನಿಯತವಾಗಿ ತಪಾಸಣೆ ನಡೆಸುವುದಲ್ಲದೆ, ಅದರ ಕೆಲಸ ಕಾರ್ಯಗಳ ಮೇಲ್ವಿಚಾರಣೆಯನ್ನೂ ನಡೆಸುತ್ತಾರೆ. ಜಿಲ್ಲಾ ನ್ಯಾಯಾಲಯಕ್ಕೆ ರೂ. ೧,೦೦,೦೦೦/–ದವರೆಗಿನ ಮೌಲ್ಯದ ಸಿವಿಲ್ ಮೊಕದ್ದಮೆಯನ್ನು ಅಪೀಲು ಮಾಡುವ ಅಧಿಕಾರವಿರುತ್ತದೆ.

ಸ್ವಾಮ್ಯ ಅಧಿನಿಯಮ ೧೯೫೭ (ಕಾಪಿರೈಟ್ ಆ್ಯಕ್ಟ್), ವ್ಯಾಪಾರ ಮತ್ತು ವಾಣಿಜ್ಯ ಅಧಿನಿಯಮ ೧೯೫೭ (ಟ್ರೇಡ್ ಅಂಡ್ ಮರ್ಕೆಂಡೈಸ್ ಆ್ಯಕ್ಟ್) ಪಿ ಅಂಡ್ ಎಸ್. ಸಿ. (ಲಘುವ್ಯಾಜ್ಯ) ಮೊಕದ್ದಮೆಗಳ ಮೇಲಿನ ದಾವೆಗಳು ಹಾಗೂ ಸರ್ಕಾರವು ಕಾಲಕಾಲಕ್ಕೆ ಮಾಡುವ ಅಧಿಸೂಚನೆಯ ಮೇರೆಗೆ ಇದರ ವ್ಯಾಪ್ತಿಗೆ ತರುವಂಥ ಇತರ ಮೊಕದ್ದಮೆಗಳು ಈ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತವೆ.

**ಸತ್ರ ನ್ಯಾಯಾಲಯ, ಮಂಗಳೂರು**

೧) ದಂಡ ಪ್ರಕ್ರಿಯಾ ಸಂಹಿತೆಯ ತಿದ್ದುಪಡಿಯಂತೆ, ಭಾರತೀಯ ದಂಡ ಸಂಹಿತೆಯಲ್ಲಿ ಹೇಳಿರುವ ಏಳು ವರ್ಷಗಳಿಗಿಂತ ಅಧಿಕ ಶಿಕ್ಷೆ ವಿಧಿಸಬಹುದಾದ ಕಾನೂನು ಉಲ್ಲಂಘನೆಯ ವ್ಯಾಜ್ಯಗಳು

೨) ಸರ್ಕಾರವು ಕಾಲಕಾಲಕ್ಕೆ ಮಾಡಿದ ಅಧಿಸೂಚನೆಯ ಪ್ರಕಾರ ವ್ಯಾಪ್ತಿಗೆ ಒಳಪಡುವಂಥ ಮೊಕದ್ದಮೆಗಳು–ಉದಾಹರಣೆಗೆ: ಗಾಂಜಾ, ಪೆಟ್ರೋಲಿಯಂ, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಮೇಲಿನ ದೌರ್ಜನ್ಯ ಮುಂತಾದವು.

೩) ಅಧೀನ ನ್ಯಾಯಾಲಯಗಳ ತೀರ್ಪಿನ ಮೇಲಿನ ಅಪೀಲುಗಳು ಮತ್ತು ಪುನರ್ ಪರಿಶೀಲನಾ ಅರ್ಜಿಗಳು–ಈ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತವೆ.

**ಸಿವಿಲ್ ನ್ಯಾಯಾಲಯ: (ಹಿರಿಯ ವಿಭಾಗ)**

**ಸಿವಿಲ್**: ೧) ೫೦,೦೦೦/– ರೂಪಾಯಿಗಳಿಗೆ ಮೇಲ್ಪಟ್ಟ ಎಲ್ಲ ರೀತಿಯ ಸಿವಿಲ್ ಮೊಕದ್ದಮೆಗಳು ಅಂದರೆ ಮೂಲ ದಾವೆಗಳು ಹಾಗೂ ೨೫,೦೦೦/– ರೂಪಾಯಿಗಳಿಗಿಂತ ಕಡಿಮೆಯ ಸಿವಿಲ್ ಲಘು ದಾವೆಗಳು. ೨) ಸಿವಿಲ್ ನ್ಯಾಯಾಲಯ (ಕಿರಿಯ ವಿಭಾಗ)ದ

ಅಪೀಲು ಹಾಗೂ ಪುನರ್ ಪರಿಶೀಲನಾ ಅರ್ಜಿಗಳು. ಮನೆಬಾಡಿಗೆ ನಿಯಂತ್ರಣ ಕಾನೂನಿನ ವ್ಯಾಜ್ಯಗಳನ್ನು ಹೊರತುಪಡಿಸಿ, ಕರ್ನಾಟಕ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವಂಥ ಅಧಿಸೂಚನೆಯ ವ್ಯಾಪ್ತಿಗೆ ಒಳಪಡುವಂಥ ಮೊಕದ್ದಮೆಗಳು–ಉದಾ: ಭೂಸ್ವಾಧೀನ ದಾವೆಗಳು, ಪೋಷಕರ ನೇಮಕಾತಿ ಬಗೆಗಿನ ದಾವೆಗಳು, ಇತ್ಯಾದಿ.

**ಕ್ರಿಮಿನಲ್:** ಭಾರತೀಯ ದಂಡ ಸಂಹಿತೆಯ ಪ್ರಕಾರ ಮೂರು ವರ್ಷಕ್ಕಿಂತ ಅಧಿಕ ಹಾಗೂ ಏಳು ವರ್ಷಗಳವರೆಗೆ ಶಿಕ್ಷೆ ವಿಧಿಸಬಹುದಾದ ಕ್ರಿಮಿನಲ್ ವ್ಯಾಜ್ಯಗಳು ಈ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತವೆ.

**ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು** ೧) ಭಾರತೀಯ ದಂಡ ಸಂಹಿತೆಯ ಪ್ರಕಾರ ಮೂರು ವರ್ಷಗಳವರೆಗೆ ಶಿಕ್ಷೆ ವಿಧಿಸಬಹುದಾದ ವ್ಯಾಜ್ಯಗಳು. ೨) ಸರ್ಕಾರವು ಕಾಲಕಾಲಕ್ಕೆ ಮಾಡಿದ ಅಧಿಸೂಚನೆಯ ಮೇರೆಗೆ ವ್ಯಾಪ್ತಿಗೆ ಒಳಪಡಿಸುವ ದಾವೆಗಳು. ಈ ನ್ಯಾಯಾಲಯದ ವ್ಯಾಪ್ತಿಯಡಿ ಬರುತ್ತವೆ.

**ಸಿವಿಲ್ ನ್ಯಾಯಾಲಯ (ಕಿರಿಯ ವಿಭಾಗ)**

ರೂಪಾಯಿ ೫೦,೦೦೦/–ಕ್ಕಿಂತ ಕೆಳಗಿನ ಮತ್ತು ೨೫,೦೦೦/– ರೂಪಾಯಿಗಿಂತ ಮೇಲ್ಪಟ್ಟ ಸಿವಿಲ್ ಮೊಕದ್ದಮೆಗಳು, ಮನೆ ಬಾಡಿಗೆ ನಿಯಂತ್ರಣ ಪ್ರಕರಣಗಳು ಈ ನ್ಯಾಯಾಲಯದ ವ್ಯಾಪ್ತಿಯಡಿ ಬರುತ್ತವೆ.

೧೯೯೦–೨೦೦೪ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿನ ದಾವೆಗಳ ವಿವರ

**ಕೋಷ್ಟಕ ೧೦.೧ : ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು**

**ಸಿವಿಲ್ ದಾವೆಗಳು (ಮೂಲ ದಾವೆ, ಪಿ ಅಂಡ್ ಎಸ್.ಸಿ.,ಎ. ಎಮ್.ಎ, ಅಮಲ್ಜಾರಿ ದಾವೆ, ಆರ್.ಆರ್.ಪಿ.)**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|
| ೧೯೯೦ | ೧೯೨೪ | ೧೨೩೮ | ೩೯೦೨೮೯ | ೩೧೧೬೫೩೯ |
| ೧೯೯೧ | ೧೨೮೬ | ೧೨೩೦ | ೭೫೪೪೩೧ | ೧೧೬೩೦೨೩ |
| ೧೯೯೨ | ೧೬೬೪ | ೭೨೮ | ೯೮೬೫೧೭ | ೭೬೩೪೪೫೮ |
| ೧೯೯೩ | ೧೮೨೨ | ೧೦೩೮ | ೯೪೦೩೬೨ | ೮೯೪೪೨೩೪ |
| ೧೯೯೪ | ೨೦೯೪ | ೧೧೯೯ | ೯೯೭೫೪೧ | ೧೦೧೬೩೨೧ |
| ೧೯೯೫ | ೨೦೧೪ | ೧೭೩೦ | ೯೮೯೬೫೧ | ೧೨೦೨೨೧೦೧ |
| ೧೯೯೬ | ೧೮೭೨ | ೧೦೧೫ | ೮೬೦೫೨೧ | ೮೪೬೭೮೫೮ |
| ೧೯೯೭ | ೧೯೩೨ | ೧೧೭೯ | ೯೦೧೩೪೧ | ೯೯೮೪೪೫೨ |
| ೧೯೯೮ | ೨೫೮೧ | ೨೧೨೩ | ೯೩೪೫೬೫ | ೮೩೯೬೯೭೮ |
| ೧೯೯೯ | ೩೧೩೧ | ೧೧೩೨ | ೯೭೮೫೨೧ | ೧೧೦೧೧೬೧೭ |
| ೨೦೦೦ | ೨೭೬೭ | ೧೨೧೭ | ೮೫೯೫೨೧ | ೧೧೫೨೫೮೫೦ |
| ೨೦೦೧ | ೩೯೩೫ | ೧೩೨೭ | ೨೬೭೮೧೦ | ೬೪೯೧೩೩೯೦ |
| ೨೦೦೨ | ೧೧೭೧ | ೯೮೪ | ೨೦೭೩೭೯ | ೧೧೮೦೦೬೬೧ |
| ೨೦೦೩ | ೨೧೦೯ | ೧೩೫೫ | ೧೧೮೦೦೬೬೧ | ೨೦೭೩೭೯ |
| ೨೦೦೪ | ೧೩೫೬ | ೧೧೫೬ | ೧೬೧೯೯೯೬ | ೧೯೨೫೭೯೪೪ |

**ಆಧಾರ** : ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು.

**ಕೋಷ್ಟಕ ೧೦.೨ : ಜಿಲ್ಲಾ ನ್ಯಾಯಾಲಯ, ಮಂಗಳೂರು**
**(ಕ್ರಿಮಿನಲ್ ಮೊಕದ್ದಮೆಗಳು, ಸೆಷನ್ಸ್, ವಿಶೇಷ ಅಪೀಲು ಹಾಗೂ ರಿವಿಜನ್ ದಾವೆಗಳು)**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು |
|---|---|---|
| ೧೯೯೦ | ೫೭೮ | ೪೦೯ |
| ೧೯೯೧ | ೬೫೩ | ೪೭೫ |
| ೧೯೯೨ | ೬೭೪ | ೪೧೭ |
| ೧೯೯೩ | ೭೩೯ | ೫೭೮ |
| ೧೯೯೪ | ೫೭೪ | ೩೯೭ |
| ೧೯೯೫ | ೮೭೪ | ೯೦೭ |
| ೧೯೯೬ | ೧೧೮೨ | ೧೦೩೧ |
| ೧೯೯೭ | ೧೧೮೯ | ೧೨೩೯ |
| ೧೯೯೮ | ೯೯೭ | ೯೫೭ |
| ೧೯೯೯ | ೧೫೮೧ | ೧೪೮೬ |
| ೨೦೦೦ | ೧೫೯೧ | ೧೦೭೬ |
| ೨೦೦೧ | ೧೬೯೬ | ೧೨೪೭ |
| ೨೦೦೨ | ೯೭೨ | ೯೦೩ |
| ೨೦೦೩ | ೧೧೧೪ | ೧೧೦೭ |
| ೨೦೦೪ | ೧೩೫೫ | ೧೧೫೬ |

**ಆಧಾರ** : ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು

**ಕೋಷ್ಟಕ ೧೦.೩ : ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮಂಗಳೂರು**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|
| ೧೯೯೦ | ೯೩೯ | ೬೬೯ | ೭೯೫೬೧೨೦–೦೦ | ೫೭೨೯೧೯೫–೦೦ |
| ೧೯೯೧ | ೬೪೫ | ೫೯೭ | ೫೯೯೩೨೯೧–೦೦ | ೫೬೩೧೮೦೯–೦೦ |
| ೧೯೯೨ | ೬೦೭ | ೫೭೫ | ೫೮೫೧೨೨೧–೦೦ | ೫೫೩೪೧೯೦–೦೦ |
| ೧೯೯೩ | ೬೩೬ | ೫೭೫ | ೫೮೦೬೪೩೩–೦೦ | ೫೦೧೫೨೫೭–೦೦ |
| ೧೯೯೪ | ೬೧೫ | ೫೫೯ | ೫೯೧೬೨೧೦–೦೦ | ೫೨೧೦೧೨೭–೦೦ |
| ೧೯೯೫ | ೬೨೩ | ೫೨೯ | ೫೧೧೫೯೯೫–೦೦ | ೫೦೨೨೧೮೭–೦೦ |
| ೧೯೯೬ | ೭೦೧ | ೬೨೫ | ೬೯೯೮೨೪೧–೦೦ | ೫೮೩೧೨೦೧–೦೦ |
| ೧೯೯೭ | ೬೮೮ | ೫೬೭ | ೫೮೧೨೯೧೯–೦೦ | ೫೫೪೪೧೯೫–೦೦ |
| ೧೯೯೮ | ೯೭೭ | ೨೮೭ | ೪೪೩೯೯೮೮–೯೦ | ೩೯೦೬೮೫೦–೦೦ |
| ೧೯೯೯ | ೬೩೭ | ೬೩೯ | ೬೦೯೮೮೯೫–೦೧ | ೫೨೬೭೨೫೫–೦೦ |
| ೨೦೦೦ | ೪೮೨ | ೪೬೧ | ೩೯೮೨೫೦–೬೦ | ೪೮೯೫೬೦೭–೦೦ |
| ೨೦೦೧ | ೪೯೮ | ೪೯೩ | ೫೬೨೮೫೨೭–೭೮ | ೫೦೧೫೬೩೬–೦೦ |
| ೨೦೦೨ | ೫೨೧ | ೭೭೩ | ೭೦೩೮೫೦೦–೬೦ | ೪೮೯೫೬೦೭–೦೦ |
| ೨೦೦೩ | ೫೭೭ | ೭೪೩ | ೨೭೮೧೩೮೭–೫೦ | ೪೧೮೭೯೭೫–೦೦ |
| ೨೦೦೪ | ೫೭೧ | ೭೪೦ | ೨೫೪೦೧೬೭–೦೦ | ೩೧೦೫೭೬೧–೦೦ |

**ಆಧಾರ**: ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು

**ಕೋಷ್ಟಕ ೧೦.೪ : ಬಾಲಾಪರಾಧಿಗಳ ನ್ಯಾಯಾಲಯ, ಮಂಗಳೂರು**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಬಾಕಿ ದಾವೆಗಳು |
|---|---|---|---|
| ೧೯೯೦ | ೩೮ | ೨೦ | ೧೮ |
| ೧೯೯೧ | ೩೬ | ೧೮ | ೧೮ |
| ೧೯೯೨ | ೩೦ | ೧೨ | ೧೮ |
| ೧೯೯೩ | ೨೯ | ೧೫ | ೧೪ |
| ೧೯೯೪ | ೩೭ | ೧೧ | ೨೬ |
| ೧೯೯೫ | ೨೨ | ೭ | ೧೫ |
| ೧೯೯೬ | ೩೩ | ೧೩ | ೨೦ |
| ೧೯೯೭ | ೨೭ | ೯ | ೧೮ |
| ೧೯೯೮ | ೩೧ | ೭ | ೨೪ |
| ೧೯೯೯ | ೪೦ | ೧೫ | ೨೫ |
| ೨೦೦೦ | ೩೫ | ೧೧ | ೨೪ |
| ೨೦೦೧ | ೩೨ | ೧೨ | ೨೦ |
| ೨೦೦೨ | ೨೬ | ೧೨ | ೧೪ |
| ೨೦೦೩ | ೩೨ | ೯ | ೨೩ |
| ೨೦೦೪ | ** | – | – |

** ಈ ನ್ಯಾಯಾಲಯದ ಕಚೇರಿ ಜ್ಞಾಪನ ಸಂಖ್ಯೆ ೫೪೦೨/೦೪ ದಿನಾಂಕ:೨೯–೯–೨೦೦೪ರ ಮೇರೆಗೆ ಬಾಲಾಪರಾಧಿ ನ್ಯಾಯಮಂಡಳಿ, ಶಿವಮೊಗ್ಗ– ಇಲ್ಲಿಗೆ ಎಲ್ಲ ಬಾಲಾಪರಾಧದ ಪ್ರಕರಣಗಳನ್ನು ವರ್ಗಾಯಿಸಲಾಗಿದೆ. (**ಆಧಾರ**: ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು)

**ಕೋಷ್ಟಕ ೧೦.೫ : ಮುನ್ಸೀಫ್ ನ್ಯಾಯಾಲಯ, ಮಂಗಳೂರು, ಅಧಿಕಾರ ವ್ಯಾಪ್ತಿಗೆ ಬರುವ ಗ್ರಾಮಗಳ ಸಂಖ್ಯೆ:೮೭**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|
| ೧೯೯೦ | ೧೬೪೫ | ೩೮೩ | ೨೨೭೮೪೧೫–೯೦ | ೧೬೩೫೬೦೬–೮೦ |
| ೧೯೯೧ | ೧೫೦೧ | ೩೦೭ | ೧೯೪೦೦೨೫–೫೦ | ೧೮೨೬೧೩೮–೦೦ |
| ೧೯೯೨ | ೧೪೦೫ | ೨೨೪ | ೧೪೨೨೧೬೦–೧೦ | ೧೮೮೩೭೦೭–೦೦ |
| ೧೯೯೩ | ೧೦೮೭ | ೩೨೧ | ೭೯೧೬೪೬–೦೦ | ೨೧೮೫೫೯೦–೦೦ |
| ೧೯೯೪ | ೧೦೧೩ | ೩೪೮ | ೪೦೦೪೮೭–೬೫ | ೨೪೫೩೦೦೯–೦೦ |
| ೧೯೯೫ | ೯೨೫ | ೪೩೦ | ೩೨೩೦೪೮–೮೫ | ೨೯೬೬೯೨೬–೦೦ |
| ೧೯೯೬ | ೭೧೮ | ೩೧೨ | ೩೦೧೧೩೧–೯೦ | ೨೯೪೨೫೭೯–೦೦ |
| ೧೯೯೭ | ೪೯೯ | ೪೦೪ | ೫೦೨೯೬೭–೦೦ | ೩೫೦೦೬೭೦–೦೦ |
| ೧೯೯೮ | ೫೦೭ | ೩೪೬ | ೬೫೧೩೧೮–೫೦ | ೩೬೧೩೯೧೮–೦೦ |
| ೧೯೯೯ | ೭೨೨ | ೨೫೦ | ೪೪೩೨೯೮–೦೦ | ೩೪೦೯೭೩೭–೦೦ |
| ೨೦೦೦ | ೮೯೮ | ೩೫೭ | ೧೦೧೪೮೬–೦೦ | ೩೫೯೦೪೭೧–೦೦ |
| ೨೦೦೧ | ೧೨೨೧ | ೨೭೪ | ೩೯೮೭೨೫–೦೦ | ೪೪೦೩೪೩೦–೦೦ |
| ೨೦೦೨ | ೧೦೦೯ | ೨೧೫ | ೩೪೮೨೫೧–೦೦ | ೪೭೭೩೪೪೦–೦೦ |
| ೨೦೦೩ | ೬೪೯ | ೧೯೫ | ೫೭೫೨೨೦–೦೦ | ೫೩೧೭೮೫೯–೦೦ |
| ೨೦೦೪ | ೭೦೫ | ೨೨೨ | ೫೬೬೬೪–೦೦ | ೪೬೧೨೬೯೫–೦೦ |

**ಆಧಾರ**: ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು

**ಕೋಷ್ಟಕ ೧೦.೬ : ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಮಂಗಳೂರು. ಕ್ರಿಮಿನಲ್ ಮೊಕದ್ದಮೆಗಳು**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|
| ೧೯೯೦ | ೧೩೯೧೧ | ೨೦೬೮೨ | ೪೪೭೮೫ | ೭೮೦೪೪೫-೦೦ |
| ೧೯೯೧ | ೧೬೩೧೭ | ೧೮೦೭೦ | ೫೩೭೭೯೬ | ೯೩೪೦೪೦-೦೦ |
| ೧೯೯೨ | ೧೯೧೩೮ | ೧೧೭೬೨ | ೬೪೧೮೬೬ | ೯೯೫೨೮೩-೦೦ |
| ೧೯೯೩ | ೧೧೪೦೦ | ೯೧೭೮ | ೭೮೨೭೫೨ | ೧೧೧೭೦೭೪-೦೦ |
| ೧೯೯೪ | ೮೦೨೨ | ೭೮೮೦ | ೧೯೭೪೧೩೦ | ೧೩೩೧೩೫೧-೦೦ |
| ೧೯೯೫ | ೭೪೩೦ | ೧೨೮೩೯ | ೨೧೭೯೩೦೦ | ೧೫೧೪೧೨೬-೦೦ |
| ೧೯೯೬ | ೧೭೯೫೮ | ೨೭೮೫೦ | ೨೫೧೭೨೬೩ | ೧೬೦೩೨೭೫-೦೦ |
| ೧೯೯೭ | ೨೪೫೨೭ | ೧೯೧೯೭ | ೩೧೪೦೮೪೨ | ೨೦೬೫೭೯೧-೦೦ |
| ೧೯೯೮ | ೨೯೯೬೧ | ೩೪೩೨೪ | ೨೭೭೨೬೫೨ | ೨೦೩೧೦೫೬-೦೦ |
| ೧೯೯೯ | ೨೮೩೬೬ | ೨೯೧೧೪ | ೩೪೩೩೦೫೮ | ೨೫೩೮೨೯೩-೦೦ |
| ೨೦೦೦ | ೨೮೯೧೧ | ೩೧೬೮೨ | ೨೭೦೧೬೦೯ | ೨೫೦೭೦೮೧-೦೦ |
| ೨೦೦೧ | ೨೪೨೫೯ | ೩೬೯೦೦ | ೨೩೭೬೮೦೬ | ೨೫೫೮೩೯೨-೦೦ |
| | ೧೨೭೦೮ | ೩೩೫೨ | ೧೧೯೦೧ | ೯೧೮೩೦೮-೦೦ |
| ೨೦೦೨ | ೧೨೪೭೯ | ೧೭೫೫೮ | ೧೬೭೭೨ | ೧೬೫೫೪-೦೦ |
| | ೧೯೪೪೨ | ೧೭೩೭೬ | ೧೬೨೯೦೮ | ೧೧೮೩೧೩೭-೦೦ |
| ೨೦೦೩ | ೬೫೧೪ | ೫೫೮೯ | ೧೮ | ೧೯೦೨೭-೦೦ |
| | ೧೬೧೪೬ | ೧೪೯೯೧ | ೧೨೩೬೯೪೫ | ೧೦೭೪೩೪೩-೦೦ |
| | ೪೩೬೪ | ೩೮೪ | ೧೩೮೫೦ | ೩೪೩೩೨೪-೦೦ |
| ೨೦೦೪ | ೫೩೬೪ | ೭೨೩೮ | ೧೪೩೯೫೫೯ | ೨೭೭೪೫೦೧-೦೦ |
| | ೧೬೬೪೫ | ೧೪೪೯೩ | ೧೫೪೧೭೧೬ | ೧೦೬೫೫೨೮-೦೦ |
| | ೨೯೭೪ | ೧೪೭೩ | ೨೭೦೪೮ | ೧೨೩೦೬೮೩-೦೦ |

**ಆಧಾರ**: ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು
(ವಿ.ಸೂ:ಕಳೆದ ಸಾಲಿನಲ್ಲಿನ ಬಾಕಿ ಪ್ರಕರಣಗಳು ಸೇರಿರುವುದರಿಂದ ದಾಖಲಾದ ದಾವೆಗಳಿಗಿಂತ ತೀರ್ಮಾನವಾದ ದಾವೆಗಳ ಸಂಖ್ಯೆ ಹೆಚ್ಚಾಗಿದೆ)

**ಕೋಷ್ಟಕ ೧೦.೭ : ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಕಿರಿಯ ವಿಭಾಗ) ಬಂಟ್ವಾಳ ಅಧಿಕಾರ ವ್ಯಾಪ್ತಿಗೆ ಬರುವ ಗ್ರಾಮಗಳ ಸಂಖ್ಯೆ:೭೭**
**ಮೂಲದಾವೆ, ಹೆಚ್.ಆರ್.ಸಿ., ಅಮಲ್ಜಾರಿ ದಾವೆ, ಪಿ ಅಂಡ್ ಎಸ್.ಸಿ., ಎಫ್.ಡಿ.ಪಿ., ಲಘು ವ್ಯಾಜ್ಯ, ಕೇವೇಟ್**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. |
|---|---|---|---|
| ೧ | ೨ | ೩ | ೪ |
| ೧೯೯೦ | ೯೬೯ | ೯೧೦ | ೨೧೧೫೫–೦೦ |
| ೧೯೯೧ | ೧೧೨೩ | ೭೪೨ | ೩೭೯೧೨–೫೦ |
| ೧೯೯೨ | ೧೧೬೭ | ೯೩೩ | ೪೯೧೦೫–೦೦ |
| ೧೯೯೩ | ೧೩೦೮ | ೯೮೧ | ೭೦೯೮೯–೮೫ |
| ೧೯೯೪ | ೧೦೦೭ | ೯೨೭ | ೧೧೭೯೪೬–೮೦ |
| ೧೯೯೫ | ೧೧೦೭ | ೧೦೯೭ | ೧೦೬೦೦೧–೨೫ |
| ೧೯೯೬ | ೮೭೧ | ೧೨೦೨ | ೧೦೬೪೯೭–೨೭ |
| ೧೯೯೭ | ೫೩೭ | ೯೩೬ | ೧೧೫೬೯೩–೬೫ |
| ೧೯೯೮ | ೩೭೪ | ೫೭೧ | ೮೮೧೮೨–೦೦ |
| ೧೯೯೯ | ೩೦೧ | ೪೩೬ | ೭೩೯೭೨–೦೦ |
| ೨೦೦೦ | ೨೮೩ | ೪೦೯ | ೧೫೭೦೮೪–೦೦ |
| ೨೦೦೧ | ೨೬೧ | ೩೪೦ | ೬೨೦೮೦–೦೦ |
| ೨೦೦೨ | ೨೨೬ | ೨೯೯ | ೭೨೭೮೯–೦೦ |
| ೨೦೦೩ | ೩೧೫ | ೪೨೪ | ೭೩೩೯೪–೫೦ |
| ೨೦೦೪ | ೪೩೮ | ೫೪೮ | ೭೩೧೮೭–೦೦ |

**ಆಧಾರ** : ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು.

**ಕೋಷ್ಟಕ ೧೦.೮ : ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ ಮತ್ತು ಜೆ.ಎಂ.ಎಫ್.ಸಿ. ಬಂಟ್ವಾಳ)**
**ಅಧಿಕಾರ ವ್ಯಾಪ್ತಿಗೆ ಬರುವ ಗ್ರಾಮಗಳ ಸಂಖ್ಯೆ : ೭೯**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|
| ೧ | ೨ | ೩ | ೪ | ೫ |
| ೧೯೯೦ | ೨೦೪೦ | ೧೧೧೮ | ೨೪೪೮ | ೨೧೪೬ |
| ೧೯೯೧ | ೨೦೨೧ | ೧೬೭೫ | ೨೯೦೬ | ೨೩೮೬ |
| ೧೯೯೨ | ೨೭೭೩ | ೧೯೦೬ | ೩೪೧೨ | ೨೮೭೪ |
| ೧೯೯೩ | ೨೬೨೯ | ೧೯೯೯ | ೩೭೦೫ | ೨೭೩೮ |
| ೧೯೯೪ | ೨೫೦೬ | ೧೫೪೯ | ೩೧೧೨ | ೨೦೧೪ |
| ೧೯೯೫ | ೧೮೨೭ | ೧೧೩೬ | ೨೧೦೫ | ೨೬೨೮ |
| ೧೯೯೬ | ೨೨೨೧ | ೧೯೬೧ | ೨೫೬೧ | ೨೮೪೧ |
| ೧೯೯೭ | ೨೧೯೨ | ೨೦೦೧ | ೨೩೪೩ | ೧೭೩೮ |

.......ಮುಂದುವರಿದಿದೆ

| ೧ | ೨ | ೩ | ೪ | ೫ |
|---|---|---|---|---|
| ೧೯೯೮ | ೨೩೩೮ | ೧೯೦೯ | ೨೩೭೩ | ೧೬೨೪ |
| ೧೯೯೯ | ೨೩೨೦ | ೧೪೯೪ | ೨೦೧೩ | ೧೨೫೮ |
| ೨೦೦೦ | ೧೦೧೧ | ೧೨೯೬ | ೧೩೯೦ | ೧೦೮೮ |
| ೨೦೦೧ | ೧೬೨೭ | ೧೦೮೭ | ೧೭೦೦ | ೧೧೭೯ |
| ೨೦೦೨ | ೧೭೨೧ | ೧೧೦೩ | ೧೮೪೨ | ೧೩೬೭ |
| ೨೦೦೩ | ೧೯೦೨ | ೧೮೫೩ | ೨೩೦೨ | ೧೯೦೬ |
| ೨೦೦೪ | ೧೯೨೭ | ೧೨೩೭ | ೨೯೦೫ | ೨೫೯೬ |

**ಆಧಾರ** : ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು

**ಕೋಷ್ಟಕ ೧೦.೯ : ಪ್ರಧಾನ ಸಿವಿಲ್ ನ್ಯಾಯಾಲಯ, ಪುತ್ತೂರು, ಅಧಿಕಾರ ವ್ಯಾಪ್ತಿಗೆ ಬರುವ ಗ್ರಾಮಗಳ ಸಂಖ್ಯೆ:೬೮**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ |
|---|---|---|---|---|
| ೧೯೯೧ | ೩೧೭ | ೩೦೨ | ೧೫ | – |
| ೧೯೯೨ | ೩೫೦ | ೨೪೦ | ೧೧೦ | – |
| ೧೯೯೩ | ೩೬೭ | ೨೩೦ | ೧೩೭ | – |
| ೧೯೯೪ | ೨೨೦ | ೧೯೧ | ೨೯ | – |
| ೧೯೯೫ | ೧೧೦ | ೫೪೪ | – | ೪೩೮ |
| ೧೯೯೬ | ೧೪೩ | ೧೬೩ | – | ೨೦ |
| ೧೯೯೭ | ೧೫೧ | ೪೨ | – | ೧೦೯ |
| ೧೯೯೮ | ೧೩೭ | ೧೦೯ | ೨೮ | – |
| ೧೯೯೯ | ೧೯೨ | ೬೭ | ೯೫ | – |
| ೨೦೦೦ | ೧೪೨ | ೮೬ | ೫೬ | – |
| ೨೦೦೧ | ೧೩೮ | ೧೧೧ | ೨೭ | – |
| ೨೦೦೨ | ೧೭೮ | ೯೦ | ೮೮ | – |
| ೨೦೦೩ | ೧೨೭ | ೮೬ | ೪೧ | – |
| ೨೦೦೪ | ೧೪೦ | ೨೧೩ | – | ೭೩ |
| ೨೦೦೫ | ೧೯೬ | ೧೯೧ | ೫ | – |

**ಆಧಾರ** : ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು

**ಕೋಷ್ಟಕ ೧೦.೧೦ : ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಪುತ್ತೂರು, ಅಧಿಕಾರ ವ್ಯಾಪ್ತಿಗೆ ಬರುವ ಗ್ರಾಮಗಳ ಸಂಖ್ಯೆ:೬೮**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ |
|---|---|---|---|---|
| ೧೯೯೦ | ೩೮೪೨ | ೩೭೯೧ | ೫೧ | – |
| ೧೯೯೧ | ೨೧೮೩ | ೨೪೯೪ | – | ೩೧೧ |
| ೧೯೯೨ | ೨೯೩೯ | ೨೮೪೦ | ೯೯ | – |
| ೧೯೯೩ | ೩೫೦೮ | ೩೪೧೮ | ೯೦ | – |
| ೧೯೯೪ | ೩೩೧೪ | ೩೨೧೬ | ೯೮ | – |
| ೧೯೯೫ | ೩೬೦೭ | ೩೪೦೬ | ೨೦೧ | – |
| ೧೯೯೬ | ೩೩೮೧ | ೩೪೨೬ | – | ೪೫ |
| ೧೯೯೭ | ೨೯೧೨ | ೨೬೯೯ | – | ೨೧೩ |
| ೧೯೯೮ | ೩೨೭೩ | ೩೨೧೮ | – | ೫೫ |
| ೧೯೯೯ | ೪೪೯೨ | ೪೪೩೭ | – | ೫೫ |
| ೨೦೦೦ | ೩೪೦೭ | ೩೩೮೭ | ೨೦ | – |
| ೨೦೦೧ | ೨೫೫೩ | ೨೭೩೫ | – | ೧೮೨ |
| ೨೦೦೨ | ೨೨೫೮ | ೧೮೬೭ | ೩೯೧ | – |
| ೨೦೦೩ | ೨೪೯೩ | ೧೮೬೩ | ೬೩೦ | – |
| ೨೦೦೪ | ೨೨೩೪ | ೨೨೭೮ | – | ೪೪ |

**ಆಧಾರ** : ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು

**ಕೋಷ್ಟಕ ೧೦.೧೧ : ಮುನ್ಸೀಫ್ ನ್ಯಾಯಾಲಯ, ಬೆಳ್ತಂಗಡಿ**
**ಅಧಿಕಾರ ವ್ಯಾಪ್ತಿಗೆ ಬರುವ ಗ್ರಾಮಗಳ ಸಂಖ್ಯೆ:ಬೆಳ್ತಂಗಡಿ, ತಾಲೂಕಿನ ೮೧ ಗ್ರಾಮಗಳು**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|
| ೧೯೯೦ | ೩೮೪ | ೬೦೦ | ೧೪೧೪೧೨–೦೦ | ೫೭೨೦೨೭ |
| ೧೯೯೧ | ೫೨೭ | ೫೪೯ | ೧೮೮೧೩೮–೦೦ | ೯೫೦೧೨೮ |
| ೧೯೯೨ | ೪೬೬ | ೩೪೭ | ೨೬೪೧೭೭–೦೦ | ೧೦೮೭೨೫೫ |
| ೧೯೯೩ | ೫೮೯ | ೩೨೩ | ೧೧೨೪೮೭–೦೦ | ೧೨೪೮೦೮೫ |
| ೧೯೯೪ | ೪೬೭ | ೩೪೩ | ೯೯೬೭೬–೦೦ | ೧೨೯೧೩೫೯ |
| ೧೯೯೫ | ೪೩೪ | ೩೯೪ | ೧೦೨೫೦೯–೦೦ | ೧೪೯೪೨೯೩ |
| ೧೯೯೬ | ೫೦೧ | ೩೮೪ | ೮೩೮೫೭–೦೦ | ೧೫೨೪೨೫೬ |
| ೧೯೯೭ | ೩೩೫ | ೨೨೭ | ೫೪೯೬೪–೦೦ | ೧೭೧೫೯೭೩ |
| ೧೯೯೮ | ೩೭೭ | ೩೪೯ | ೮೫೦೮೮–೦೦ | ೨೨೫೫೩೮೬ |
| ೧೯೯೯ | ೬೦೬ | ೫೦೭ | ೮೩೩೩೧–೦೦ | ೩೧೯೫೫೭೩ |
| ೨೦೦೦ | ೪೬೫ | ೩೧೬ | ೧೦೯೬೫೩–೦೦ | ೨೫೪೦೯೮೩ |
| ೨೦೦೧ | ೩೮೦ | ೫೭೬ | ೭೫೬೫೧–೦೦ | ೨೭೫೫೫೮೩ |
| ೨೦೦೨ | ೩೨೯ | ೪೪೧ | ೧೧೦೨೦೦–೦೦ | ೨೫೫೯೭೨೬ |
| ೨೦೦೩ | ೨೫೨ | ೪೦೩ | ೩೧೭೩೪–೦೦ | ೨೮೫೮೭೫೪ |
| ೨೦೦೪ | ೨೭೩ | ೩೭೦ | ೬೮೦೩೧–೦೦ | ೩೦೫೨೬೮೮ |

**ಕೋಷ್ಟಕ ೧೦.೧೨ : ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಬೆಳ್ತಂಗಡಿ. ವ್ಯಾಪ್ತಿಗೆ ಬರುವ ಗ್ರಾಮಗಳ ಸಂಖ್ಯೆ: ಬೆಳ್ತಂಗಡಿ ತಾಲೂಕಿನ ೮೧ ಗ್ರಾಮಗಳು**

| ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ(ರೂ.) | ವ್ಯಯ(ರೂ.) |
|---|---|---|---|---|
| ೧೯೯೦ | ೧೮೨೧ | ೧೭೦೬ | ೧೨೯೭೮೪ | ೯೧ |
| ೧೯೯೧ | ೯೩೮ | ೯೫೮ | ೯೪೭೦೧ | ೧೯೪೦ |
| ೧೯೯೨ | ೧೦೯೫ | ೧೨೭೭ | ೧೧೩೪೮೦ | ೯೯೭ |
| ೧೯೯೩ | ೧೧೩೯ | ೧೧೬೯ | ೭೪೮೬೯ | ೩೦೦೦ |
| ೧೯೯೪ | ೯೮೦ | ೯೬೨ | ೯೫೬೮೩ | ೧೫೦೦ |
| ೧೯೯೫ | ೧೧೮೨ | ೯೮೭ | ೯೩೪೪೨ | ೮೬೪ |
| ೧೯೯೬ | ೧೩೭೮ | ೧೪೯೨ | ೧೫೩೫೮೫ | ೮೦೭ |
| ೧೯೯೭ | ೧೩೨೬ | ೯೬೫ | ೧೬೦೩೫೧ | ೪೭೪ |
| ೧೯೯೮ | ೨೦೦೩ | ೧೯೪೭ | ೧೯೯೧೧೮ | ೧೨೯೦ |
| ೧೯೯೯ | ೨೩೯೩ | ೨೩೧೫ | ೩೩೩೯೫೦ | ೧೨೫೧೭ |
| ೨೦೦೦ | ೧೮೩೫ | ೧೩೦೪ | ೨೫೮೨೧೩ | ೨೦೦೫೩ |
| ೨೦೦೧ | ೧೧೧೭ | ೧೯೨೪ | ೩೮೧೧೪೯ | ೧೦೧೧೯ |
| ೨೦೦೨ | ೧೦೩೬ | ೧೧೧೦ | ೩೪೬೨೫೪ | ೩೯೮೦ |
| ೨೦೦೩ | ೧೨೧೯ | ೧೫೨೭ | ೨೩೬೯೧೫ | ೫೪೮೨ |
| ೨೦೦೪ | ೮೪೧ | ೯೩೪ | ೩೩೯೫೬೧ | ೧೧೦೭೭ |

**ಆಧಾರ** : ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಗಳೂರು

**ಕೋಷ್ಟಕ–೧೦.೧೩ : ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ**

| ವರ್ಷ | ದಾಖಲಾದ ದಾವೆಗಳು | | ತೀರ್ಮಾನವಾದ ದಾವೆಗಳು | |
|---|---|---|---|---|
| | ಸಿವಿಲ್ | ಕ್ರಿಮಿನಲ್ | ಸಿವಿಲ್ | ಕ್ರಿಮಿನಲ್ |
| ೧೯೯೦ | ೨೧೫ | ೯೪೯ | ೨೪೦ | ೧೦೬೦ |
| ೧೯೯೧ | ೨೮೫ | ೬೨೮ | ೨೨೮ | ೫೨೦ |
| ೧೯೯೨ | ೨೯೪ | ೭೫೮ | ೨೪೮ | ೫೬೯ |
| ೧೯೯೩ | ೨೩೪ | ೧೭೪೦ | ೧೯೪ | ೧೬೬೦ |
| ೧೯೯೪ | ೫೩೫ | ೧೧೭೯ | ೪೧೫ | ೧೧೫೦ |
| ೧೯೯೫ | ೪೪೫ | ೪೪೭ | ೧೫೪೦ | ೧೪೮೩ |
| ೧೯೯೬ | ೩೯೪ | ೧೧೪೮ | ೩೬೫ | ೧೪೬೩ |
| ೧೯೯೭ | ೪೦೯ | ೧೪೦೩ | ೩೭೪ | ೧೨೫೮ |
| ೧೯೯೮ | ೩೫೨ | ೧೬೭೭ | ೪೮೬ | ೧೭೩೦ |
| ೧೯೯೯ | ೫೨೭ | ೨೩೧೦ | ೫೧೫ | ೨೩೮೫ |
| ೨೦೦೦ | ೩೮೩ | ೨೦೫೭ | ೩೭೪ | ೧೮೧೫ |
| ೨೦೦೧ | ೩೪೪ | ೧೨೨೨ | ೩೪೩ | ೧೩೬೦ |
| ೨೦೦೨ | ೩೨೫ | ೧೪೪೬ | ೪೯೨ | ೧೬೩೫ |
| ೨೦೦೩ | ೩೯೯ | ೧೫೧೪ | ೬೪೦ | ೧೬೦೫ |
| ೨೦೦೪ | ೩೩೯ | ೧೪೩೯ | ೩೮೦ | ೧೪೬೦ |

**ಆಧಾರ**: ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

## ತ್ವರಿತ ವಿಲೇವಾರಿ ನ್ಯಾಯಾಲಯ

ಕೇಂದ್ರ ಸರ್ಕಾರದ ಹನ್ನೊಂದನೆಯ ಆರ್ಥಿಕ ಆಯೋಗದ ಶಿಫಾರಸ್ಸುಗಳಂತೆ, ಈಗಿರುವ ನ್ಯಾಯಾಲಯಗಳಲ್ಲಿ ಎರಡು ವರ್ಷಗಳಿಂದ ಇತ್ಯರ್ಥವಾಗದೇ ಬಾಕಿಯಿರುವ ಕ್ರಿಮಿನಲ್ ಮೊಕದ್ದಮೆಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ ಜನಸಾಮಾನ್ಯರಿಗೆ ನ್ಯಾಯ ಒದಗಿಸುವ ಉದ್ದೇಶದಿಂದ ತ್ವರಿತ ನ್ಯಾಯಾಲಯಗಳನ್ನು ಪ್ರಾರಂಭಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತ್ವರಿತ ನ್ಯಾಯಾಲಯವು ೮-೧೨-೨೦೦೩ ರಿಂದ ಪ್ರಾರಂಭವಾಗಿದೆ. ಪ್ರಸಕ್ತ ಜಿಲ್ಲೆಯಲ್ಲಿ ಒಂದು ತ್ವರಿತ ವಿಲೇವಾರಿ ನ್ಯಾಯಾಲಯ ಮಾತ್ರ ಕಾರ್ಯನಿರ್ವಹಿಸುತ್ತಿದೆ. ಈ ನ್ಯಾಯಾಲಯವು ಮಂಗಳೂರಿನ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದೆ ಹಾಗೂ ಪ್ರಧಾನ ಜಿಲ್ಲಾ ನ್ಯಾಯಾಲಯದ ಅಧೀನದಲ್ಲಿದೆ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಜಿಲ್ಲೆಯ ಇತರ ನ್ಯಾಯಾಲಯಗಳಲ್ಲಿ ಬಾಕಿಯಿರುವ ಮೊಕದ್ದಮೆಗಳನ್ನು ತ್ವರಿತ ವಿಲೇವಾರಿ ನ್ಯಾಯಾಲಯಕ್ಕೆ ವರ್ಗಾವಣೆ ಮಾಡುವ ಮೂಲಕ ಮೊಕದ್ದಮೆಗಳ ತ್ವರಿತ ಇತ್ಯರ್ಥಕ್ಕೆ ನೆರವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ತ್ವರಿತ ವಿಲೇವಾರಿ ನ್ಯಾಯಾಲಯದಲ್ಲಿ ಪ್ರಾರಂಭದಿಂದ ೨೦೦೫ರ ಸಾಲಿನವರೆಗೆ ದಾಖಲಾದ ಇತ್ಯರ್ಥಗೊಂಡ ಮತ್ತು ಬಾಕಿಯಿರುವ ಮೊಕದ್ದಮೆಗಳ ವಿವರ ಈ ಮುಂದಿನಂತಿದೆ.

**ಕೋಷ್ಟಕ ೧೦.೧೪**

| ವರ್ಷ | ದಾಖಲಾದ ಮೊಕದ್ದಮೆಗಳ ಸಂಖ್ಯೆ | | | | | ಇತ್ಯರ್ಥಗೊಳಿಸಿದ ಮೊಕದ್ದಮೆಗಳ ಸಂಖ್ಯೆ | | | | | ಬಾಕಿಯಿಂದ ಮೊಕದ್ದಮೆಗಳ ಸಂಖ್ಯೆ | | | | |
|---|---|---|---|---|---|---|---|---|---|---|---|---|---|---|---|
| | ಸೆಷನ್ಸ್ ದಾವೆಗಳು | ಸಿವಿಲ್ ಅಪೀಲುಗಳು | ಕ್ರಿಮಿನಲ್ ಅಪೀಲುಗಳು | ಕ್ರಿಮಿನಲ್ ಸಂಕೀರ್ಣ ದಾವೆಗಳು | ಕ್ರಿಮಿನಲ್ ರಿವಿಜನ್ ಅರ್ಜಿಗಳು | ಸೆಷನ್ಸ್ ದಾವೆಗಳು | ಸಿವಿಲ್ ಅಪೀಲುಗಳು | ಕ್ರಿಮಿನಲ್ ಅಪೀಲುಗಳು | ಕ್ರಿಮಿನಲ್ ಸಂಕೀರ್ಣ ದಾವೆಗಳು | ಕ್ರಿಮಿನಲ್ ರಿವಿಜನ್ ಅರ್ಜಿಗಳು | ಸೆಷನ್ಸ್ ದಾವೆಗಳು | ಸಿವಿಲ್ ಅಪೀಲುಗಳು | ಕ್ರಿಮಿನಲ್ ಅಪೀಲುಗಳು | ಕ್ರಿಮಿನಲ್ ಸಂಕೀರ್ಣ ದಾವೆಗಳು | ಕ್ರಿಮಿನಲ್ ರಿವಿಜನ್ ಅರ್ಜಿಗಳು |
| ೨೦೦೩ | ೬೭ | – | ೯೦ | – | – | – | – | – | – | – | – | – | – | – | – |
| ೨೦೦೪ | ೪ | ೨೯ | – | ೨ | ೨ | ೧ | ೧೧ | ೩೧ | – | ೨ | – | – | – | – | – |
| ೨೦೦೫ | ೧೭ | ೨ | ೫೮ | ೪ | ೪ | ೩೨ | ೫೪ | ೯ | ೧ | – | – | – | – | – | – |
| ಒಟ್ಟು | ೮೮ | ೩೧ | ೧೪೮ | ೬ | ೬ | ೩೩ | ೬೫ | ೪೦ | ೧ | ೨ | ೫೫ | ೧೪೭ | ೧೦೮ | ೫ | ೪ |

**ಆಧಾರ** : ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಚೇರಿ, ಮಂಗಳೂರು.

ಟಿಪ್ಪಣಿ: ಈ ದಾವೆಗಳು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಇವರು ಒಪ್ಪಿಸಿದವುಗಳಾಗಿದ್ದು, ಯಾವುದೇ ದಾವೆಗಳು ತ್ವರಿತ ನ್ಯಾಯಾಲಯದಲ್ಲಿಯೇ ದಾಖಲಾಗಿರುವುದಿಲ್ಲ.

## ಕಾರ್ಮಿಕ ನ್ಯಾಯಾಲಯಗಳು

ಸರ್ಕಾರದಿಂದ ಉಲ್ಲೇಖಿತವಾದ ಔದ್ಯಮಿಕ ವಿವಾದದ ಅಧಿನಿಯಮ ೧೦ನೆಯ ಪ್ರಕರಣದ ಮೇರೆಗೆ ವಿವಾದಗಳನ್ನು ತೀರ್ಮಾನಿಸಲು ಕಾರ್ಮಿಕ ನ್ಯಾಯಾಲಯಗಳು ಮತ್ತು ಔದ್ಯಮಿಕ ನ್ಯಾಯ ಮಂಡಳಿಗಳೂ ಇವೆ. ದುಡಿಮೆಗಾರರು ತಮ್ಮ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ ಮಾಡುವ ಹಣ ಸಂಬಂಧದ ಹಕ್ಕುಗಳನ್ನು ಜಾರಿಗೊಳಿಸುವ ಅಧಿಕಾರಗಳನ್ನು ಕಾರ್ಮಿಕ

ನ್ಯಾಯಲಯಗಳು ಹೊಂದಿರುತ್ತವೆ. ಈ ನ್ಯಾಯಾಲಯವು ಆರಂಭದಲ್ಲಿ ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿತ್ತು. ಈಗ ಈ ನ್ಯಾಯಾಲಯವು ನ್ಯಾಯಾಂಗ ವ್ಯಾಪ್ತಿಗೆ ಒಳಪಟ್ಟಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕ ನ್ಯಾಯಾಲಯದ ವ್ಯಾಪ್ತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಗಳು ಬರುತ್ತವೆ. ಈ ಜಿಲ್ಲೆಗಳಲ್ಲಿ ಪ್ರತ್ಯೇಕ ಕಾರ್ಮಿಕ ನ್ಯಾಯಾಲಯ ಇರುವುದಿಲ್ಲ. ಆದ್ದರಿಂದ ಈ ಜಿಲ್ಲೆಗಳ ವ್ಯಾಜ್ಯಗಳು ಸಹ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕ ನ್ಯಾಯಾಲಯದಲ್ಲಿಯೇ ನೋಂದಾಯಿಸಲ್ಪಡುತ್ತವೆ.

೨೦೦೩, ೨೦೦೪ ಹಾಗೂ ೨೦೦೫ರಲ್ಲಿ ಕಾರ್ಮಿಕ ನ್ಯಾಯಾಲಯ, ಮಂಗಳೂರು ಇಲ್ಲಿ ವಿವಿಧ ಅಧಿನಿಯಮದಡಿ ದಾಖಲಾದ, ಇತ್ಯರ್ಥಗೊಳಿಸಲಾದ ಹಾಗೂ ಬಾಕಿಯಿರುವ ಪ್ರಕರಣಗಳ ಸಂಖ್ಯೆ ಈ ಮುಂದಿನಂತಿದೆ.

**ಕೋಷ್ಟಕ ೧೦.೧೫ : ಸಂಕೀರ್ಣ ಅರ್ಜಿ ಅಧಿನಿಯಮ**

| ವರ್ಷ | ದಾಖಲಾದ ಮೊಕದ್ದಮೆಗಳ ಸಂಖ್ಯೆ ಉಡುಪಿ ಮಂಗಳೂರು | ಶಿವಮೊಗ್ಗ | ಒಟ್ಟು | ಇತ್ಯರ್ಥಗೊಳಿಸಿದ ಮೊಕದ್ದಮೆಗಳು | ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|---|---|---|---|
| ೨೦೦೩ | – | – | – | – | – |
| ೨೦೦೪ | ೦೪ | – | ೦೪ | ೦೪ | ೦೪ |
| ೨೦೦೫ | ೦೧ | ೦೦ | ೦೧ | ೦೦ | ೦೧ |

**ಇ. ಎಸ್. ಐ. ಅಧಿನಿಯಮ ೮೫ : ೧೯೪೮**

| ವರ್ಷ | ದಾಖಲಾದ ಮೊಕದ್ದಮೆಗಳ ಸಂಖ್ಯೆ | ಇತ್ಯರ್ಥಗೊಳಿಸಿದ ಮೊಕದ್ದಮೆಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|---|---|
| ೨೦೦೩ | ೧೬ ಪ್ರಕರಣಗಳು | ೧೫ ಪ್ರಕರಣಗಳು | ೦೧ |
| ೨೦೦೪ | ೧೦ ಪ್ರಕರಣಗಳು | ೦೧ ಪ್ರಕರಣ | ೦೯ |
| ೨೦೦೫ | ೦೭ ಪ್ರಕರಣಗಳು | ೦೦ | ೦೭ |

**ಉಲ್ಲೇಖ ಅರ್ಜಿ ಅಧಿನಿಯಮ ೩೩(ಸಿ)೨**

| ವರ್ಷ | ದಾಖಲಾದ ಮೊಕದ್ದಮೆಗಳ ಸಂಖ್ಯೆ ಉಡುಪಿ ಮಂಗಳೂರು | ಶಿವಮೊಗ್ಗ | ಒಟ್ಟು | ಇತ್ಯರ್ಥಗೊಳಿಸಿದ ಮೊಕದ್ದಮೆಗಳು | ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|---|---|---|---|
| ೨೦೦೪ | ೦೪ | ೦೫ | ೦೯ | ೦೨ | ೦೭ |
| ೨೦೦೩ | ೧೨ | ೧೭ | ೨೯ | ೧೨ | ೧೭ |
| ೨೦೦೫ | ೦೪ | ೦೧ | ೦೫ | ೦೦ | ೦೫ |

**ಕೈಗಾರಿಕಾ ವಿವಾದ ಅರ್ಜಿ ಅಧಿನಿಯಮ ೧೦(೪)ಎ**

| ವರ್ಷ | ದಾಖಲಾದ ಮೊಕದ್ದಮೆಗಳ ಸಂಖ್ಯೆ ಉಡುಪಿ ಮಂಗಳೂರು | ಶಿವಮೊಗ್ಗ | ಒಟ್ಟು | ಇತ್ಯರ್ಥಗೊಳಿಸಿದ ಮೊಕದ್ದಮೆಗಳು | ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|---|---|---|---|
| ೨೦೦೩ | ೨೪ | ೧೬ | ೪೦ | ೨೬ | ೧೪ |
| ೨೦೦೪ | ೨೧ | ೦೪ | ೨೫ | ೦೮ | ೧೭ |
| ೨೦೦೫ | ೧೬ | ೦೧ | ೧೭ | ೦೪ | ೧೩ |

**ಉಲ್ಲೇಖ ಅರ್ಜಿ ಅಧಿನಿಯಮ ೧೦(೧)ಸಿ**
(Industrial Reference Case/IDR)

| ವರ್ಷ | ದಾಖಲಾದ ಮೊಕದ್ದಮೆಗಳ ಸಂಖ್ಯೆ | | | ಇತ್ಯರ್ಥಗೊಳಿಸಿದ | ಬಾಕಿ ಇರುವ |
|---|---|---|---|---|---|
| | ಉಡುಪಿ ಮಂಗಳೂರು | ಶಿವಮೊಗ್ಗ | ಒಟ್ಟು | ಮೊಕದ್ದಮೆಗಳು | ಪ್ರಕರಣಗಳ ಸಂಖ್ಯೆ |
| ೨೦೦೩ | ೪೧ | ೧೮ | ೫೪ | ೪೧ | ೧೩ |
| ೨೦೦೪ | ೩೨ | ೨೦ | ೫೨ | ೨೭ | ೨೫ |
| ೨೦೦೫ | ೨೩ | ೨೧ | ೪೪ | ೦೧ | ೪೩ |

**ಆಧಾರ**: ಕಾರ್ಮಿಕ ನ್ಯಾಯಾಲಯ, ಮಂಗಳೂರು. (ಸೂಚನೆ: ಸದರಿ ಕೋಷ್ಟಕಗಳಲ್ಲಿ ಮಂಗಳೂರು, ಉಡುಪಿ ಶಿವಮೊಗ್ಗ ಮೂರು ಜಿಲ್ಲೆಗಳ ಮೊಕದ್ದಮೆಗಳು ಒಳಗೊಂಡಿದೆ.)

## ಮಂಗಳೂರು ವಕೀಲರ ಸಂಘ

ಸಿವಿಲ್ ಕೋರ್ಟ್‌ನ ಕೇವಲ ಏಳು ಮತ್ತು ಎಂಟು ವಕೀಲರನ್ನು ಒಳಗೊಂಡಂತೆ ಮಂಗಳೂರು ವಕೀಲರ ಸಂಘವು ಸುಮಾರು ಒಂದು ಶತಮಾನಕ್ಕೂ ಹಿಂದೆ ಮಂಗಳೂರಿನಲ್ಲಿ ಪ್ರಾರಂಭವಾಯಿತು. ಸಂಘವು ಅಂದಿನ ಜಿಲ್ಲಾ ನ್ಯಾಯಾಧೀಶರ ಹೆಸರಿನಲ್ಲಿ ಬೆಸ್ಟ್ ಗ್ರಂಥಾಲಯವನ್ನು ಪ್ರಾರಂಭಿಸಿತು. ನಂತರ ವಕೀಲರ ಸಂಘದ ಸದಸ್ಯರ ಸಂಖ್ಯೆಯು ೨೫ಕ್ಕೆ ಏರಿತು. ಈ ಬೆಸ್ಟ್ ಗ್ರಂಥಾಲಯವು ಇಂದಿಗೂ ಜಿಲ್ಲೆಯ ನ್ಯಾಯವಾದಿಗಳಿಗೆ ಪರಾಮರ್ಶನ ಗ್ರಂಥಾಲಯವಾಗಿದೆ. ೧೯೬೦ರಲ್ಲಿ ಮಂಗಳೂರು ವಕೀಲರ ಸಂಘವು ೧೮೦ ನ್ಯಾಯವಾದಿಗಳನ್ನು, ಐದು ಜನ ಪ್ಲೀಡರ್‌ಗಳನ್ನು ಸದಸ್ಯರನ್ನಾಗಿ ಹೊಂದಿತ್ತು. ೧೯೭೦ರಲ್ಲಿ ೧೭೬ ನ್ಯಾಯವಾದಿಗಳು ಮತ್ತು ಇಬ್ಬರು ಪ್ಲೀಡರಗಳನ್ನು ಒಳಗೊಂಡಿತ್ತು. ಪ್ರಸಕ್ತ ಮಂಗಳೂರು ಬಾರ್ ಅಸೋಸಿಯೇಷನ್ (ವಕೀಲರ ಸಂಘವು) ಸದಸ್ಯರಾಗಿ ಹಲವಾರು ವಕೀಲರು ಸೇವೆ ಸಲ್ಲಿಸುತ್ತಿದ್ದು, ಅವರಲ್ಲಿ ಪ್ರಮುಖ ವಕೀಲರ ಸಂಖ್ಯೆ ೧೭೪ ಆಗಿರುತ್ತದೆ. ಮಂಗಳೂರು ಜಿಲ್ಲಾ ವಕೀಲರ ಸಂಘದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಖಜಾಂಚಿ ಹಾಗೂ ಹದಿನೈದು ಜನ ಕಾರ್ಯಕಾರಿ ಸಮಿತಿ ಸದಸ್ಯರು ಸೇವೆ ಸಲ್ಲಿಸುತ್ತಿದ್ದಾರೆ. ಇದೇ ರೀತಿ ಎಲ್ಲ ತಾಲೂಕು ಕೇಂದ್ರಗಳಲ್ಲಿಯೂ ವಕೀಲರ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

**ವಕೀಲರ ಪರಂಪರೆ :** ದಕ್ಷಿಣ ಕನ್ನಡ ಜಿಲ್ಲೆಯು ವಕೀಲರು ಮತ್ತು ನ್ಯಾಯಾಧೀಶರ ಶ್ರೀಮಂತ ಪರಂಪರೆಯನ್ನು ಹೊಂದಿದೆ. ನ್ಯಾಯಾಂಗ ಕ್ಷೇತ್ರದಲ್ಲಷ್ಟೇ ಅಲ್ಲದೇ ಕೆಲವರು ಸಾಮಾಜಿಕ ಕ್ಷೇತ್ರದಲ್ಲೂ ಅಪಾರ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರುಗಳಾದ ಕೆನರಾ ಪ್ರೌಢಶಾಲೆ ಪ್ರಾರಂಭಿಸಿದ ಅಮ್ಮೆಂಬಳ ಸುಬ್ಬರಾಯ ಪೈ; ಅಮ್ಮೆಂಬಳ ಶ್ರೀನಿವಾಸ ಪೈ, ನೈಯಂಪಲ್ಲಿ ಶಿವರಾವ್ ಮತ್ತು ಯು.ಸಿ. ಕೃಷ್ಣಭಟ್ ಮಂಗಳೂರು ಬಾರ್ ಅಸೋಸಿಯೇಷನ್ನಿನ ಹಿಂದಿನ ಸದಸ್ಯರು. ಸರ್ವೋಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶರಾಗಿದ್ದ ಕೆ. ಎಸ್. ಹೆಗಡೆ ಮತ್ತು ಎಂ.ಕೆ. ನಂಬಿಯಾರ್; ಮೈಸೂರು ಉಚ್ಚ ನ್ಯಾಯಾಲಯದ ನ್ಯಾಯವಾದಿಗಳಾಗಿದ್ದ ಶ್ರೀಯುತ ಎ. ನಾರಾಯಣ ಪೈ, ಮುಖ್ಯ ನ್ಯಾಯಾಧೀಶರಾಗಿದ್ದ ಜಿ. ಕೆ. ಗೋವಿಂದಭಟ್, ಎಂ ಸಂತೋಷ್ ಡಿ. ನರೋನ್ಹ ಜಗನ್ನಾಥಶೆಟ್ಟಿ, ಹೇಗ್‌ನ ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ, ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದ ಬೆನಗಲ್ ನರಸಿಂಹರಾವ್, ಮಂಗಳೂರಿನ ಶ್ರೀಮಂತ ವಕೀಲರಾಗಿ ಗಾಂಧೀಜಿಯವರ ಪ್ರಭಾವಕ್ಕೊಳಗಾಗಿ ದೇಶಕ್ಕಾಗಿ ಸರ್ವಸ್ವವನ್ನು ತ್ಯಾಗಮಾಡಿದ ದೇಶಭಕ್ತ ಕಾರ್ನಾಡ್ ಸದಾಶಿವರಾಯರು ಇವರುಗಳ ದಕ್ಷಿಣ ಕನ್ನಡ ಜಿಲ್ಲೆಯವರಾಗಿದ್ದಾರೆ. ಕರ್ನಾಟಕ ಏಕೀಕರಣ ಚಳವಳಿಯ ಧುರೀಣರಾಗಿ ಕೆ. ರಾಮಕೃಷ್ಣ ಕಾರಂತರೊಂದಿಗೆ ಅವಿರತವಾಗಿ ದುಡಿದ ಹಾಗೂ ೧೯೪೭ಕ್ಕೆ ಮೊದಲು ಕೇಂದ್ರ ಶಾಸನಸಭೆಯ ಸದಸ್ಯರಾಗಿದ್ದ ನ್ಯಾಯವಾದಿ ಕೆ. ಬಿ. ಜಿನರಾಜ ಹೆಗಡೆಯವರು, ಲೋಕಸಭೆಯ ಸದಸ್ಯರಾಗಿದ್ದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಧುರೀಣ ಕೆ. ಆರ್. ಆಚಾರ್ ಅವರು, ಮದರಾಸು ರಾಜ್ಯ ವಿಧಾನಮಂಡಲದಲ್ಲಿ ಸದಸ್ಯರಾಗಿದ್ದ ಬಿ. ಮಹಾಬಲ ಹೆಗಡೆ, ಜಿಲ್ಲಾ ನ್ಯಾಯಾಧೀಶರು ಮತ್ತು ಮಂಗಳೂರು ನಗರಸಭೆಯ ಅಧ್ಯಕ್ಷರಾಗಿದ್ದ ಜೆರೋಮ್ ಸಲ್ಡಾನ, ಮದರಾಸು ರಾಜ್ಯ ವಿಧಾನಮಂಡಲದ ಸದಸ್ಯ ಹಾಗೂ ನಗರಸಭೆಗಳಲ್ಲಿ ಗೌರವಾನ್ವಿತ ಸದಸ್ಯರಾಗಿದ್ದ ರಾವ್‌ಬಹದ್ದೂರ್ ಎಂ. ಎನ್. ಸುವರ್ಣ ಅವರು, ಮಂಗಳೂರಿನ ಹೆಸರಾಂತ ನ್ಯಾಯವಾದಿಯಾಗಿ, ಮೈಸೂರು ಶಾಸನ ಸಭೆಯ ಸದಸ್ಯರಾಗಿ ಹಾಗೂ ಸಚೇತಕ(ಸ್ಪೀಕರ್)ರಾಗಿ ಹೆಸರು ಗಳಿಸಿದ ಬಂಟ್ವಾಳದ ವೈಕುಂಠ ಬಾಳಿಗ, ಮೈಸೂರು ರಾಜ್ಯ ವಿಧಾನಮಂಡಲದ ಸದಸ್ಯರಾಗಿದ್ದ ಕೆ. ಬಾಲಕೃಷ್ಣರಾವ್, ಕೆ. ಸೂರ್ಯನಾರಾಯಣ ಅಡಿಗ, ಎಸ್. ನರಸಪ್ಪಯ್ಯ, ಪಿ.ಎ. ಐತಾಳ್ ಮತ್ತು ಎ. ಶಂಕರ್ ಆಳ್ವ, ಸಹಕಾರ ಸಚಿವರಾಗಿದ್ದ

ಯು.ಡಿ. ಫರೀದ್ ಮತ್ತು ಬಿ. ಸುಬ್ಬಯ್ಯಶೆಟ್ಟಿ ಈ ಜಿಲ್ಲೆಯಲ್ಲಿನ ವಕೀಲರ ಸಂಘದ ಸದಸ್ಯರು ಮತ್ತು ಶಾಸಕರಾಗಿದ್ದವರು. ಸಮಾಜ ಸುಧಾರಕ ಎನ್. ಅರಸಪ್ಪನವರೊಂದಿಗೆ ಬ್ರಹ್ಮಸಮಾಜವನ್ನು ಮಂಗಳೂರಿನಲ್ಲಿ ಆರಂಭಿಸಿ ಅದರ ಕಾರ್ಯದರ್ಶಿಗಳಾಗಿದ್ದ ಉಳ್ಳಾಲ ರಘುನಾಥಯ್ಯ; ಕಂಪನಿ ಲಾ ತಜ್ಞರೂ, ನಗರಸಭೆಯ ಉಪಾಧ್ಯಕ್ಷರೂ ಆಗಿದ್ದ ಎಂ. ಮಾಧವರಾವ್; ಸಹಕಾರಿ, ಸಾಮಾಜಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಜಿಲ್ಲೆಯಲ್ಲಿ ಪ್ರಖ್ಯಾತರಾಗಿದ್ದ ಹಾಗೂ ಎರಡನೇ ಮಹಾಯುದ್ಧ ಕಾಲದಲ್ಲಿ ಮದರಾಸು ಅಧಿಪತ್ಯದಲ್ಲಿ ಜಿಲ್ಲಾ ರೇಶನಿಂಗ್ ಗೌರವ ಸಕಮೀಶನರಾಗಿ ನೇಮಕಗೊಂಡಿದ್ದ ಮೇಳಹಳ್ಳಿ ಶಿವರಾವ್; ಜಿಲ್ಲಾ ಮಂಡಳಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಮಂಜಯ್ಯ ಹೆಗಡೆ, ನಯ್ಯಂಪಲ್ಲಿ ಸುಬ್ಬರಾವ್ ಅವರು; ಮಂಗಳೂರು ನಗರಸಭೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಎಲ್. ಸಿ. ಪಯಸ್, ಬಿ. ವೆಂಕಟರಾವ್ ಬಾಳಿಗ, ಕೆ. ಎಸ್. ಎನ್. ಅಡಿಗ, ಜಿ. ಸೋಮಶೇಖರರಾವ್ ಅವರು; ವಿವಿಧ ಸಹಕಾರಿ ಸಂಘಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಶ್ರೀಯುತರಾದ ಬಿ.ವಿ. ಕೃಷ್ಣಯ್ಯ, ಎಸ್. ನರಸಪ್ಪಯ್ಯ, ಪಿ. ಶ್ರೀನಿವಾಸರಾವ್ ಅವರು ಜಿಲ್ಲೆಯ ಪ್ರಮುಖ ನ್ಯಾಯವಾದಿಗಳಲ್ಲಿ ಉಲ್ಲೇಖಾರ್ಹರು. ಅಲ್ಲದೆ, ಜಿಲ್ಲೆಯ ಇನ್ನೂ ಅನೇಕ ನ್ಯಾಯವಾದಿಗಳು ನ್ಯಾಯಾಂಗ ಹಾಗೂ ವಿವಿಧ ಸಾರ್ವಜನಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಜಿಲ್ಲೆಗೆ ಕೀರ್ತಿಯನ್ನು ತಂದಿದ್ದಾರೆ.

## ಕಾರಾಗೃಹಗಳು

ಕಾರಾಗೃಹಗಳು ಮಾನವ ಸಂಘ ಜೀವಿಯಾಗಿ ಬಾಳಲು ಆರಂಭಿಸಿದಾಗಲೇ ಅಸ್ತಿತ್ವದಲ್ಲಿವೆಯಾದರೂ, ಅವು ಇದ್ದ ರೀತಿ ಮತ್ತು ಉದ್ದೇಶಗಳು ಕಾಲಕಾಲಕ್ಕೆ ಬದಲಾಗುತ್ತ ಬಂದಿವೆ. ಗವಿ, ಬಂಡೆಗಳ ಸಂದು, ಗುಡಿಸಲು ಹೀಗೆ ಆರಂಭವಾಗಿ ಕತ್ತಲ ಕೋಣೆಯವರೆಗೆ ಕಾರಾಗೃಹಗಳ ಬೆಳವಣಿಗೆಯಾಗಿದೆ. ಸುಮಾರು ಇನ್ನೂರು ವರ್ಷಗಳ ಹಿಂದೆ ಕಾರಾಗೃಹವನ್ನು ಬಾಕಿ ವಸೂಲಿಗೆ ಮತ್ತು ಕೇವಲ ವಿಚಾರಣಾಧೀನ ಕೈದಿಗೆ ಮತ್ತು ಶಿಕ್ಷೆಯನ್ನು ವಿಧಿಸುವವರೆಗೆ ಆಪಾದಿತನನ್ನು ಕಾವಲಿನಲ್ಲಿಡಲು ಬಳಸಲಾಗುತ್ತಿತ್ತು. ಕಾರಾಗೃಹವು ಶಿಕ್ಷೆಯ ಪ್ರಕಾರವಾದ ಮೇಲೆ ಅದು ದಮನರೂಪದ ದಂಡನೆಯಾಗಿ ಪರಿಣಮಿಸಿತು. ಶಾಸನ ವಿರೋಧಿ, ಸಮಾಜ ಘಾತುಕ ಕ್ರಿಯೆಗೆ ವಿಧಿಸಲಾಗುವ ಶಿಕ್ಷೆಯಾಯಿತು. ಇದರಿಂದಾಗಿ ಸಮಾಜಕ್ಕೆ ರಕ್ಷಣೆ ದೊರೆಯಿತು. ಭಾರತ ಬ್ರಿಟಿಷ್ ಸರ್ಕಾರದ ನೇರ ಆಡಳಿತಕ್ಕೊಳಪಟ್ಟ ಮೇಲೆ ಅನೇಕ ಕೇಂದ್ರೀಯ ಕಾರಾಗೃಹಗಳು ಅಸ್ತಿತ್ವಕ್ಕೆ ಬಂದವು.

ಮಂಗಳೂರಿನ ಕಾರಾಗೃಹವು ಮೊದಲು ಜಿಲ್ಲಾ ಕಾರಾಗೃಹವಾಗಿದ್ದುದು ೧೯೦೮ರ ಅಕ್ಟೋಬರ್ ೧ರಿಂದ ವಿಶೇಷ ಕಾರಾಗೃಹವಾಗಿ ಪರಿವರ್ತನೆಗೊಂಡಿತು. ಆನಂತರ ಅದು ಜಿಲ್ಲೆಯ ಪ್ರಧಾನ ಕಾರಾಗೃಹವಾಗಿದೆ. ವಿಚಾರಣಾಧೀನ ಮತ್ತು ಅಲ್ಪಾವಧಿ ಬಂಧಿಗಳಿಗಾಗಿ ೧೯೫೬ರ ವೇಳೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರು ಉಪ ಕಾರಾಗೃಹಗಳು ಮತ್ತು ಮಂಗಳೂರಿನಲ್ಲಿ ಒಂದು ಕಾರಾಗೃಹವು ಇದ್ದವು. ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಕಾರಾಗೃಹ ಶಿಕ್ಷೆಯಾದಲ್ಲಿ ಸಾಮಾನ್ಯವಾಗಿ ಮಲಬಾರಿನ ಕಣ್ಣಾನೂರು ಕೇಂದ್ರ ಕಾರಾಗೃಹಕ್ಕೆ ಅಥವಾ ಇತರ ದೊಡ್ಡ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗುತ್ತಿತ್ತು. ಒಂದು ತಿಂಗಳಿಗಿಂತ ಹೆಚ್ಚಿಲ್ಲದ ಕಾರಾಗೃಹ ಶಿಕ್ಷೆಯ ಅಪರಾಧಿಗಳನ್ನು ಉಪ ಕಾರಾಗೃಹದಲ್ಲಿಡಲಾಗುತ್ತಿತ್ತು. ಆದರೆ, ವಿಚಾರಣಾಧೀನ ಕೈದಿಗಳನ್ನೇ ಹೆಚ್ಚಾಗಿ ಈ ಕಾರಾಗೃಹದಲ್ಲಿರಿಸಲಾಗುತ್ತಿತ್ತು ಮತ್ತು ಮದರಾಸು ಕಾರಾಗೃಹ ಮತ್ತು ಸುಧಾರಣಾ ಗೃಹಗಳ ಕೈಪಿಡಿ (ಸಂಪುಟ ೨) ಜಿಲ್ಲೆಯಲ್ಲಿ ಜಾರಿಯಲ್ಲಿತ್ತು. ಕಾಲಾನುಕ್ರಮದಲ್ಲಿ ಕಾರಾಗೃಹಗಳ ದರ್ಜೆಯಲ್ಲಿ ಬದಲಾವಣೆಯಾಯಿತು.

### ಕಾರಾಗೃಹ ಕಾಯಿದೆ ಮತ್ತು ಕೈಪಿಡಿಗಳು

ಮದರಾಸು ಪ್ರಾಂತೀಯ ಸರ್ಕಾರದ ನೇರ ಅಧೀನದಲ್ಲಿದ್ದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಕೀಕರಣವಾಗುವುದಕ್ಕೆ ಮುಂಚೆ, ಮದರಾಸು ಕಾರಾಗೃಹ ಕೈಪಿಡಿ, ಮದರಾಸು ಕಾರಾಗೃಹ ಸುಧಾರಣಾ ಕೈಪಿಡಿಯು ಜಾರಿಯಲ್ಲಿತ್ತು. ಅಲ್ಲದೆ, ೧೮೯೪ರ ಕಾರಾಗೃಹ ಕಾಯಿದೆ, ೧೮೭೧ ಮತ್ತು ೧೯೦೦ರ ಬಂಧಿತರ ಕಾಯಿದೆ, ೧೮೭೯ರ ಸಾಕ್ಷ್ಯಾಧಾರ ಮತ್ತು ಹಾಜರಾತಿಯ ಕಾಯಿದೆ ಮತ್ತು ೧೮೯೭ರ ಸುಧಾರಣಾ ಶಾಲೆಯ ಕಾಯಿದೆಗಳು ಜಾರಿಯಲ್ಲಿದ್ದವು. ೧೯೫೬ರ ನಂತರ ರಾಜ್ಯವು ಪುನಾರ್ರಚಿತವಾದಾಗ ಮತ್ತು ಅನಂತರದಲ್ಲಿ ಜಾರಿಯಲ್ಲಿರುವ

ಕಾಯಿದೆಗಳು ಮತ್ತು ನಿಯಮಗಳು ಈ ಮುಂದಿನಂತಿವೆ:

೧) ೧೯೭೪ರ ಕರ್ನಾಟಕ ಕಾರಾಗೃಹಗಳ ನಿಯಮಗಳು

೨) ೧೯೭೮ರ ಕರ್ನಾಟಕ ಕಾರಾಗೃಹಗಳ ಕೈಪಿಡಿ

೩) ೧೯೬೩ರ ಬಾಲದೋಷಿ ಕಾಯಿದೆ

೪) ೧೯೬೩ರ ಬಾಲದೋಷಿ ಶಾಲೆ ನಿಯಮಗಳು

ಕಾರಾಗೃಹವು ಬಂಧಿತರ ಭದ್ರತೆ ಮತ್ತು ಸುರಕ್ಷೆಯ ಜವಾಬ್ದಾರಿಯನ್ನು ಹೊಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಮೂರು ಕಾರಾಗೃಹಗಳಿವೆ. ಜಿಲ್ಲಾ ಕಾರಾಗೃಹವು ಕೊಡಿಯಲ್ ಬೈಲ್, ಮಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಲ್ಲದೆ, ಉಪ ಕಾರಾಗೃಹಗಳು ಬಂಟ್ವಾಳ ಹಾಗೂ ಪುತ್ತೂರಿನಲ್ಲಿದ್ದು, ಅವು ಕಂದಾಯ ಇಲಾಖೆಗೆ ಹೊಂದಿಕೊಂಡು ಕಾರ್ಯನಿರ್ವಹಿಸುತ್ತಿವೆ.

| ಕ್ರ.ಸಂ. | | ಪುರುಷರು | ಮಹಿಳೆಯರು | ಒಟ್ಟು |
|---|---|---|---|---|
| ೧ | ಜಿಲ್ಲಾ ಕಾರಾಗೃಹದ ಅಧಿಕೃತ ಸ್ಥಳಾವಕಾಶ | ೧೪೬ | ೪ | ೧೫೦ |
| ೨ | ಈಗಿರುವ ಬಂಧಿಗಳ ಸಂಖ್ಯೆ | ೧೮೯ | ೪ | ೧೯೩ |

**ಆಧಾರ** : ಜಿಲ್ಲಾ ಕಾರಾಗೃಹ, ಮಂಗಳೂರು

## ಸಿಬ್ಬಂದಿ ಮಾದರಿ

ಮಂಗಳೂರಿನ ವಿಶೇಷ ಉಪ ಕಾರಾಗೃಹವನ್ನು ಮೊದಲು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯ ಜಿಲ್ಲಾ ಸಹಾಯಕ ವೈದ್ಯಾಧಿಕಾರಿಯು ಅಂಶಕಾಲಿಕ ಅಧಿಕಾರಿಯಾಗಿ ನೋಡಿಕೊಳ್ಳುತ್ತಿದ್ದರು. ಮೈಸೂರು ಕಾರಾಗೃಹ ಇಲಾಖೆಯ ಕೆಳ ದರ್ಜೆಯ ಅಧಿಕಾರಿಯಾದ ಜೈಲರ್ ವಾಸ್ತವವಾಗಿ ಈ ವಿಶೇಷ ಉಪಕಾರಾಗೃಹದ ಆಡಳಿತದ ಪ್ರಭಾರಿಯಾಗಿದ್ದರು. ಇವರಿಗೆ ಸಹಾಯಕರಾಗಿ ಒಬ್ಬ ಗುಮಾಸ್ತ, ಮೂವರು ಮುಖ್ಯ ವಾರ್ಡರ್‌ಗಳು ( ಪರಿಪಾಲಕರು), ಹದಿನಾಲ್ಕು ಜನ ವಾರ್ಡರ್‌ಗಳು, ಒಬ್ಬ ಕಾವಲುಗಾರ, ಇಬ್ಬರು ಮಹಿಳಾ ವಾರ್ಡರ್ ಮತ್ತು ಒಬ್ಬರು ಪಂಪ್ ಅಟೆಂಡರು ಇದ್ದರು. ನಂತರ ೧೯೭೨ ರಲ್ಲಿ ಜಿಲ್ಲೆಯ ಮಂಗಳೂರಿನ ಜಿಲ್ಲಾ ಸರ್ಜನ್ ಕಾರಾಗೃಹದ ಅಧಿಕಾರೇತರ ಅಧೀಕ್ಷಕರು ಮತ್ತು ವೈದ್ಯಾಧಿಕಾರಿಯಾಗಿದ್ದರು. ಕಾರಾಗೃಹದ ಸಿಬ್ಬಂದಿ ಪ್ರಮಾಣದಲ್ಲಿ ಯಾವುದೇ ವ್ಯತ್ಯಾಸವಾಗಿರಲಿಲ್ಲ. ಆದರೆ ಜೈಲರ್ ಹುದ್ದೆಯನ್ನು ಮುಖ್ಯ ಜೈಲರ್ ಹುದ್ದೆಗೆ ಮೇಲ್ದರ್ಜೆಗೇರಿಸಲಾಯಿತು.

ಪ್ರಸಕ್ತ ಜಿಲ್ಲಾ ಕಾರಾಗೃಹದಲ್ಲಿ ಅಧೀಕ್ಷಕರು, ಚೀಫ್ ಜೈಲರ್, ಜೈಲರ್, ಚೀಫ್ ವಾರ್ಡರ್, ಹೆಡ್‌ವಾರ್ಡರ್, ವಾರ್ಡರ್, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಚಾಲಕ, ಪಂಪ್ ಅಟೆಂಡರ್, ಸ್ವೀಪರ್, ವೈದ್ಯಾಧಿಕಾರಿಗಳು, ಔಷಧಿ ತಜ್ಞ, ಬೆರಳಚ್ಚುಗಾರರು, ನರ್ಸಿಂಗ್ ವಾರ್ಡರ್ ಇವರು ಕೆಲಸ ನಿರ್ವಹಿಸುತ್ತಿದ್ದಾರೆ.

ಉಪ ಕಾರಾಗೃಹದಲ್ಲಿ ಉಪ ತಹಸೀಲ್ದಾರರು, ಕಾರಾಗೃಹದ ಅಧೀಕ್ಷಕರಾಗಿರುತ್ತಾರೆ. ಅಲ್ಲದೆ, ಇವರ ಅಧೀನ ಪ್ರಥಮ ದರ್ಜೆ ಸಹಾಯಕ ಹಾಗೂ ಅಟೆಂಡರ್ ಇರುತ್ತಾರೆ.

೨೦೦೧–೦೨ರಲ್ಲಿ ಕಾರಾಗೃಹಗಳ ವಾರ್ಷಿಕ ವೆಚ್ಚ ರೂ. ೪೨,೦೭,೭೭೨/– ಗಳಿದ್ದುದು ೨೦೦೩–೦೪ರಲ್ಲಿ ರೂ. ೮೪,೬೭,೬೭೬ ಗಳಾಗಿರುತ್ತದೆ. ಅಂದರೆ ೨೦೦೧–೦೨ರ ವರ್ಷಕ್ಕಿಂತ ೨೦೦೩–೦೪ರಲ್ಲಿ ವಾರ್ಷಿಕ ವೆಚ್ಚವು ದ್ವಿಗುಣಗೊಂಡಿದೆ.

೧೯೯೪–೯೫ ರಿಂದ ಈವರೆಗಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕಾರಾಗೃಹಗಳ ಸಂಖ್ಯೆ ಹಾಗೂ ಕೈದಿಗಳ ಸಂಖ್ಯೆ (ಗಂಡಸರು ಮತ್ತು ಹೆಂಗಸರು)ಯನ್ನು ಈ ಮುಂದೆ ನೀಡಲಾಗಿದೆ. (೧೯೯೭ ರಲ್ಲಿ ಜಿಲ್ಲೆಯು ವಿಭಜಿಸಲ್ಪಟ್ಟು ಪ್ರತ್ಯೇಕ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಾಗಿ ರೂಪುಗೊಂಡಿದ್ದರಿಂದ ಈ ಮುಂದೆ ತೋರಿಸಿರುವ ಅಂಕಿ–ಅಂಶಗಳ ೧೯೯೮–೯೯ರ ವರೆಗೆ ಅವಿಭಜಿತ ಜಿಲ್ಲಾ ಅಂಕಿ ಅಂಶವಾಗಿದೆ)

**ಕೋಷ್ಟಕ ೧೦.೧೬**

| ವರ್ಷ | ಕಾರಾಗೃಹಗಳ ಸಂಖ್ಯೆ | ಕೈದಿಗಳ ಸಂಖ್ಯೆ | |
|---|---|---|---|
| | | ಗಂಡಸರು | ಹೆಂಗಸರು |
| ೧೯೯೪–೯೫ | ೬ | ೨೩೯ | ೫ |
| ೧೯೯೫–೯೬ | – | – | – |
| ೧೯೯೬–೯೭ | ೬ | ೨೨೭ | ೧೩ |
| ೧೯೯೭–೯೮ | – | – | – |
| ೧೯೯೮–೯೯ | ೬ | ೩೨೦ | ೩ |
| ೧೯೯೯–೨೦೦೦ | ೪ | ೨೪೧ | ೫ |
| ೨೦೦೦–೦೧ | ೪ | ೧೬೩ | ೩ |
| ೨೦೦೧–೦೨ | ೪ | ೧೨೦ | – |
| ೨೦೦೨–೦೩ | ೪ | ೧೧೯ | ೬ |
| ೨೦೦೩–೦೪ | ೪ | ೧೯೦ | ೬ |
| ೨೦೦೪–೦೫* | ೩ | ೧೮೯ | ೪ |

(ಉಪ ಕಾರಾಗೃಹ ದುರಸ್ತಿಯಲ್ಲಿದ್ದು, ಸದ್ಯ ಜಿಲ್ಲಾ ಕಾರಾಗೃಹದಲ್ಲಿರುವ ಒಟ್ಟು ಬಂಧಿಗಳ ಸಂಖ್ಯೆ ೧೯೩)

***೨೦೦೪–೦೫ ವರ್ಷ ಹೊರತುಪಡಿಸಿ ಉಳಿದ ಅಂಕಿ–ಅಂಶಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಂಕಿ–ಅಂಶಗಳ ಮೇರೆಗೆ ನೀಡಲಾಗಿದೆ.**

## ಸವಲತ್ತುಗಳು

ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಒಬ್ಬ ಪೂರ್ಣಾವಧಿ ವೈದ್ಯಾಧಿಕಾರಿಯಿದ್ದಾರೆ. ಅಲ್ಲದೆ, ಔಷಧಿ ತಜ್ಞರು ಮತ್ತು ನರ್ಸಿಂಗ್ ವಾರ್ಡರ್‌ಗಳಿದ್ದು, ಬಂಧಿಗಳಿಗೆ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಸೌಲಭ್ಯವನ್ನು ಒದಗಿಸಲಾಗಿದೆ. ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆಯಿದ್ದಾಗ, ಅವರನ್ನು ಸರ್ಕಾರಿ ವೆನ್‌ಲಾಕ್ ಆಸ್ಪತ್ರೆ, ನಿಮ್ಹಾನ್ಸ್, ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆ, ಹಾಗೂ ಕಿಮ್ಸ್, ಧಾರವಾಡ ಇಲ್ಲಿಗೆ ಕಳುಹಿಸಿಕೊಡಲಾಗುವುದು. ಅಲ್ಲದೆ ದಂತ ಚಿಕಿತ್ಸಾ ಶಿಬಿರ, ಚರ್ಮರೋಗ ಶಿಬಿರವನ್ನು ಏರ್ಪಡಿಸುವ ಮೂಲಕ ಪ್ರತಿಯೊಬ್ಬ ಬಂಧಿಯ ಆರೋಗ್ಯಕ್ಕೆ ವಿಶೇಷ ಕಾಳಜಿ ವಹಿಸಲಾಗುವುದು. ದೇಹಸ್ವಾಸ್ಥ್ಯದಷ್ಟೇ ಮನಸ್ಸಿನ ಸ್ವಾಸ್ಥ್ಯವು ಮುಖ್ಯ ಅದಕ್ಕಾಗಿ ಯೋಗಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ.

ಪ್ರತಿಯೊಬ್ಬ ಬಂಧಿಗೆ ಪೌಷ್ಠಿಕ ಆಹಾರವನ್ನು ನೀಡಲಾಗುವುದು. ರಾಷ್ಟ್ರೀಯ ಹಬ್ಬದ ದಿನಗಳಲ್ಲಿ ರೂ. ೩.೦೦ ರಂತೆ ಸಿಹಿ ಪದಾರ್ಥ ವಿತರಣೆ ಮಾಡಲಾಗುವುದು. ಕೈದಿಗಳು ಮಾಡುವ ಕೆಲಸಕ್ಕೆ ಪ್ರೋತ್ಸಾಹದಾಯಕವಾಗಿ ಅವರಿಗೆ ದಿನಗೂಲಿಕೊಡುವ ಪದ್ಧತಿ ಜಾರಿಯಲ್ಲಿದೆ. ಪಾಕಶಾಲೆ ಮತ್ತು ಸ್ವಚ್ಛತಾ ಕೆಲಸಗಾರರಿಗೆ ದಿನಗೂಲಿಯಾಗಿ ಹತ್ತು ರೂಪಾಯಿಯನ್ನು ನೀಡಲಾಗುವುದು. ವಿಚಾರಣಾಧೀನ ಕೈದಿಯು ಪುರುಷರಾಗಲೀ ಅಥವಾ ಮಹಿಳೆಯರಾಗಲೀ ಅವರ ಸ್ವಂತ ಉಡುಪನ್ನು ಧರಿಸಬಹುದು. ಸಜೆಯಾದ ಪುರುಷ ಕೈದಿಗೆ ಬಿಳಿ ಜುಬ್ಬ, ಬಿಳಿ ನೆಹರು ಟೋಪಿ, ಬಿಳಿ ಟವಲನ್ನು ಸಮವಸ್ತ್ರವಾಗಿ ನೀಡಲಾಗುವುದು. ಸಜೆಯಾದ ಮಹಿಳಾ ಕೈದಿಗಳಿಗೆ ಬಿಳಿ ಸೀರೆ, ಬಿಳಿ ಕುಪ್ಪಸ, ಒಳ ಉಡುಪು, ಟವಲ್, ಬಾಚಣಿಗೆ, ಕನ್ನಡಿಯನ್ನು ನೀಡಲಾಗುವುದು. ಮಲಗಲು ಜಮಖಾನೆ, ಕಂಬಳಿ ಎರಡು ಬೆಡ್‌ಶೀಟುಗಳು, ದಿಂಬನ್ನು ಒದಗಿಸಲಾಗುವುದು. ಓದಲು ಆಸಕ್ತಿಯುಳ್ಳ ಬಂಧಿಗಳ ಅನುಕೂಲಕ್ಕಾಗಿ ನಗರ ಕೇಂದ್ರ ಗ್ರಂಥಾಲಯದಿಂದ ಪುಸ್ತಕಗಳು ಲಭ್ಯವಾಗುತ್ತವೆ. ದೈನಂದಿನ ಸಮಾಚಾರಗಳನ್ನು ತಿಳಿಯಲು ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳನ್ನು ಒದಗಿಸಲಾಗುವುದು. ಬಂಧಿತರ ಮನರಂಜನೆಗಾಗಿ ಪ್ರತಿಯೊಂದು ಕೊಠಡಿಯಲ್ಲಿ ದೂರದರ್ಶನ ಸೆಟ್‌ಗಳ ಸೌಲಭ್ಯವನ್ನು ಒದಗಿಸಲಾಗಿದೆ. ಹಾಗೆಯೇ ಅವರಲ್ಲಿ ಉತ್ಸಾಹ, ಕ್ರೀಡಾ ಮನೋಭಾವ ಹಾಗೂ ಕ್ರೀಡಾ ಕೌಶಲ್ಯವನ್ನು ಬೆಳೆಸಲು ಒಳಾಂಗಣ ಹಾಗೂ ಹೊರಾಂಗಣ ಕ್ರೀಡೆಗಳನ್ನು ಆಡಲು ಅವಕಾಶ ಕಲ್ಪಿಸಲಾಗಿದೆ. ಚೆಸ್, ಕೇರಂ, ಕಬಡ್ಡಿ, ವಾಲಿಬಾಲ್ ಆಡುವ ವ್ಯವಸ್ಥೆಯಿದೆ. ಬಂಧಿತರ ಮನಸ್ಸಿನ ಮೇಲೆ ಸತ್ಪರಿಣಾಮವನ್ನುಂಟು ಮಾಡಲು

ಹಾಗೂ ಅವರ ಮನಸ್ಸಿನ ಚಿಂತೆಯನ್ನು ದೂರ ಮಾಡಲು ನಿಯತವಾಗಿ ಭಜನೆ, ಕೀರ್ತನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ. ಅಲ್ಲದೆ, ಅವರನ್ನು ಸಚ್ಚಾರಿತ್ರೆಯಾಗಿ ರೂಪಿಸಲು, ನೈತಿಕ ಮೌಲ್ಯಗಳನ್ನು ಅವರಲ್ಲಿ ಬೆಳೆಸಲು ಧಾರ್ಮಿಕ, ಆಧ್ಯಾತ್ಮಿಕ ಪ್ರವಚನಗಳನ್ನು ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ. ಮಹಿಳಾ ಕೈದಿಗಳಿಗಾಗಿ ಮಹಿಳಾ ದಿನಾಚರಣೆಯನ್ನು ಆಚರಿಸಲಾಗುತ್ತದೆ.

ಜಿಲ್ಲೆಯ ಕಾರಾಗೃಹಕ್ಕೆ ಆಗಾಗ ಪೊಲೀಸು ಮಹಾ ನಿರ್ದೇಶಕರು, ಕಾರಾಗೃಹಗಳ ಮಹಾನಿರೀಕ್ಷಕರು, ಕಾರಾಗೃಹಗಳ ಉಪ ಮಹಾನಿರೀಕ್ಷಕರು, ಪ್ರಧಾನ ಸತ್ರ ನ್ಯಾಯಾಧೀಶರು, ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲೆಯ ಪೊಲೀಸು ಅಧೀಕ್ಷಕರು ಭೇಟಿ ನೀಡಿ ಅಲ್ಲಿನ ಕೆಲಸ ಕಾರ್ಯಗಳ ಸಮರ್ಪಕತೆಯ ಬಗ್ಗೆ ಪರಿಶೀಲಿಸುತ್ತಾರೆ. ವಿಚಾರಣಾಧೀನ ಬಂಧಿಗಳಿಗೆ ವಾರಕ್ಕೊಮ್ಮೆ ತಮ್ಮನ್ನು ನೋಡಲು ಬಂದ ನೆಂಟರಿಷ್ಟರನ್ನು ಭೇಟಿ ಮಾಡುವ ಅವಕಾಶವನ್ನು ಹಾಗೂ ಸಜೆಯಾದ ಬಂಧಿಗಳು ಹದಿನೈದು ದಿನಗಳಿಗೊಮ್ಮೆ ತಮ್ಮನ್ನು ನೋಡಲು ಬಂದ ಬಂಧುಬಳಗವನ್ನು ಭೇಟಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

**ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯ (ಡೈರೆಕ್ಟರೇಟ್ ಆಫ್ ಪ್ರಾಸಿಕ್ಯೂಷನ್ ಅಂಡ್ ಗವರ್ನ್‌ಮೆಂಟ್ ಲಿಟಿಗೇಷನ್)**

ಕರ್ನಾಟಕ ಸರ್ಕಾರವು ಲಾ ಕಮಿಷನ್ ೧೪ನೆಯ ಮತ್ತು ೪೧ನೆಯ ವರದಿಗಳಲ್ಲಿ ಇರುವ ಶಿಫಾರಸ್ಸುಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ೧೯೭೭ರಲ್ಲಿ ಕರ್ನಾಟಕ ರಾಜ್ಯದಲ್ಲಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯವನ್ನು ಸ್ಥಾಪಿಸಿದೆ. ಕ್ರಿಮಿನಲ್ ಮೊಕದ್ದಮೆಗಳನ್ನು ಪರಿಣಾಮಕಾರಿಯಾಗಿ ನ್ಯಾಯಾಲಯಗಳಲ್ಲಿ ನಡೆಸುವುದಕ್ಕಾಗಿ ಮತ್ತು ಮೊಕದ್ದಮೆಗಳಲ್ಲಿ ಪೊಲೀಸು ಇಲಾಖೆ ಸಂಗ್ರಹಿಸಿರುವ ಮಾಹಿತಿ ಸಮಗ್ರವಾಗಿದೆಯೇ ಎಂಬುದನ್ನು ಪರೀಕ್ಷಿಸುವ ಸಲುವಾಗಿ ಪ್ರತ್ಯೇಕ ಮತ್ತು ಸ್ವತಂತ್ರವಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯು ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ, ತಾಲೂಕು, ವಿಭಾಗೀಯ ಮಟ್ಟದಲ್ಲಿಯೂ ಇಲಾಖೆ ಕಾರ್ಯಪ್ರವೃತ್ತವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಭಿಯೋಗ ಉಪ ನಿರ್ದೇಶಕರ ಕಚೇರಿಯು ೧೫-೬-೧೯೮೫ ರಿಂದ ಪ್ರಾರಂಭವಾಗಿರುತ್ತದೆ. ಇದು ವಿಭಾಗೀಯ ಕಚೇರಿಯಾಗಿದ್ದು, ಮಂಗಳೂರಿನಲ್ಲಿ ಕೇಂದ್ರ ಸ್ಥಾನವನ್ನು ಹೊಂದಿದೆ. ಮಂಗಳೂರಿನಲ್ಲಿ ವಿಭಾಗೀಯ ಕಚೇರಿಯಿದ್ದು, ಇದರ ವ್ಯಾಪ್ತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ ಬರುತ್ತದೆ. ಸರ್ಕಾರಿ ಆದೇಶ ಸಂಖ್ಯೆ ಲಾ:೧೬:ಪಿಪಿಇ:೭೯:ದಿನಾಂಕ: ೧೧-೪-೧೯೭೯ರ ಮೇರೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ, ಬಂಟ್ವಾಳ, ಕಾರ್ಕಳ, ಪುತ್ತೂರು, ಬೆಳ್ತಂಗಡಿ, ಸುಳ್ಯ ತಾಲೂಕುಗಳಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಕಚೇರಿಯು ಪ್ರಾರಂಭವಾಗಿರುತ್ತದೆ.

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯದಡಿ ಬರುವ ಮಂಗಳೂರು ವಿಭಾಗೀಯ ಕಚೇರಿಯಲ್ಲಿ ಅಭಿಯೋಗ ಉಪ ನಿರ್ದೇಶಕರು ಮುಖ್ಯಾಧಿಕಾರಿಯಾಗಿರುತ್ತಾರೆ. ಅವರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಸಹಾಯಕ ಸರ್ಕಾರಿ ಅಭಿಯೋಜಕರು ಹಾಗೂ ಸರ್ಕಾರಿ ಅಭಿಯೋಜಕರು ಕ್ರಿಮಿನಲ್ ಪ್ರಕರಣಗಳಲ್ಲಿ ನೀಡುವ ಅಭಿಪ್ರಾಯ ಮತ್ತು ಕಡತಗಳನ್ನು ಪರಿಶೀಲಿಸಿ, ಅರ್ಹ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸುವ ಸಲುವಾಗಿ ಮೇಲಾಧಿಕಾರಿಗಳಿಗೆ ಕಡತಗಳನ್ನು ತಮ್ಮ ಅಭಿಪ್ರಾಯದೊಂದಿಗೆ ಸಲ್ಲಿಸುವ ಕೆಲಸವನ್ನು ತಮ್ಮ ದೈನಂದಿನ ಆಡಳಿತಾತ್ಮಕ ಕರ್ತವ್ಯಗಳೊಂದಿಗೆ ನಿರ್ವಹಿಸುತ್ತಾರೆ. ಜಿಲ್ಲೆಯ ಪೊಲೀಸು ಅಧೀಕ್ಷಕರಿಗೆ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸುವ ಸಂಬಂಧದಲ್ಲಿ ಒಬ್ಬ ಸಹಾಯಕ ಅಭಿಯೋಗ ನಿರ್ದೇಶಕರಿರುತ್ತಾರೆ.

ನ್ಯಾಯಾಂಗ ಇಲಾಖೆಯು ದಕ್ಷಿಣ ಕನ್ನಡ ಜಿಲ್ಲಾ ಮಟ್ಟದಲ್ಲಿ ಏರ್ಪಡಿಸುವ ಸಮನ್ವಯ ಸಭೆಗಳಲ್ಲಿ ಹಲವಾರು ವರ್ಷಗಳಿಂದ ಬಾಕಿಯಿರುವಂಥ ಮೊಕದ್ದಮೆಗಳ ತ್ವರಿತ ವಿಲೇವಾರಿ ಕುರಿತು ಚರ್ಚೆ ನಡೆಸುತ್ತಿದ್ದು, ಈ ಸಭೆಗಳಲ್ಲಿ ಜಿಲ್ಲೆಯ ಸರ್ಕಾರಿ ಅಭಿಯೋಜಕರು ಭಾಗವಹಿಸುತ್ತಾರೆ. ಅಭಿಯೋಜಕರು ಭಾಗವಹಿಸುವುದರಿಂದ, ಪೊಲೀಸು ಇಲಾಖೆ, ನ್ಯಾಯಾಂಗ ಇಲಾಖೆಯ ಸಹಕಾರದಿಂದ ಮೊಕದ್ದಮೆಗಳು ತ್ವರಿತ ವಿಲೇವಾರಿಯಾಗುತ್ತದೆ. ಈ ಇಲಾಖೆಯ ಅಧಿಕಾರಿಗಳು ಕಾನೂನು ನೆರವು ಪ್ರಾಧಿಕಾರದ ಪದಾಧಿಕಾರಿಗಳೊಂದಿಗೆ ಸಹಕರಿಸುವ ಮೂಲಕ ಸಮಾಜದ ದುರ್ಬಲ ವರ್ಗದ ಜನರಿಗಾಗಿ ಕಾನೂನು ನೆರವು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಈ ವಿಷಯದಲ್ಲಿ ಜಿಲ್ಲಾ ಪೊಲೀಸು ಅಧೀಕ್ಷಕರಿಗೆ ಒದಗಿಸಿರುವ ಸಹಾಯಕ ಅಭಿಯೋಗ ನಿರ್ದೇಶಕರು ಜಿಲ್ಲಾ ಕಾನೂನು ನೆರವು ಸಮಿತಿಯ

ಸದಸ್ಯರಾಗಿರುತ್ತಾರೆ ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರು ತಾಲೂಕು ಕಾನೂನು ನೆರವು ಸಮಿತಿಯ ಸದಸ್ಯರಾಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಅಭಿಯೋಗ ಉಪ ನಿರ್ದೇಶಕರ ಕಚೇರಿ, ಸರ್ಕಾರಿ ಆಭಿಯೋಜಕರ ಕಚೇರಿ ಹಾಗೂ ಸಹಾಯಕ ಅಭಿಯೋಗ ನಿರ್ದೇಶಕರ ಕಚೇರಿ ಮತ್ತು ತಾಲೂಕು ಮಟ್ಟದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಕಚೇರಿ ಕಾರ್ಯನಿರ್ವಹಿಸುತ್ತದೆ.

ಸರ್ಕಾರಿ ಅಭಿಯೋಜಕರು ಜಿಲ್ಲಾ ಕೇಂದ್ರದಲ್ಲಿ ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರು ತಾಲೂಕು ಮಟ್ಟದಲ್ಲಿ ಕ್ರಿಮಿನಲ್ ಪ್ರಕರಣಗಳನ್ನು ಸರ್ಕಾರದ ಪರವಾಗಿ ಪ್ರತಿನಿಧಿಸುತ್ತಾರೆ. ಪ್ರಕರಣಗಳು ವಿಲೇವಾರಿಯಾದ ನಂತರ ಆ ಪ್ರಕರಣಗಳ ತೀರ್ಪುಗಳು ಅಥವಾ ಆದೇಶದ ಪ್ರತಿಗಳಿಗೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುತ್ತಾರೆ. ಅವುಗಳನ್ನು ನ್ಯಾಯಾಲಯದಿಂದ ಪಡೆದು ಪರಿಶೀಲಿಸಿ ಪ್ರಕರಣಗಳ ತೀರ್ಪು/ಆದೇಶಗಳನ್ನು ಕುರಿತು ಅಭಿಪ್ರಾಯ ನೀಡುವ ಕೆಲಸವನ್ನು ನಿರ್ವಹಿಸುತ್ತಾರೆ. ಸರ್ಕಾರಿ ಅಭಿಯೋಜಕರು ಅಭಿಪ್ರಾಯ ಕಡತಗಳನ್ನು ವಿಭಾಗೀಯ ಕಚೇರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಪೂರ್ಣ ದಾಖಲೆಯೊಂದಿಗೆ ಸಲ್ಲಿಸುತ್ತಾರೆ.

**ಕೋಷ್ಟಕ ೧೦.೧೭ : ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ೧೯೯೯ರ ಸಾಲಿನಿಂದ ೨೦೦೪ರ ವರೆಗಿನ ಕ್ರಿಮಿನಲ್ ಪ್ರಕರಣಗಳ ಮಾಹಿತಿ**

| ವರ್ಷ | ವಿಲೇವಾರಿ | ಶಿಕ್ಷೆ | ಪರಿಶೀಲಿಸಿದ ಪ್ರಕರಣಗಳು | ಮೇಲ್ಮನವಿಗೆ ಶಿಫಾರಸ್ಸು | ಪರಿಷ್ಕರಣಕ್ಕೆ ಶಿಫಾರಸ್ಸು | ಮೇಲ್ಮನವಿಗಾಗಲೀ ಪರಿಷ್ಕರಣಕ್ಕಾಗಲೀ ಶಿಫಾರಸ್ಸು ಮಾಡಿಲ್ಲದ ಪ್ರಕರಣಗಳು |
|---|---|---|---|---|---|---|
| ೧೯೯೯ | ೧೧,೨೧೨ | ೨,೪೫೩ | ೪,೦೭೭ | ೧೧೭ | ೧೯ | ೩,೯೪೧ |
| ೨೦೦೦ | ೧೨,೬೮೬ | ೨,೭೩೯ | ೪,೦೪೭ | ೧೪೨ | ೨೨ | ೩,೮೮೩ |
| ೨೦೦೧ | ೧೩,೫೬೭ | ೩,೨೧೯ | ೪,೩೩೪ | ೧೩೮ | ೦೯ | ೪,೧೮೭ |
| ೨೦೦೨ | ೧೩,೮೧೪ | ೩,೩೫೬ | ೫,೭೩೪ | ೨೪೬ | ೧೦ | ೫,೪೭೮ |
| ೨೦೦೩ | ೧೩,೮೦೩ | ೩,೯೬೫ | ೬,೮೮೩ | ೩೯೩ | ೦೪ | ೬,೪೮೬ |
| ೨೦೦೪ | ೧೪,೭೪೨ | ೩,೯೬೨ | ೬,೪೯೦ | ೭೯ | ೦೩ | ೬,೪೦೮ |
| ಒಟ್ಟು | ೭೯,೮೨೪ | ೧೯,೬೮೪ | ೩೧,೫೬೫ | ೧,೧೧೫ | ೬೭ | ೩೦,೩೮೩ |

**ಕೋಷ್ಟಕ ೧೦.೧೮ : ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ೧೯೯೯ರ ಸಾಲಿನಿಂದ ೨೦೦೪ರ ವರೆಗಿನ ಸಿವಿಲ್ ಪ್ರಕರಣಗಳ ಮಾಹಿತಿ**

| ವರ್ಷ | ಪರಿಶೀಲಿಸಲಾದ ತೀರ್ಪು ಮತ್ತು ಆದೇಶಗಳ ಸಂಖ್ಯೆ | ಮೇಲ್ಮನವಿ ಸಲ್ಲಿಸಲು ಶಿಫಾರಸ್ಸು ಮಾಡಿದ ಪ್ರಕರಣದ ಸಂಖ್ಯೆ | ಮೇಲ್ಮನವಿಗಾಗಲೀ ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸುವುದಕ್ಕಾಗಲೀ ಶಿಫಾರಸ್ಸು ಮಾಡಿಲ್ಲದ ಪ್ರಕರಣಗಳು | ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಶಿಫಾರಸ್ಸು ಮಾಡಿದ ಪ್ರಕರಣಗಳ ಸಂಖ್ಯೆ |
|---|---|---|---|---|
| ೧೯೯೯ | ೧೧೨ | ೦೬ | ೧೦೪ | ೨ |
| ೨೦೦೦ | ೧೫೪ | ೨೧ | ೧೩೩ | – |
| ೨೦೦೧ | ೧೮೯ | ೧೮ | ೧೬೬ | ೫ |
| ೨೦೦೨ | ೧೭೪ | ೨೬ | ೧೪೧ | ೭ |
| ೨೦೦೩ | ೧೬೩ | ೧೨ | ೧೪೮ | ೩ |
| ೨೦೦೪ | ೧೮೨ | ೧೫ | ೧೬೨ | ೫ |
| ಒಟ್ಟು | ೯೭೪ | ೯೮ | ೮೫೪ | ೨೨ |

**ಆಧಾರ:** ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯ, ಬೆಂಗಳೂರು.

## ಅಗ್ನಿಶಾಮಕ ಸೇವೆಗಳು

ಜಿಲ್ಲೆಯ ಅಗ್ನಿಶಾಮಕ ಕಚೇರಿಯು ಸೇವಾ ಮನೋಭಾವದಿಂದ ಕಾರ್ಯಮಾಡುವ ಸಂಸ್ಥೆಯಾಗಿದ್ದು, ಇದರ ಪ್ರಮುಖ ಕಾರ್ಯವು ಅಗ್ನಿಶಮನ ಮತ್ತು ರಕ್ಷಣಾ ಕಾರ್ಯಗಳನ್ನು ನಿರ್ವಹಿಸುವುದಾಗಿದೆ. ಸಾರ್ವಜನಿಕರ ಆಸ್ತಿಪಾಸ್ತಿಗಳು ಬೆಂಕಿಗೆ ತುತ್ತಾದಾಗ ಅವರ ಸ್ವತ್ತನ್ನು ಕಾಪಾಡುವ ಹಾಗೂ ಬೆಂಕಿ ಆಕಸ್ಮಿಕದಲ್ಲಿ ಜನರ ಪ್ರಾಣವನ್ನು ಕಾಪಾಡುವ ಗುರುತರ ಹೊಣೆ ಇವರದ್ದಾಗಿದೆ.

ಬೆಂಗಳೂರಿನಲ್ಲಿರುವ ಅಗ್ನಿಶಾಮಕ ನಿರ್ದೇಶನಾಲಯವು ಕರ್ನಾಟಕದ ಎಲ್ಲ ಅಗ್ನಿಶಾಮಕ ಘಟಕಗಳನ್ನು ನಿಯಂತ್ರಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಐದು ಅಗ್ನಿಶಾಮಕ ಠಾಣೆಗಳು ಕೆಲಸ ನಿರ್ವಹಿಸುತ್ತಿವೆ. ಮಂಗಳೂರಿನಲ್ಲಿ ಎರಡು ಅಗ್ನಿಶಾಮಕ ಠಾಣೆಗಳು, ಪುತ್ತೂರಿನಲ್ಲಿ ಒಂದು ಅಗ್ನಿಶಾಮಕ ಠಾಣೆ, ಮೂಡಬಿದ್ರಿಯಲ್ಲಿ ಒಂದು ಅಗ್ನಿಶಾಮಕ ಠಾಣೆ ಮತ್ತು ಬೆಳ್ತಂಗಡಿಯಲ್ಲಿ ಒಂದು ಅಗ್ನಿಶಾಮಕ ಠಾಣೆಯು ಕಾರ್ಯನಿರತವಾಗಿದೆ. ಸದರಿ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಿದ ವರ್ಷ ಈ ಮುಂದಿನಂತಿದೆ:

| | | | |
|---|---|---|---|
| ೧. | ಪಾಂಡೇಶ್ವರ, ಮಂಗಳೂರು | – | ೧೯೪೨ |
| ೨. | ಕದ್ರಿ, ಮಂಗಳೂರು | – | ೨೪–೧೦–೧೯೯೬ |
| ೩. | ಪುತ್ತೂರು | – | ೧೬–೦೫–೧೯೯೨ |
| ೪. | ಮೂಡಬಿದ್ರಿ | – | ೦೩–೦೩–೧೯೯೭ |
| ೫. | ಬೆಳ್ತಂಗಡಿ | – | ೨೯–೦೯–೧೯೯೭ |

### ಸಿಬ್ಬಂದಿ ವಿವರ

ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯ ಅಗ್ನಿಶಾಮಕ ಠಾಣೆಯ ಸಿಬ್ಬಂದಿ ವಿವರ ಈ ಮುಂದಿನಂತಿದೆ. (ದಿನಾಂಕ ೧೯–೭–೦೫ ರಲ್ಲಿರುವಂತೆ)

**ಕೋಷ್ಟಕ ೧೦.೧೯**

| ಕ್ರ. ಸಂ | ಹುದ್ದೆಯ ಹೆಸರು | ಮಂಜೂರಾದ ಹುದ್ದೆ | ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ | ರಿಕ್ತ ಸ್ಥಾನ |
|---|---|---|---|---|
| ೧. | ಮುಖ್ಯ ಅಗ್ನಿಶಾಮಕ ಅಧಿಕಾರಿ | ೧ | ೧ | – |
| ೨. | ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ | ೧ | ೧ | – |
| ೩. | ಜಿಲ್ಲಾ ಅಗ್ನಿಶಾಮಕ ಅಧಿಕಾರಿ | ೧ | ೧ | – |
| ೪. | ಅಗ್ನಿಶಾಮಕ ಠಾಣಾಧಿಕಾರಿ | ೫ | ೧ | ೪ |
| ೫. | ಸಹ ಅಗ್ನಿಶಾಮಕ ಠಾಣಾಧಿಕಾರಿ | ೫ | ೫ | – |
| ೬. | ಪ್ರಮುಖ ಅಗ್ನಿಶಾಮಕರು | ೨೪ | ೨೪ | – |
| ೭. | ತಾಂತ್ರಿಕ ಚಾಲಕ | ೫ | ೧ | ೪ |
| ೮. | ಅಗ್ನಿಶಾಮಕ ಚಾಲಕರು | ೨೭ | ೨೨ | ೫ |
| ೯. | ಅಗ್ನಿಶಾಮಕರು | ೧೦೪ | ೫೨ | ೫೨ |
| | ಒಟ್ಟು | ೧೭೩ | ೧೦೮ | ೬೫ |

**ಆಧಾರ**: ಜಿಲ್ಲಾ ಅಗ್ನಿಶಾಮಕ ಠಾಣೆ, ಮಂಗಳೂರು.

ಹಿಂದೆ ಅಗ್ನಿಶಾಮಕ ದಳವು ಪೊಲೀಸು ಇಲಾಖೆಯ ನಿಯಂತ್ರಣದಲ್ಲಿತ್ತು. ಈಗ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ಪೊಲೀಸು ಇಲಾಖೆಗೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ಹಲವು ರೀತಿಯಲ್ಲಿ ನೆರವು ನೀಡುವುದು. ಜಿಲ್ಲೆಯಲ್ಲಿ ಕೋಮು ಗಲಭೆ ಉಂಟಾದ ಸಂದರ್ಭದಲ್ಲಿ, ಸಾರ್ವಜನಿಕ –ಖಾಸಗಿ ಆಸ್ತಿ ರಕ್ಷಿಸುವಲ್ಲಿ, ಅಲ್ಲದೆ ಗಣ್ಯವ್ಯಕ್ತಿಗಳು ಜಿಲ್ಲೆಗೆ ಆಗಮಿಸುವಾಗ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಪೊಲೀಸು ಇಲಾಖೆಯೊಂದಿಗೆ ಸಹಕರಿಸಿ ಕರ್ತವ್ಯ ನಿರ್ವಹಿಸುವುದು ಹಾಗೂ ಜಿಲ್ಲಾ ಪೊಲೀಸು ಇಲಾಖೆಯ ಸೂಚನೆಯಂತೆ ಕೋರುವಾಗ ಸಭೆ, ಸಮಾರಂಭಗಳಲ್ಲಿ ನಿಲುಗಡೆ ಕರ್ತವ್ಯವನ್ನು ನಿರ್ವಹಿಸುವುದು. ಇಲಾಖೆಯು ಪೊಲೀಸು ಇಲಾಖೆಗೆ ೧೯೯೦–೯೧ರಲ್ಲಿ ಪುತ್ತೂರು, ಸುಳ್ಯ ಮುಂತಾದ ಸ್ಥಳಗಳಲ್ಲಿ ಕೋಮು ಗಲಭೆಯಾದಾಗ, ಅಗ್ನಿಶಾಮಕ ಸಲಕರಣೆಗಳು ಮತ್ತು ಸಿಬ್ಬಂದಿಯನ್ನು ಒದಗಿಸುವ ಮೂಲಕ ಸಹಾಯ ನೀಡಿದ್ದಿತು.  ೨೦೦೪ರಲ್ಲಿ ಇಲಾಖೆಯು ೪೪೩ ಅಗ್ನಿ ಕರೆಗಳನ್ನು ಸ್ವೀಕರಿಸಿದೆ. ಬೆಂಕಿಗೆ ತುತ್ತಾದ ಮೌಲ್ಯವು ರೂ. ೬,೩೦,೫೦,೦೦೦ ಅದರಲ್ಲಿ ರೂ. ೫,೩೨,೦೦,೨೫೦ ಮೌಲ್ಯದ ಆಸ್ತಿಯನ್ನು ಉಳಿಸಲಾಗಿದೆ.

೧೯೯೦ರಲ್ಲಿ ಕಾರ್ಪೊರೇಷನ್ ಬ್ಯಾಂಕ್ ಮುಖ್ಯ ಕಚೇರಿ, ಪಾಂಡೇಶ್ವರದಲ್ಲಿ ಬೆಂಕಿ ಕಾಣಿಸಿಕೊಂಡಾಗ ರೂ. ೧೬,೨೫,೦೦೦ ಆಸ್ತಿಯನ್ನು ಬೆಂಕಿಯಿಂದ ರಕ್ಷಿಸಲಾಗಿರುತ್ತದೆ. ೧೯೯೨ರಲ್ಲಿ ಮಂಗಳೂರು ತಾಲೂಕಿನ ತೊಕೊಟ್ಟು, ಉಳ್ಳಾಲ, ಸುರತ್ಕಲ್, ಬೈಕಂಪಾಡಿ, ಕಾವೂರು, ಕುಳೂರು ಪ್ರದೇಶದಲ್ಲಿ ಸಂಭವಿಸಿದ ಕೋಮು ಗಲಭೆಯಲ್ಲಿ ವಾಸದ ಮನೆಗಳಿಗೆ ಮತ್ತು ಅಂಗಡಿ ಮುಂಗಟ್ಟುಗಳಿಗೆ ಬೆಂಕಿ ಹತ್ತಿದಾಗ ರೂ. ೨೮,೯೬,೮೦೦ಗಳ ಮೊತ್ತದ ಆಸ್ತಿಯನ್ನು ರಕ್ಷಿಸಲಾಗಿರುತ್ತದೆ. ೧೯೯೩ರಲ್ಲಿ ಕುದುರೆಮುಖ ಐರನ್ ಅಂಡ್ ಓರ್ (ಕಬ್ಬಿಣ ಮತ್ತು ಅದಿರು) ಕಂ. ಲಿ. ಕಬ್ಬಿಣ ಹದಗೊಳಿಸುವ ಘಟಕಕ್ಕೆ ಬೆಂಕಿ ಬಿದ್ದ ಸಂದರ್ಭದಲ್ಲಿ ರೂ. ೧,೬೦,೦೦,೦೦೦ ಮೊತ್ತದ ಆಸ್ತಿಯನ್ನು ರಕ್ಷಿಸಲಾಗಿದೆ. ೧೯೯೩ರಲ್ಲಿ ಮಂಗಳೂರು ತಾಲೂಕು ಬೆಂಗ್ರೆಯಲ್ಲಿ ನದಿ ದಡದಲ್ಲಿ ನಿಲ್ಲಿಸಿದ್ದ ಬೋಟುಗಳಿಗೆ ಬೆಂಕಿ ಬಿದ್ದಾಗ ರೂ. ೯೦,೦೦,೦೦೦ ಮೊತ್ತದ ಆಸ್ತಿಯನ್ನು ರಕ್ಷಿಸಲಾಗಿದೆ– ಇವು ೧೯೯೦ ರಿಂದ ೨೦೦೪ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಅಗ್ನಿಶಾಮಕ ಠಾಣೆಯಲ್ಲಿ ಕೈಗೊಂಡ ವಿಶೇಷ ಕಾರ್ಯಾಚರಣೆಗಳಲ್ಲಿ ಪ್ರಮುಖವಾದವುಗಳಾಗಿವೆ.

ಅಗ್ನಿಶಾಮಕ ಸೇವೆಯ ಸಿಬ್ಬಂದಿಯನ್ನು ಪ್ರೋತ್ಸಾಹಿಸುವ ಸಲುವಾಗಿ ಮಾನ್ಯ ರಾಷ್ಟ್ರಪತಿಯವರ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಪದಕವನ್ನು ನೀಡಲಾಗುವುದು.   ೧೯೯೦ ರಿಂದ ೨೦೦೫ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಅಗ್ನಿಶಾಮಕ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ಶ್ರೇಣಿಯ ಅಧಿಕಾರಿ– ಸಿಬ್ಬಂದಿಯವರು ಸಲ್ಲಿಸಿರುವ ಶ್ಲಾಘನೀಯ ಸೇವೆಗಾಗಿ ಒಟ್ಟು ಮುಖ್ಯಮಂತ್ರಿಗಳಿಂದ ಮೂರು ಕಂಚಿನ ಪದಕ, ಎಂಟು ಬೆಳ್ಳಿಯ ಪದಕ, ನಾಲ್ಕು ಚಿನ್ನದ ಪದಕ, ಹತ್ತು ರಾಷ್ಟ್ರಪತಿ ಪದಕ, ಒಂದು ರಾಷ್ಟ್ರಪತಿ ವಿಶಿಷ್ಟ ಸೇವಾ ಪದಕವನ್ನು ಪಡೆದಿದ್ದಾರೆ.

ಅಗ್ನಿಶಾಮಕ ಮತ್ತು  ತುರ್ತು ಸೇವೆಯಲ್ಲಿ ಇಲಾಖಾ ಕ್ಷೇಮನಿಧಿ ಸೌಲಭ್ಯವಿದ್ದು, ಈ ನಿಧಿಯಿಂದ ಸಿಬ್ಬಂದಿಯ ಮರಣೋತ್ತರ ಕ್ರಿಯೆಗೆ, ಸಂದರ್ಭಾನುಸಾರ ವೈದ್ಯಕೀಯ ಚಿಕಿತ್ಸೆಗೆ ಹಾಗೂ ಮಕ್ಕಳ ವ್ಯಾಸಂಗಕ್ಕಾಗಿ ಧನಸಹಾಯವನ್ನು ನೀಡಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ನಿಧಿಯಿಂದ ೧೯೯೫ ರಿಂದ ೨೦೦೪ರ ವರೆಗೆ ಸುಮಾರು ೧೧೦ ಅಧಿಕಾರಿ ಹಾಗೂ ಸಿಬ್ಬಂದಿ ಮತ್ತು ಅವರ ಕುಟುಂಬವು ಪ್ರಯೋಜನ ಪಡೆದಿರುವುದು. ಇಲಾಖೆಯು ಅಗ್ನಿಶಾಮಕ ದಿನಾಚರಣೆಯ ಅಂಗವಾಗಿ ಪ್ರತಿ ವರ್ಷ ಏಪ್ರಿಲ್ ೧೪ ರಿಂದ ೨೦ ರ ವರೆಗೆ ಬೆಂಕಿ ಆಕಸ್ಮಿಕವನ್ನು ತಡೆಯುವ ಬಗ್ಗೆ ಉಪನ್ಯಾಸ ಹಾಗೂ ಸಾರ್ವಜನಿಕರಿಗೆ, ಕೈಗಾರಿಕೆಯ ಕಾರ್ಮಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆಯನ್ನು ನಡೆಸುತ್ತದೆ. ಅಲ್ಲದೆ, ವಿವಿಧ ಸಂಘಸಂಸ್ಥೆ, ಶಾಲಾ ಕಾಲೇಜು ಆಡಳಿತ ಮಂಡಳಿ ಹಾಗೂ ಸೇವಾಶಿಬಿರ ನಡೆಸುವ ಸಂಸ್ಥೆಯಿಂದ ಅಗ್ನಿಮುಂಜಾಗ್ರತೆ ಮತ್ತು ಅಗ್ನಿಶಮನದ ಬಗ್ಗೆ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಯನ್ನು ನಡೆಸಲಾಗುತ್ತದೆ.

## ಗೃಹರಕ್ಷಕ ದಳ

೧೯೪೬ರ ಡಿಸೆಂಬರ್ ತಿಂಗಳಲ್ಲಿ ಮೊತ್ತ ಮೊದಲ ಬಾರಿಗೆ ಮುಂಬಯಿಯಲ್ಲಿ ಪ್ರಾರಂಭವಾದ ಗೃಹರಕ್ಷಕ ಸಂಸ್ಥೆಯು ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಇದ್ದು  ೧೯೬೫ರಲ್ಲಿ  ದಕ್ಷಿಣ ಕನ್ನಡ ಜಲ್ಲೆಯ ಮಂಗಳೂರಿನಲ್ಲಿ ಪ್ರಾರಂಭವಾಯಿತು. ೧೯೬೨ರ ಕರ್ನಾಟಕ ಗೃಹರಕ್ಷಕ ಕಾಯಿದೆಯ ಮೇರೆಗೆ ರಚಿತವಾದ ಗೃಹರಕ್ಷಕ ದಳವು ಮೂಲತಃ ಸ್ವಯಂಸೇವಾ ಸಂಸ್ಥೆಯಾಗಿದೆ. ಸೇವಾ ಮನೋಭಾವವುಳ್ಳ, ದೇಹಾರೋಗ್ಯ ಹೊಂದಿರುವ, ೨೦ ರಿಂದ ೪೫ ವರ್ಷದೊಳಗಿನ ಯಾವುದೇ ಕ್ಷೇತ್ರದಲ್ಲಿರುವ ಸ್ತ್ರೀ–ಪುರುಷರು

ಇದರ ಸದಸ್ಯರಾಗಬಹುದಾಗಿದೆ. ಆದರೆ, ಆತ ಯಾವುದೇ ಶಿಕ್ಷೆ ಅನುಭವಿಸಿರದ, ಯಾವುದೇ ಕ್ರಿಮಿನಲ್ ಮೊಕದ್ದಮೆಯಿರದ ವ್ಯಕ್ತಿಯಾಗಿರಬೇಕು. ಗೃಹರಕ್ಷಕರಾಗಿ ಸೇರಲು ಕನಿಷ್ಠ ವಿದ್ಯಾರ್ಹತೆಯು ಏಳನೆಯ ತರಗತಿಯಾಗಿದೆ. ಗೃಹರಕ್ಷಕ ದಳದ ಸದಸ್ಯನೊಬ್ಬನ ಸೇವಾವಧಿ ಮೂರು ವರ್ಷದವರೆಗೆ ಇರುತ್ತದೆ. ಗೃಹರಕ್ಷಕ ದಳದವರಿಗೆ ರಕ್ಷಣಾ ತರಬೇತಿ, ಅಗ್ನಿಶಾಮಕ ತರಬೇತಿ, ಆಯುಧಗಳ ಪ್ರಯೋಗದಲ್ಲಿ ತರಬೇತಿ, ನಿಸ್ತಂತು ತರಬೇತಿ, ಪ್ರಥಮ ಚಿಕಿತ್ಸೆ ಇವೇ ಮುಂತಾದ ತರಬೇತಿಗಳನ್ನು ನೀಡಲಾಗುವುದು. ೧೯೯೦ ರಿಂದ ೨೦೦೪ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೫೦೦ ಜನ ಗೃಹರಕ್ಷಕರಿಗೆ ಈ ತರಬೇತಿಯನ್ನು ನೀಡಲಾಗಿದೆ.

**ಗೃಹರಕ್ಷಕದಳವು ಪಾಲಿಸುತ್ತಿರುವ ಕಾಯಿದೆಗಳು:**

೧. ೧೯೬೨ರ ಕರ್ನಾಟಕ ಗೃಹರಕ್ಷಕ ದಳ ವಿನಿಯಮಗಳು

೨. ೧೯೬೩ರ ಕರ್ನಾಟಕ ಗೃಹರಕ್ಷಕ ದಳ ನಿಯಮಗಳು

## ೩. ಗೃಹರಕ್ಷಕ ದಳ ಕೈಪಿಡಿ

ಗೃಹರಕ್ಷಕ ಘಟಕಗಳು ಜಿಲ್ಲಾ ಕೇಂದ್ರಗಳು ಮತ್ತು ಹೆಚ್ಚು ಕಡಿಮೆ ಎಲ್ಲ ತಾಲೂಕು ಕೇಂದ್ರಗಳು ಮತ್ತು ಇತರ ಪ್ರಮುಖ ಸ್ಥಳಗಳಲ್ಲಿ ಕೆಲಸ ನಿರ್ವಹಿಸುತ್ತಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ತಾಲೂಕುಗಳಲ್ಲಿರುವ ಗೃಹರಕ್ಷಕ ದಳವು ಪ್ರಾರಂಭವಾದ ವರ್ಷ ಈ ಮುಂದಿನಂತಿದೆ

**ಕೋಷ್ಟಕ ೧೦.೨೦**

| ಕ್ರ.ಸಂ | ತಾಲೂಕು | ಪ್ರಾರಂಭವಾದ ವರ್ಷ | ಗೃಹ ರಕ್ಷಕರ ಸಂಖ್ಯೆ |
|---|---|---|---|
| ೧. | ಮಂಗಳೂರು (ತಾಲೂಕು) | ೧೯೬೫ | ೧೫೦ |
| ೨. | ಬೆಳ್ತಂಗಡಿ (ತಾಲೂಕು) | ೧೯೬೬ | ೪೪ |
| ೩. | ಪುತ್ತೂರು (ತಾಲೂಕು) | ೧೯೬೬ | ೪೪ |
| ೪. | ಪಣಂಬೂರು (ಉಪಘಟಕ) | ೧೯೬೮ | ೪೪ |
| ೫. | ಬಂಟ್ವಾಳ (ತಾಲೂಕು) | ೧೯೭೬ | ೪೪ |
| ೬. | ಸುಳ್ಯ (ತಾಲೂಕು) | ೧೯೭೬ | ೮೦ |
| ೭. | ಮೂಡಬಿದ್ರಿ (ಉಪಘಟಕ) | ೧೯೭೬ | ೪೪ |
| ೮. | ಕಡಬ (ಉಪಘಟಕ) | ೧೯೮೨ | ೪೪ |
| ೯. | ಬೆಳ್ಳಾರೆ (ಉಪಘಟಕ) | ೧೯೮೨ | ೪೪ |
| ೧೦. | ಮುಲ್ಕಿ (ಉಪಘಟಕ) | ೧೯೯೩ | ೪೪ |
| ೧೧. | ವಿಟ್ಲ (ಉಪಘಟಕ) | ೨೦೦೫ | ೪೪ |
| ೧೨. | ಉಪ್ಪಿನಂಗಡಿ (ಉಪಘಟಕ) | ೨೦೦೫ | ೪೪ |

**ಆಧಾರ** : ಗೃಹರಕ್ಷಕ ದಳ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೃಹರಕ್ಷಕ ದಳದ ಆರು ಜನಕ್ಕೆ ಶ್ಲಾಘನೀಯ ಸೇವೆಗಾಗಿ ರಾಷ್ಟ್ರಪತಿ ಪದಕ ದೊರಕಿದೆ. ರಾಜ್ಯದ ಕಮಾಂಡೆಂಟ್ ಜನರಲ್ ಆಫ್ ಹೋಂಗಾರ್ಡ್ಸ್ ಅವರಿಂದ ಜಿಲ್ಲೆಯ ಒಬ್ಬ ಬೋಧಕರಿಗೆ ಎರಡು ಬಾರಿ ನಗದು ಬಹುಮಾನ ದೊರೆತಿದೆ. ಜಿಲ್ಲೆಯಲ್ಲಿನ ಮಹಿಳಾ ಗೃಹರಕ್ಷಕರ ಸಂಖ್ಯೆ ೪೪ ಆಗಿದ್ದು, ಜಿಲ್ಲಾ ಕಮಾಂಡೆಂಟರನ್ನಾಗಿ ಜಿಲ್ಲೆಯ ಗೃಹರಕ್ಷಕರಲ್ಲಿ ಜಿಲ್ಲೆಯ ಗಣ್ಯ ವ್ಯಕ್ತಿಯನ್ನು ಡಿ.ಐ.ಜಿ

ಅವರ ಆದೇಶದಂತೆ ಸರ್ಕಾರವು ನೇಮಕ ಮಾಡುತ್ತದೆ ಹಾಗೂ ಅದು ಗೌರವಪೂರ್ವಕ ಕೆಲಸವಾಗಿರುತ್ತದೆ. ಆದ್ದರಿಂದ ಅವರಿಗೆ ವೇತನವನ್ನು ನೀಡಲಾಗುವುದಿಲ್ಲ. ಅವರು ಯಾವುದೇ ಕೋಮಿನ ಅಥವಾ ರಾಜಕೀಯ ಗುಂಪುಗಳಿಗೆ ಸೇರಿರಬಾರದು. ಇವರು ಜಿಲ್ಲೆಯ ಸ್ವಯಂಸೇವಾ ಅಧಿಕಾರಿಯಾಗಿರುತ್ತಾರೆ. ಜಿಲ್ಲಾ ಕಮಾಂಡೆಂಟ್‌ರು ತುರ್ತು ಸಮಯದಲ್ಲಿ ಗೃಹರಕ್ಷಕರನ್ನು ಕರ್ತವ್ಯಕ್ಕೆ ನಿಯೋಜಿಸುವ ಪ್ರಮುಖ ಅಧಿಕಾರಿಯಾಗಿರುತ್ತಾರೆ. ಇವರು ಗೃಹರಕ್ಷಕ ನೇಮಕಾತಿ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಗೌರವ ಕಮಾಂಡೆಂಟರು ಮುಖ್ಯಸ್ಥರಾಗಿರುವ ಕಚೇರಿಯಲ್ಲಿ ಗೌರವ ಗೃಹರಕ್ಷಕರು ಕೆಲಸ ಮಾಡುತ್ತಾರೆ. ೧೯೬೫ ರಿಂದ ೧೯೮೨ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಗೃಹರಕ್ಷಕ ದಳ ಕಚೇರಿಯ ಸಿಬ್ಬಂದಿ ವಿವರ ಈ ಮುಂದಿನಂತಿದೆ:

**ಗೌರವಾನ್ವಿತ ಅಧಿಕಾರಿಗಳು:** ಜಿಲ್ಲಾ ಕಮಾಂಡೆಂಟ್–೧; ಜಿಲ್ಲಾ ಸೆಕೆಂಡ್ ಇನ್ ಕಮಾಂಡ್–೧; ಸ್ಟಾಫ್ ಆಫೀಸರ್–೧.

**ಸಿಬ್ಬಂದಿ ವಿವರ**

ಪ್ರಥಮ ದರ್ಜೆ ಸಹಾಯಕರು–೧; ದ್ವಿತೀಯ ದರ್ಜೆ ಸಹಾಯಕ ಬೆರಳಚ್ಚುಗಾರ–೧; ಕಚೇರಿ ದಲಾಯಿತ–೧; ಕಚೇರಿ ಕಾವಲುಗಾರ–೧.

**ತರಬೇತಿಗಾರರು (ಸ್ವಯಂಸೇವಾ ಗೃಹರಕ್ಷಕರಿಗೆ)**

ಬೋಧಕರು–೧; ಸಹಾಯಕ ಬೋಧಕರು–೧; ಕಮಾಂಡೆಂಟರಿಗೆ ಸಹಾಯ ಮಾಡಲು ಉಪ ಕಮಾಂಡೆಂಟರ ಹುದ್ದೆಯನ್ನು ಮಂಜೂರು ಮಾಡಲಾಯಿತು.

**೧೯೮೨ರ ಬಳಿಕ ಗೃಹರಕ್ಷಕ ದಳದ ಪುನರ್ ಸಂಘಟಿತ ಸಿಬ್ಬಂದಿ ವಿವರ:**

ಉಪ ಕಮಾಂಡೆಂಟ್–೧; ಕಚೇರಿ ಅಧೀಕ್ಷಕರು–೧; ಪ್ರಥಮ ದರ್ಜೆ ಸಹಾಯಕರು–೧; ಕಚೇರಿ ದಲಾಯಿತ–೧; ಕಚೇರಿ ಕಾವಲುಗಾರ–೧

**ಭತ್ಯೆಗಳು:** ೧೯೯೦ ರಿಂದ ೯೪ರ ವರೆಗೆ ಕವಾಯತು ಭತ್ಯೆ ೩ ರೂಪಾಯಿ, ವಾಷಿಂಗ್ ಭತ್ಯೆ ೩ ದಿನಕ್ಕೆ–೧ ರೂಪಾಯಿ, ಕರ್ತವ್ಯ ಭತ್ಯೆ ರೂ.೩೫.೦೦ ಇದ್ದು, ೧೯೯೫ ರಿಂದ ಕರ್ತವ್ಯ ಭತ್ಯೆ ರೂ. ೭೦.೦೦, ಕವಾಯತು ಭತ್ಯೆ ರೂ. ೧೨.೦೦, ವಾಷಿಂಗ್‌ಭತ್ಯೆ ೩ ದಿನದಿಂದ ೭ ದಿನದವರೆಗೆ ರೂ. ೭.೦೦ ಆಗಿದ್ದಿತು. ಪ್ರಸಕ್ತ (೨೦೦೪ ರಿಂದ), ಕರ್ತವ್ಯ ಭತ್ಯೆ ರೂ. ೯೦, ಕವಾಯತು ಭತ್ಯೆ ರೂ. ೨೨.೫೦ ಹಾಗೂ ವಾಷಿಂಗ್ ಭತ್ಯೆ ೭.೦೦ ರೂಪಾಯಿ (೩ ರಿಂದ ೫ ದಿನಗಳ ವರೆಗೆ) ಇರುವುದು.

೧೯೮೫–೮೬ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ರೆವರೆಂಡ್ ಪೋಪ್ ಜಾನ್‌ಪಾಲ್ ಅವರ ಐತಿಹಾಸಿಕ ಭೇಟಿಯ ಸಂದರ್ಭದಲ್ಲಿ ನಾಲ್ಕು ದಿನಗಳ ಕಾಲ ೬೦೦ ಜನ ಗೃಹರಕ್ಷಕರು ಕಾನೂನು ಮತ್ತು ಶಾಂತಿ ಪಾಲನೆಯಲ್ಲಿ ಪೋಲೀಸರಿಗೆ ನೆರವು ನೀಡಿದರು. ಪ್ರತಿ ವರ್ಷ ಡಿಸೆಂಬರ್‌ನಲ್ಲಿ ಗೃಹರಕ್ಷಕ ದಿನಾಚರಣೆಯನ್ನು ಆಚರಿಸಲಾಗುವುದು. ಅದರ ಪ್ರಯುಕ್ತ ಪರೇಡ್, ಪ್ರಮಾಣವಚನ ಸ್ವೀಕಾರ, ತಾವು ಪಡೆದ ತರಬೇತಿಯ ಸಾರ್ವಜನಿಕ ಪ್ರದರ್ಶನವನ್ನು ನೀಡಲಾಗುವುದು.

**ಪೋಲೀಸು ಆಡಳಿತ**

ದೇಶದಲ್ಲಿ ಆಂತರಿಕ ಶಾಂತಿಯ ಪರಿಪಾಲನೆ ಅಪರಾಧಗಳ ನಿವಾರಣೆ ಮತ್ತು ಕಾನೂನು ಚೌಕಟ್ಟಿನಲ್ಲಿ ಸರ್ಕಾರದ ವಿನಿಯಮಗಳನ್ನು ಜಾರಿಗೆ ತರುವ ಮೂಲಕ ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ಕಾಪಾಡಿ ಅವರಿಗೆ ಹಾಗೂ ಅವರ ಆಸ್ತಿಪಾಸ್ತಿಗಳಿಗೆ ರಕ್ಷಣೆ ಒದಗಿಸುವ ಶಾಸನಬದ್ಧ ವ್ಯವಸ್ಥೆ ಪೋಲೀಸು (polis). ಅಂದರೆ ಗ್ರೀಕ್ ಭಾಷೆಯಲ್ಲಿ ಗ್ರಾಮರಾಜ್ಯದ ಅಧಿಕಾರ ಕೇಂದ್ರ ಎಂದರ್ಥ. ಇದೇ ಇಂದಿನ ಪೋಲೀಸು ಪದದ ವ್ಯುತ್ಪನ್ನ. ದುಷ್ಟ ಶಿಕ್ಷೆ ಶಿಷ್ಟ ರಕ್ಷೆ ಪೋಲೀಸು ವ್ಯವಸ್ಥೆಯ ಉದ್ದೇಶ. ಶಿಕ್ಷೆಯ ವಿಧಾನಗಳು ಮಾತ್ರ ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದಿದೆ.

ಜಿಲ್ಲೆಯ ಗ್ರಾಮಾಡಳಿತಕ್ಕೆ ಸಂಬಂಧಿಸಿದಂತೆ ಇಬ್ಬರು ಅಧಿಕಾರಿಗಳು ಪ್ರಮುಖವಾಗಿದ್ದರು. ಅವರು ಸೇನುಬೋವ ಮತ್ತು ತಳವಾರ. ಇವರಲ್ಲಿ ಊರಿನ ರಕ್ಷಣೆಯ ಹೊಣೆ ತಳವಾರನದು. ತಳವಾರನ ಹೆಸರು ಅನೇಕ ಶಾಸನಗಳಲ್ಲಿ ಉಕ್ತವಾಗಿದೆ.

### ಐತಿಹಾಸಿಕ ಹಿನ್ನೆಲೆ

ಭಾರತದ ಇತರ ಪ್ರದೇಶಗಳಂತೆಯೆ ಪ್ರಾಚೀನ ತುಳವರಲ್ಲೂ ರಾಜನದೇ ಅಗ್ರಸ್ಥಾನವಾಗಿತ್ತು. ಆ ಕಾಲದ ತುಳು ನಾಡನ್ನು ಸುಗಮ ಆಡಳಿತಕ್ಕಾಗಿ ನಾಡುಗಳಾಗಿ ವಿಭಜಿಸಲಾಗಿತ್ತು. ಈ ನಾಡುಗಳ ಅಧಿಕಾರ ಸ್ಥಾನದಲ್ಲಿದ್ದವರು ನಾಡು ಮುದಿಮೆ ಗೆಯ್ಯುತ್ತಿದ್ದರೆಂದು(ನಾಡನ್ನು ಆಳುತ್ತಿದ್ದರು) ಶಾಸನಗಳಲ್ಲಿ ಉಕ್ತವಾಗಿವೆ. ಊರುಗಳನ್ನು ಮಹಾನಗರ, ನಗರ, ನಕರ, ಪುರ ಎಂದು ಗುರುತಿಸಲಾಗಿತ್ತಲ್ಲದೆ, ಆ ಊರುಗಳ ಆಡಳಿತಗಾರರನ್ನು ನಾಯಕರೆಂದು ಕರೆಯಲಾಗುತ್ತಿತ್ತು. ಗ್ರಾಮದ ಮುಖ್ಯಸ್ಥನಿಗೆ ಒಡೆಯನೆಂದು, ಗ್ರಾಮದ ಆಡಳಿತ ವರ್ಗಕ್ಕೆ ಸೇರಿದ ಮತ್ತೊಬ್ಬ ಅಧಿಕಾರಿ ಗ್ರಾಮಣಿ, ಊರಾಳುವ ಮತ್ತು ವೆರ್ಗಡೆ ಅಥವಾ ಹೆಗ್ಗಡೆ. ಊರಾಳುವನು ಊರನ್ನು ಅಂದರೆ ಗ್ರಾಮವನ್ನು ಆಳುವವನು ಈ ಅಂಕಿತವು ತುಳುನಾಡಿನ ಶಾಸನಗಳಲ್ಲಿ ವಿರಳವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ತುಳುವ ಶಾಸನದಲ್ಲಿ ಕಂಡುಬರುವ ಪೆರ್ಗಡೆ ಅಥವಾ ಹೆಗ್ಗಡೆ ಗ್ರಾಮಾಧಿಕಾರಿಗೆ ಅನ್ವಯವಾಗುತ್ತದೆ.

### ಬ್ರಿಟಿಷ್ ಆಡಳಿತದಲ್ಲಿ

ಬಂಗಾಲದ ಪೊಲೀಸು ಪದ್ಧತಿಯನ್ನು ಮದರಾಸು ಪ್ರೆಸಿಡೆನ್ಸಿಗೂ ವಿಸ್ತರಿಸಲಾಯಿತು. ಪ್ರತಿಯೊಂದು ಜಿಲ್ಲೆಯನ್ನು ಸುಮಾರು ಇಪ್ಪತ್ತು ಚದರ ಮೈಲಿಗಳಿಗೆ ಸಣ್ಣ ಪೊಲೀಸು ವ್ಯಾಪ್ತಿಯನ್ನಾಗಿ ವಿಭಜಿಸಲಾಯಿತು. ಪ್ರತಿ ವಿಭಾಗದಲ್ಲಿ ದಾರೋಘಾ (ಪೊಲೀಸ್ ಮುಖ್ಯಸ್ಥ)ಎಂಬ ಪೊಲೀಸು ಅಧಿಕಾರಿ ಮತ್ತು ಒಬ್ಬ ಠಾಣಾದಾರನನ್ನು ನಿಯೋಜಿಸಲಾಯಿತು. ಅವರ ಕೆಳಗೆ ಇಪ್ಪತ್ತರಿಂದ ಐವತ್ತು ಸಶಸ್ತ್ರ ಪೊಲೀಸರಿದ್ದರು. ಅವರು ಜಿಲ್ಲಾಧಿಕಾರಿಯಡಿ ಕೆಲಸ ಮಾಡುತ್ತಿದ್ದರು.

ಪೊಲೀಸು ಆಡಳಿತಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಮೂರು ವಿಭಾಗಗಳಾಗಿ ವಿಭಜಿಸಲಾಯಿತು. ಪ್ರತಿಯೊಂದು ವಿಭಾಗವನ್ನು ದಾರೋಘಾ ತನ್ನ ಅಧೀನದಲ್ಲಿರುವ ಠಾಣಾದಾರರು ಮತ್ತು ಪೇದೆಗಳೊಂದಿಗೆ ಮೇಲ್ವಿಚಾರಣೆ ಮಾಡುತ್ತಿದ್ದನು. ಪ್ರತಿಯೊಂದು ವಿಭಾಗವನ್ನು ಅಗತ್ಯಕ್ಕನುಗುಣವಾಗಿ ಹಲವಾರು ಠಾಣಾದಾರ ಠಾಣೆಯನ್ನಾಗಿ ವಿಭಜಿಸಲಾಗಿತ್ತು. ಪ್ರತಿಯೊಂದು ಠಾಣಾದಾರ ಠಾಣೆಯು ಒಬ್ಬ ಠಾಣಾದಾರ ಮತ್ತು ಅಗತ್ಯ ಪೇದೆಗಳನ್ನು ಹೊಂದಿತ್ತು. ದಾರೋಘಾಗಳ, ಠಾಣಾದಾರರ ಮತ್ತು ಪೇದೆಗಳ ನೇಮಕ ಮತ್ತು ವಜಾ ಇವುಗಳನ್ನು ಮ್ಯಾಜಿಸ್ಟ್ರೇಟರು (ದಂಡಾಧಿಕಾರಿ) ಮಾಡುತ್ತಿದ್ದರು. ದಾರೋಘಾ ಆಗಲಿ ಅಥವಾ ಯಾರೇ ಪೊಲೀಸು ಅಧಿಕಾರಿಯಾಗಲಿ ಅಪರಾಧಿಗಳ ಮೇಲೆ ಯಾವುದೇ ದಂಡನೆ ಅಥವಾ ಜುಲ್ಮಾನೆಯನ್ನಾಗಲೀ ವಿಧಿಸುವಂತಿರಲಿಲ್ಲ. ಅವರು ದಂಡಾಧಿಕಾರಿಗೆ ಕೇವಲ ದಂಡನೆ ಅಥವಾ ಜುಲ್ಮಾನೆಯ ಬಗ್ಗೆ ಸೂಚಿಸಬಹುದಿತ್ತು. ಜಿಲ್ಲಾಧಿಕಾರಿಯ ಕೆಲಸವು ಸಾಕಷ್ಟು ಹೆಚ್ಚಾದಾಗ, ೧೮೦೮ರಲ್ಲಿ ಅವರಿಗೆ ವಹಿಸಲಾಗಿದ್ದ ಪೊಲೀಸು ಅಧಿಕಾರವನ್ನು ಜಿಲ್ಲಾ ನ್ಯಾಯಾಧೀಶರಿಗೆ ವರ್ಗಾಯಿಸಲಾಯಿತು. ೧೮೧೨ರಲ್ಲಿ ಅನ್ಯಾಯವನ್ನು ತಡೆದು ಸುವ್ಯವಸ್ಥೆಯನ್ನು ಕಾಪಾಡಲು ಹಲವಾರು ವಿನಿಯಮಗಳನ್ನು ಜಾರಿಗೊಳಿಸಲಾಯಿತು. ೧೮೧೪ರಲ್ಲಿ ನಿರ್ದೇಶಕರ ಮಂಡಳಿಯು ದಾರೋಘಾ ಪದ್ಧತಿಯನ್ನು ತಿರಸ್ಕರಿಸಿತು ಮತ್ತು ಸ್ಥಳೀಯ ಶಾಂತಿಗಾಗಿ ಭದ್ರತೆಯ ಉತ್ತಮ ರೀತಿ ಗ್ರಾಮ ಪೊಲೀಸರು ಎಂಬುದನ್ನು ದೃಢವಾಗಿ ವ್ಯಕ್ತಪಡಿಸಿತು. ಗ್ರಾಮಮಟ್ಟದಲ್ಲಿ ಅದರ ಮೂಲ ಶಕ್ತಿಯನ್ನು ಪಡೆಯಲು ಪೊಲೀಸು ಪಡೆಯನ್ನು ಪುನರ್ ಸಂಘಟಿಸುವಂತೆ ಮತ್ತು ದಂಡಾಧಿಕಾರಿಯ ಕರ್ತವ್ಯವನ್ನು ಮತ್ತು ಜಿಲ್ಲಾ ಮಟ್ಟದಲ್ಲಿ ಪೊಲೀಸರ ಮೇಲಿನ ಅವನ ನಿಯಂತ್ರಣವನ್ನು ಜಿಲ್ಲಾಧಿಕಾರಿಯ ಕಚೇರಿಯೊಂದಿಗೆ ಒಂದುಗೂಡಿಸುವ ಬಲವಾದ ಪ್ರಸ್ತಾಪವನ್ನಿಟ್ಟಿತು.

ಅಲ್ಲಿಯವರೆವಿಗೂ ಮ್ಯಾಜಿಸ್ಟ್ರೇಟರ ಕರ್ತವ್ಯಗಳು ಮತ್ತು ಪೊಲೀಸರ ಮೇಲ್ವಿಚಾರಣೆಯು ನ್ಯಾಯಾಧೀಶರಲ್ಲಿ ನಿಹಿತವಾಗಿದ್ದಿತು. ವಿಶೇಷ ಆಯೋಗದ ಮುಖ್ಯಸ್ಥನಾಗಿದ್ದ ಮನ್ರೊ ನ್ಯಾಯಾಧೀಶರಿಂದ ಮ್ಯಾಜಿಸ್ಟ್ರೇಟರ ಮತ್ತು ಪೊಲೀಸು ಸೂಪರಿಂಟೆಂಡೆಂಟರ ಕಚೇರಿಗಳನ್ನು ಪ್ರತ್ಯೇಕಿಸುವಂತೆ ಮತ್ತು ಅದನ್ನು ಹಿಂದಿನಂತೆ ಜಿಲ್ಲಾಧಿಕಾರಿಗೇ ಸೇರಿಸುವಂತೆ ಸಲಹೆ ನೀಡಿದನು. ಪೊಲೀಸರನ್ನು ನ್ಯಾಯಾಧೀಶರಿಗಿಂತ ಜಿಲ್ಲಾಧಿಕಾರಿಯು ಉತ್ತಮವಾಗಿ ನಿರ್ವಹಿಸುವುದಾಗಿ ಮತ್ತು ಗ್ರಾಮದ ಪಟೇಲರು ಮತ್ತು ಕರ್ನಮ್‌ಗಳು ಇಬ್ಬರು ಅಧಿಕಾರಿಗಳಿಂದ ಬಿಡುಗಡೆ ಹೊಂದುತ್ತಾರೆಂಬುದಾಗಿ ಮನ್ರೋ ಪ್ರತಿಪಾದಿಸಿದನು. ಆ ಕಾರಣದಿಂದಾಗಿ ೧೮೧೬ರಲ್ಲಿ ಮನ್ರೋವಿನ ಸಲಹೆಯನ್ನು

ಅಂಗೀಕರಿಸಲಾಯಿತು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಜಿಲ್ಲಾಧಿಕಾರಿಗೆ ಪೊಲೀಸರ ಮೇಲ್ವಿಚಾರಣೆಯನ್ನು ವರ್ಗಾಯಿಸಲಾಯಿತು. ದಾರೋಘಾ (ಪೊಲೀಸ್ ಮುಖ್ಯಸ್ಥ) ಹುದ್ದೆಯು ರದ್ದಾಯಿತು. ಗ್ರಾಮ ಪೊಲೀಸು ಪಡೆಯನ್ನು ಗ್ರಾಮದಲ್ಲಿ ಪಟೇಲರ, ತಾಲೂಕಿನಲ್ಲಿ ತಹಸೀಲ್ದಾರರ ಮತ್ತು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯ ನಿರ್ದೇಶನದ ಅಧೀನಕ್ಕೆ ತರಲಾಯಿತು. ವಾಸ್ತವವಾಗಿ ೧೮೧೬ರಲ್ಲಿ ಮದ್ರಾಸಿನ ಫೋರ್ಟ್‌ಸೆಯಿಂಟ್ ಜಾರ್ಜ್ ಸರ್ಕಾರಕ್ಕೆ ಒಳಪಟ್ಟು ಪ್ರದೇಶದಾದ್ಯಂತ ಸಾಮಾನ್ಯ ಪೊಲೀಸು ಪದ್ಧತಿಯು ಜಾರಿಗೆ ಬಂದಿತು.

೧೮೧೬ರಲ್ಲಿ ಪ್ರಾರಂಭವಾದ ಪೊಲೀಸು ಪದ್ಧತಿಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯ನೆಯ ಶತಮಾನದ ಮಧ್ಯಭಾಗದ ವರೆಗೆ ಜಾರಿಯಲ್ಲಿದ್ದಿತು. ಈ ಪದ್ಧತಿಯು ಕಂದಾಯ ಮತ್ತು ನ್ಯಾಯಾಂಗ ಕ್ಷೇತ್ರದಲ್ಲಿದ್ದಂತೆ ಭ್ರಷ್ಟಾಚಾರ, ಹಿಂಸೆ ಮತ್ತು ಸ್ಥಳೀಯರ ಶೋಷಣೆಯಿಂದ ತುಂಬಿದ್ದಿತು. ೧೮೫೪ರ ಸೆಪ್ಟೆಂಬರ್‌ನಲ್ಲಿ ಮದರಾಸು ಸರ್ಕಾರವು ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ದಂಡಾಧಿಕಾರಿ (ಮ್ಯಾಜಿಸ್ಟ್ರೇಟ್) ಮತ್ತು ಪೊಲೀಸು ಅಧಿಕಾರಿಗಳಿಂದ ಸ್ಥಳೀಯರಿಗೆ ಆಗುತ್ತಿದ್ದ ಹಿಂಸೆ ಮತ್ತು ಶೋಷಣೆಯ ಸಮಗ್ರ ತನಿಖೆಗಾಗಿ ಇ.ಎಫ್.ಎಲಿಯೆಟ್, ಹೆಚ್. ಸ್ಟ್ರೋಕ್ಸ್ ಮತ್ತು ಜಾನ್‌ಬ್ರೂಸ್ ನಾರ್ಟನ್ ಒಳಗೊಂಡಂತೆ ಒಂದು ಆಯೋಗವನ್ನು ರಚಿಸಿತು. ಈ ಆಯೋಗವು ಏಪ್ರಿಲ್ ೧೮೫೫ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಅದರಲ್ಲಿ ಪೊಲೀಸು ಮತ್ತು ಕಂದಾಯ ಪ್ರಕರಣಗಳಲ್ಲಿ ಹಿಂಸೆಯು ವ್ಯಾಪಕವಾಗಿದ್ದು, ಕಂದಾಯ ಪ್ರಕರಣಗಳಲ್ಲಿ ಅದರ ಪ್ರಮಾಣ ಹೆಚ್ಚೆಂದು ತಿಳಿಸಿದ್ದಿತು.

ಅಪರಾಧ ಪತ್ತೆಗಾಗಿ ಬಳಸುತ್ತಿದ್ದ ವಿಧಾನಗಳಲ್ಲಿ ಕ್ಷಮಾಯಾಚನೆ ಒಂದಾಗಿತ್ತು. ೧೮೫೬ರ ವರೆಗೆ ಪೊಲೀಸರು ಅಪರಾಧ ಪತ್ತೆಯ ವಿಧಾನಗಳಲ್ಲಿ ಬಹುತೇಕ ಬಳಸುತ್ತಿದ್ದ ಮತ್ತೊಂದು ಪದ್ಧತಿಯೆಂದರೆ ಹಿಂಸೆಯಾಗಿತ್ತು. ಸರ್ಕಾರವು ೧೮೦೬ ರಿಂದ ೧೮೫೫ರ ನಡುವಿನ ಅವಧಿಯಲ್ಲಿ ನಡೆದ ಹಿಂಸೆಯ ಪ್ರಕರಣಗಳನ್ನು ತನಿಖೆ ಮಾಡಲು ಅರೆ ಮನಸ್ಸಿನಿಂದ ಕ್ರಮಗಳನ್ನು ಕೈಗೊಂಡಿತು. ಪೊಲೀಸರಿಗೆ ಕಡಿಮೆ ಸಂಬಳ ನೀಡಲಾಗುತ್ತಿತ್ತು. ಇದರಿಂದಾಗಿ ಅವರು ಭ್ರಷ್ಟರು, ನೈತಿಕ ನಿರ್ಬಂಧರಹಿತರು, ಸ್ವಾಭಿಮಾನ ರಹಿತರು ಆಗಿದ್ದರು. ಅಂಥ ಪೊಲೀಸು ಪದ್ಧತಿಯನ್ನು ಬದಲಿಸುವ ಮತ್ತು ಪುನಸ್ಸಂಘಟಿಸುವ ಅಗತ್ಯವಿತ್ತು. ಇ.ಎಫ್.ಎಲಿಯೆಟ್ ಮತ್ತು ಇತರರ ಆಯೋಗವು ಪೊಲೀಸು ಆಡಳಿತದಲ್ಲಿರುವ ಸಮಸ್ಯೆಗಳನ್ನು ನಿವಾರಿಸಲು ಪರಿಹಾರೋಪಾಯಗಳನ್ನು ಸೂಚಿಸಿದ್ದರು. ಅವುಗಳಲ್ಲಿ ಪ್ರಮುಖವಾದುದು ಕಂದಾಯ ಮತ್ತು ಪೊಲೀಸು ಪ್ರಕಾರ್ಯಗಳನ್ನು ಪ್ರತ್ಯೇಕಿಸುವುದು ಮತ್ತು ಪೊಲೀಸನ್ನು ಪುನರ್‌ಸಂಘಟಿಸಿ ಯುರೋಪಿಯನ್ ಅಧಿಕಾರಿಯಾದ ಪೊಲೀಸು ಸೂಪರಿಂಟೆಂಡೆಂಟರ ನೇರ ಮೇಲ್ವಿಚಾರಣೆಗೆ ತರುವುದಾಗಿತ್ತು. ಮದರಾಸು ಸರ್ಕಾರವು ಆಯೋಗದ ಈ ಸಲಹೆಗಳನ್ನು ಅಂಗೀಕರಿಸಿತು ಮತ್ತು ಪೊಲೀಸು ಪ್ರಕಾರ್ಯಗಳನ್ನು ಕಂದಾಯ ಪ್ರಕಾರ್ಯಗಳಿಂದ ಪ್ರತ್ಯೇಕಿಸಿತು.

ಹೀಗೆ ೧೮೫೯ರಲ್ಲಿ ಜಿಲ್ಲೆಯ ಕಂದಾಯ ಆಡಳಿತದ ಭಾಗವಾಗಿದ್ದ ಪೊಲೀಸು ಇಲಾಖೆಯನ್ನು ಅದರಿಂದ ಬೇರ್ಪಡಿಸಿ ಸ್ವತಂತ್ರ ಇಲಾಖೆಯನ್ನಾಗಿ ಮಾಡಲಾಯಿತು. ಅನಂತರ ಜಿಲ್ಲಾ ಪೊಲೀಸು ಅಧೀಕ್ಷಕರ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಅಗತ್ಯ ಪೊಲೀಸು ಬಲದೊಂದಿಗೆ ಜಿಲ್ಲಾ ಪೊಲೀಸು ಬಲವು ಕಾರ್ಯನಿರ್ವಹಿಸುತ್ತಿದೆ. ೧೮೬೦ರಲ್ಲಿ ಹೊಸ ಪೊಲೀಸು ವ್ಯವಸ್ಥೆಯನ್ನು ಪ್ರಾರಂಭಿಸುವುದರೊಂದಿಗೆ, ಅಪರಾಧ ಪತ್ತೆಯ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿನ ಸುಧಾರಣೆ ಮತ್ತು ಪ್ರಗತಿಯು ಕಂಡುಬಂದಿತು. ಆದಾಗ್ಯೂ, ೧೯ನೆಯ ಶತಮಾನದಾದ್ಯಂತ ಅಪರಾಧ ತಡೆಯುವಿಕೆಗೆ ಕ್ರೂರ ದಂಡನೆಯು ಫಲಕಾರಿಯೆಂಬ ನಂಬಿಕೆಯು ಮುಂದುವರೆಯಿತು. ೧೮೬೦ರಲ್ಲಿ ಭಾರತೀಯ ದಂಡ ಸಂಹಿತೆಯನ್ನು ಮಂಡಿಸಲಾಯಿತು ಮತ್ತು ೧೮೬೨ರಿಂದ ಅದು ಜಾರಿಗೆ ಬಂದಿತು. ಆವರೆಗೂ ಕೈಕಾಲು ಕತ್ತರಿಸುವುದು (೧೮೦೨ರಲ್ಲಿ ರದ್ದುಪಡಿಸಲಾಯಿತು), ಬರೆಹಾಕುವುದು (೧೮೧೮ರಲ್ಲಿ ರದ್ದುಪಡಿಸಲಾಯಿತು) ಮತ್ತು ಹಿಂಸೆಮಾಡುವಂಥ ಅನೇಕ ಅನಾಗರಿಕ ದಂಡನೆಗಳು ಜಾರಿಯಲ್ಲಿದ್ದವು. ಆದರೆ, ನಂತರ ಭಾರತೀಯ ದಂಡಸಂಹಿತೆಯು ಐದು ದಂಡನೆಗಳನ್ನು ಮಾತ್ರ ಅಂಗೀಕರಿಸಿತು. ಅವು ಗಲ್ಲು, ಸಮುದ್ರದಾಚೆಗೆ ಗಡೀಪಾರು, ಸರಳ ಮತ್ತು ಕಠಿಣ ಕಾರಾಗೃಹವಾಸ, ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವುದು ಮತ್ತು ಜುಲ್ಮಾನೆಗಳಾಗಿವೆ.

೧೯೦೮ರ ಭಾರತದ ಇಂಪೀರಿಯಲ್ ಗ್ಯಾಸೆಟಿಯರ್ ಪ್ರಕಾರ ೧೯೦೪ರಲ್ಲಿ ಪ್ರತಿ ಆರು ಚದರ ಮೈಲಿಗಳಿಗೆ ಪ್ರತಿ ೧೫೫೮ ಜನರಿಗೆ ಒಬ್ಬ ನಿಯತ ಪೊಲೀಸು ಮತ್ತು ಅದರ ಮೇಲಿನ ಅಷ್ಟೇ ಚದರ ಮೈಲಿ ವಿಸ್ತೀರ್ಣಕ್ಕೆ ಹಾಗೂ ಪ್ರತಿ ೧೬೧೨ ಜನರಿಗೆ ಒಬ್ಬ ಗ್ರಾಮ ಪೊಲೀಸು ಮದರಾಸು ಪ್ರಾಂತ್ಯದಲ್ಲಿ ಇದ್ದರೆಂದು ವರದಿಯಾಗಿರುತ್ತದೆ. ಪೊಲೀಸು ಇನ್ಸ್‌ಪೆಕ್ಟರ್ ಜನರಲ್ ಇಲಾಖಾ ಮುಖ್ಯಾಧಿಕಾರಿಯಾಗಿದ್ದು, ಅವರ ಸಹಾಯಕ್ಕಾಗಿ ಒಬ್ಬರು ಅಥವಾ ಹೆಚ್ಚು ಸಹಾಯಕ ಸೂಪರಿಂಟೆಂಡೆಂಟರಿದ್ದರು. ಅವರ ಅಧೀನದಲ್ಲಿ ಇನ್ಸ್‌ಪೆಕ್ಟರ್‌ಗಳು ಮತ್ತು ಉಪ ಇನ್ಸ್‌ಪೆಕ್ಟರ್‌ಗಳು, ಹೆಡ್‌ಕಾನ್ಸ್‌ಟೇಬಲ್, ಕಾನ್ಸ್‌ಟೇಬಲ್ ಮತ್ತು ಗ್ರಾಮೀಣ ಪೊಲೀಸರಿದ್ದರು. ನಗರದಲ್ಲಿ

ಸಾರ್ಜೆಂಟರಿದ್ದರು. ೧೯೦೮ರ ಇಂಪೀರಿಯಲ್ ಗ್ಯಾಸೆಟಿಯರ್ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯು ಸೂಪರಿಂಟೆಂಡೆಂಟರ ಅಧೀನದಲ್ಲಿದ್ದು, ಅದರ ಕೇಂದ್ರ ಕಚೇರಿ ಮಂಗಳೂರಿನಲ್ಲಿತ್ತು. ಈ ಪೊಲೀಸು ದಳದಲ್ಲಿ ೧೦ ಮಂದಿ ಇನ್ಸ್‌ಪೆಕ್ಟರ್ ಮತ್ತು ೫೫೮ ಪೊಲೀಸು ೫೦ ಪೊಲೀಸು ಠಾಣೆಗಳಿದ್ದವೆಂದು ತಿಳಿದುಬರುತ್ತದೆ.

ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಪೊಲೀಸು ಆಡಳಿತದ ಪ್ರಮುಖ ಕರ್ತವ್ಯವಾಗಿದೆ. ಜಿಲ್ಲೆಯಲ್ಲಿನ ಪೊಲೀಸು ಬಲವು ಅಗತ್ಯ ಸಿಬ್ಬಂದಿಯ ನೆರವಿನೊಂದಿಗೆ ಜಿಲ್ಲಾ ಪೊಲೀಸು ಅಧೀಕ್ಷಕರ ನಿಯಂತ್ರಣದಲ್ಲಿ ಕೆಲಸ ನಿರ್ವಹಿಸುತ್ತಿದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಶಾಸನಗಳು ಮತ್ತು ಕೈಪಿಡಿಗಳ ಮೇರೆಗೆ ಕಾಪಾಡಲಾಗುತ್ತಿದೆ. ಬ್ರಿಟಿಷರ ಕಾಲದಿಂದಲೂ ಖಾಕಿ ಸಮವಸ್ತ್ರಧಾರಿಗಳಾದ ಪೊಲೀಸರ ಸಮವಸ್ತ್ರದ ಖಾಕಿ ಬಣ್ಣವನ್ನು ಕೂಡಾ ಮೊದಲ ಬಾರಿಗೆ ೧೮೫೧ ರಲ್ಲಿ ಮಂಗಳೂರಿನ ಬೇಸಲ್ ಮಿಷನ್ ನೆಯ್ಗೆ ಕಾರ್ಖಾನೆಯಲ್ಲಿ ಜಾನ್ ಹಾಲರ್‌ನು  ಕಂಡುಹಿಡಿದನು ಎಂಬುದು ದಕ್ಷಿಣ ಕನ್ನಡ ಜಿಲ್ಲೆಯ ವೈಶಿಷ್ಟ್ಯವಾಗಿದೆ. ಇಂದಿಗೂ ಇದು ಪೊಲೀಸು ಸಿಬ್ಬಂದಿಯ ಸಮವಸ್ತ್ರವಾಗಿದೆ.

ಪ್ರಸಕ್ತ ೧೯೯೭ ರಿಂದ ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಿ, ಉಡುಪಿ ಜಿಲ್ಲೆಯನ್ನು ಪ್ರತ್ಯೇಕವಾಗಿ ರಚಿಸಲಾಗಿದೆ. ಅದರಂತೆ ದಿನಾಂಕ ೦೧-೦೪-೧೯೯೮ ರಿಂದ ಅನ್ವಯಿಸುವಂತೆ ಪೊಲೀಸು ಸಿಬ್ಬಂದಿ ಬಲ ಮತ್ತು ಪೊಲೀಸು ಠಾಣೆಗಳು ಕೂಡಾ ಭಾಗಶಃ ಉಡುಪಿ ಜಿಲ್ಲೆಗೆ ಸೇರಿರುವುದು. ಪ್ರಸಕ್ತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ೨೮ ಪೊಲೀಸು ಠಾಣೆಗಳು ಕಾರ್ಯಾಚರಣೆಯಲ್ಲಿವೆ.

೨೦೦೪ರ ಅಂತ್ಯಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ೨ ಸಂಚಾರಿ ಪೊಲೀಸು ಠಾಣೆಗಳು ಸೇರಿದಂತೆ ಎಲ್ಲಾ ತಾಲೂಕು ಹೋಬಳಿಗಳಲ್ಲಿನ ಪೊಲೀಸು ಠಾಣೆಗಳು ಮತ್ತು ಉಪ ಪೊಲೀಸು ಠಾಣೆಗಳು ಈ ಮುಂದಿನಂತೆ ಕಾರ್ಯನಿರ್ವಹಿಸುತ್ತಿದ್ದವು.

**ಕೋಷ್ಟಕ ೧೦.೨೧**

| ಕ್ರಮ ಸಂಖ್ಯೆ | ಠಾಣೆಯ ಹೆಸರು | ಉಪ ಠಾಣೆ |
|---|---|---|
| ೧ | ೨ | ೩ |
| ೧. | ಮಂಗಳೂರು ಉತ್ತರ | – |
| ೨. | ಮಂಗಳೂರು ದಕ್ಷಿಣ | – |
| ೩. | ಮಂಗಳೂರು ಪೂರ್ವ | – |
| ೪. | ಮಂಗಳೂರು ಬರ್ಕೆ | – |
| ೫. | ಮಂಗಳೂರು ಉರ್ವಾ | – |
| ೬. | ಮಹಿಳಾ ಠಾಣೆ | – |
| ೭. | ಸಂಚಾರ ಪೂರ್ವ ಠಾಣೆ | – |
| ೮. | ಸಂಚಾರ ಪಶ್ಚಿಮ ಠಾಣೆ | – |
| ೯. | ಮಂಗಳೂರು ಗ್ರಾಮಾಂತರ | – |
| ೧೦. | ಕಾವೂರು ಠಾಣೆ | – |
| ೧೧. | ಪಣಂಬೂರು | – |
| ೧೨. | ಸುರತ್ಕಲ್ | – |
| ೧೩. | ಬಜ್ಪೆ | – |
| ೧೪. | ಮೂಲ್ಕಿ | – |
| ೧೫. | ಮೂಡಬಿದ್ರಿ | – |
| ೧೬. | ಉಳ್ಳಾಲ | – |
| ೧೭. | ಕೋಣಾಜೆ | – |

ಮುಂದುವರೆದಿದೆ....

| | | |
|---|---|---|
| ೧೮. | ಬಂಟ್ವಾಳ ನಗರ | – |
| ೧೯. | ಬಂಟ್ವಾಳ ಗ್ರಾಮಾಂತರ | – |
| ೨೦. | ವಿಟ್ಲ ಠಾಣೆ | – |
| ೨೧. | ಬೆಳ್ತಂಗಡಿ | ಪೂಂಜಾಲ ಕಟ್ಟೆ ಹೊರಠಾಣೆ ಧರ್ಮಸ್ಥಳ ಹೊರಠಾಣೆ |
| ೨೨. | ಪುತ್ತೂರು ನಗರ | – |
| ೨೩. | ಪುತ್ತೂರು ಗ್ರಾಮಾಂತರ ಠಾಣೆ | – |
| ೨೪. | ಕಡಬ | – |
| ೨೫. | ಉಪ್ಪಿನಂಗಡಿ | ನೆಲ್ಯಾಡಿ(ಶಿರಡಿ)ಹೊರ ಠಾಣೆ |
| ೨೬. | ಸುಬ್ರಹ್ಮಣ್ಯ | – |
| ೨೭. | ಸುಳ್ಯ | ಬೆಳ್ಳಾರೆ ಹೊರ ಠಾಣೆ |
| ೨೮. | ವೇಣೂರು | – |

**ಆಧಾರ** : ಪೊಲೀಸ್ ಇಲಾಖೆ, ಮಂಗಳೂರು.

೧೯೯೭ ರಿಂದ ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಿ ಉಡುಪಿ ಜಿಲ್ಲೆಯನ್ನು ಪ್ರತ್ಯೇಕವಾಗಿ ರಚಿಸಿದ ನಂತರ ದಕ್ಷಿಣ ಕನ್ನಡ ಜಿಲ್ಲೆಗೆ ಮಂಗಳೂರು, ಪಣಂಬೂರು ಮತ್ತು ಪುತ್ತೂರು ಉಪವಿಭಾಗಗಳನ್ನು ಪುನರ್ ರಚಿಸಲಾಗಿದೆ. ಈ ಉಪವಿಭಾಗದ ಉಸ್ತುವಾರಿಯನ್ನು ಪೊಲೀಸು ಉಪ ಅಧೀಕ್ಷಕರು/ಸಹಾಯಕ ಪೊಲೀಸು ಅಧೀಕ್ಷಕರು ನೋಡಿಕೊಳ್ಳುತ್ತಾರೆ.

ಮಂಗಳೂರು ಉಪವಿಭಾಗದ ವ್ಯಾಪ್ತಿಗೆ ಮಂಗಳೂರು ತಾಲೂಕು, ಪಣಂಬೂರು ಉಪ ವಿಭಾಗ ವ್ಯಾಪ್ತಿಗೆ ಮಂಗಳೂರು ಮತ್ತು ಬಂಟ್ವಾಳ ತಾಲೂಕು ಮತ್ತು ಪುತ್ತೂರು ಉಪವಿಭಾಗ ವ್ಯಾಪ್ತಿಗೆ ಬಂಟ್ವಾಳ, ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿ ತಾಲೂಕು ಒಳಪಡುತ್ತದೆ. ನಾಲ್ಕು ಹೊರ ಠಾಣೆಗಳಿದ್ದು, ಅವು ನೆಲ್ಯಾಡಿ, ಧರ್ಮಸ್ಥಳ, ಪೂಂಜಾಲಕಟ್ಟೆ ಬೆಳ್ಳಾರೆಯಲ್ಲಿವೆ.

## ಜಿಲ್ಲಾ ಸಶಸ್ತ್ರ ಮೀಸಲು ಪಡೆ

ಜಿಲ್ಲೆಯ ಪೊಲೀಸು ಅಧೀಕ್ಷಕರ ಅಧೀನ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕಾರ್ಯನಿರ್ವಹಿಸುತ್ತಿದೆ. ಇದು, ಜಿಲ್ಲೆಯಲ್ಲಿ ಅನಿರೀಕ್ಷಿತವಾಗಿ ತಲೆದೋರುವ ಗಲಭೆ, ಮುಷ್ಕರ, ಮೆರವಣಿಗೆ, ಚುನಾವಣೆ ಮುಂತಾದ ಸಂದರ್ಭದಲ್ಲಿ ಬಂದೋಬಸ್ತು ಕರ್ತವ್ಯ ನಿರ್ವಹಿಸುತ್ತದೆ. ಈ ಪಡೆಯ ಸಿಬ್ಬಂದಿ ಮೇಲಾಧಿಕಾರಿಗಳು, ಆರ್ಡರ್ಲಿ, ವಿವಿಧ ಪಹರೆ ಸಿಬ್ಬಂದಿ, ಗಣ್ಯವ್ಯಕ್ತಿಗಳ ಬೆಂಗಾವಲು, ಪೊಲೀಸ್ ಬ್ಯಾಂಡ್ ಹಾಗೂ ಕೈದಿಗಳನ್ನು ನ್ಯಾಯಾಲಯಗಳಲ್ಲಿ ಹಾಜರುಪಡಿಸುವುದು ಇವೇ ಮುಂತಾದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಈ ಪಡೆಯಲ್ಲಿ ಜಿಲ್ಲಾ ವಾಹನ ವಿಭಾಗ, ಜಿಲ್ಲಾ ಶಸ್ತ್ರಾಸ್ತ್ರಗಳ ಆಯುಧಾಗಾರ ಮತ್ತು ಶ್ವಾನದಳವು ಇರುವುದು.

## ಜಿಲ್ಲಾ ಶ್ವಾನದಳ

ಪೊಲೀಸು ಕಾರ್ಯಜಾಲದಲ್ಲಿ ಶ್ವಾನದಳದ ಪಾತ್ರ ಮಹತ್ತರವಾದುದು. ವಾಸನೆಯನ್ನು ಹಿಡಿದು ಅಪರಾಧಿಯನ್ನು ಪತ್ತೆ ಮಾಡುವ ವಿಶೇಷ ಕೌಶಲ್ಯ ಶ್ವಾನಗಳಿಗಿವೆ. ಈ ಕೌಶಲ್ಯವನ್ನು ಸದುಪಯೋಗಪಡಿಸಿಕೊಳ್ಳಲು ಶ್ವಾನಗಳಿಗೆ ತರಬೇತಿ ನೀಡಲಾಗುವುದು. ಈ ತರಬೇತಿ ಪಡೆದ ಶ್ವಾನಗಳ ಮೂಲಕ ಪೊಲೀಸರು ಬಾಂಬ್ ಮತ್ತು ಇತರ ಸ್ಫೋಟಕ ವಸ್ತುಗಳನ್ನು ಹಾಗೂ ಅಪರಾಧಿಯನ್ನು ಪತ್ತೆ ಹಚ್ಚುತ್ತಾರೆ.

ಜಿಲ್ಲಾ ಶ್ವಾನದಳ ೧೯೮೭ರಲ್ಲಿ ಕಾರ್ಯಾರಂಭ ಮಾಡಿದೆ. ಈ ದಳದಲ್ಲಿ ನಾಲ್ಕು ಶ್ವಾನಗಳಿದ್ದು, ಸ್ಫೋಟಕ ಪತ್ತೆಗೆ–ಎರಡು, ಅಪರಾಧ ಪತ್ತೆಗೆ–ಎರಡು ಶ್ವಾನಗಳು ಇವೆ, ಇವು ಅಪರಾಧ ಪತ್ತೆ ಹಾಗೂ ಸ್ಫೋಟಕ ಪತ್ತೆಯ ಕಾರ್ಯವನ್ನು ನಿರ್ವಹಿಸುತ್ತಿವೆ. ಈ ವಿಭಾಗದಲ್ಲಿ

ತರಬೇತಿ ಹೊಂದಿರುವ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು, ಅವರ ಸಂಖ್ಯೆ ಈ ಮುಂದಿನಂತಿದೆ. ಸ್ಫೋಟಕ ಪತ್ತೆ–ಮೂವರು, ಅಪರಾಧ ಪತ್ತೆ–ಮೂವರು. ಇವರು ಶ್ವಾನದಳದ ಮೂಲಕ ಅಪರಾಧ ಹಾಗೂ ಅಪರಾಧಿಯನ್ನು ಪತ್ತೆ ಹಚ್ಚುವ ಕಾರ್ಯವನ್ನು ಮಾಡುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಅರಣ್ಯದಳ ಮತ್ತು ಜಿಲ್ಲಾ ಅಪರಾಧ ಗುಪ್ತ ವಿಭಾಗವು ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯಲ್ಲಿ ಬೇಹುಗಾರಿಕೆಗೆ ಸಂಬಂಧಪಟ್ಟಂತೆ ಜಿಲ್ಲಾ ಪೊಲೀಸು ಅಧೀಕ್ಷಕರ ಅಧೀನ ಜಿಲ್ಲಾ ವಿಶೇಷ ವಿಭಾಗವು ಕಾರ್ಯನಿರ್ವಹಿಸುತ್ತಿದೆ. ಈ ವಿಭಾಗದಲ್ಲಿ ೧–ಪೊಲೀಸ್ ಇನ್ಸ್‌ಪೆಕ್ಟರ್ (ಪಿ.ಐ); ೧– ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (ಪಿ.ಎಸ್.ಐ); ೬–ಹೆಡ್ ಕಾನ್ಸ್‌ಟೇಬಲ್ (ಸಿ.ಹೆಚ್) ಮತ್ತು ೧– ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ (ಸಿ.ಪಿ.ಸಿ) ಗಳ ಬಲ ಇರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸು ಅಧಿಕಾರಿ ಸಿಬ್ಬಂದಿ ಸಂಖ್ಯೆಯು ೨೦೦೪ರಲ್ಲಿ ಒಟ್ಟು ೧೧೬೪ ಆಗಿದೆ.

## ಪೊಲೀಸು ವಾಹನ

೨೦೦೩–೦೪ರಲ್ಲಿದ್ದಂತೆ ಜಿಲ್ಲಾ ಪೊಲೀಸ್ ಬಲದಲ್ಲಿರುವ ವಾಹನಗಳ ಸಂಖ್ಯೆ ೧೪೩ ಆಗಿದ್ದು, ಅವುಗಳ ನಿರ್ವಹಣೆಗೆ ಮಾಡಿರುವ ವೆಚ್ಚ ಒಟ್ಟು ರೂ. ೭೦,೭೬,೯೪೩ ಗಳಾಗಿವೆ.

## ಪೊಲೀಸು ಕಲ್ಯಾಣ ನಿಧಿ

ಪೊಲೀಸು ಇಲಾಖೆಯ ಸಿಬ್ಬಂದಿ ಕಲ್ಯಾಣಕ್ಕಾಗಿ ಪೊಲೀಸು ಕಲ್ಯಾಣ ನಿಧಿಯ ಸೌಲಭ್ಯವಿದ್ದು, ಈ ನಿಧಿಗೆ ಸಿಬ್ಬಂದಿ/ಅಧಿಕಾರಿಗಳಿಂದ ಮಾಸಿಕ ವಂತಿಗೆಯನ್ನು ಸಂಗ್ರಹಿಸಲಾಗುವುದು. ಈ ನಿಧಿಯಲ್ಲಿ ಒಟ್ಟು ರೂ. ೧೦,೦೦,೦೦೦/– ಲಕ್ಷದ ನಿಶ್ಚಿತ ಠೇವಣಿ ಇರುವುದು. ಈ ನಿಶ್ಚಿತ ಠೇವಣಿಯನ್ನು ಹೆಚ್.ಡಿ.ಎಫ್.ಸಿ.ಯಲ್ಲಿರಿಸಿದ್ದು, ಈ ಠೇವಣಿಯ ಬಡ್ಡಿಯನ್ನು ಕಲ್ಯಾಣ ನಿಧಿ ಉಳಿತಾಯ ಖಾತೆಯಲ್ಲಿರಿಸಲಾಗಿದೆ. ಇದರಿಂದ ಪೊಲೀಸು ಶ್ರೇಯೋಭಿವೃದ್ಧಿ ಕೇಂದ್ರಗಳಿಗೆ ವಾರ್ತಾ ಪತ್ರಿಕೆ ಮತ್ತು ವಾರಪತ್ರಿಕೆಗಳನ್ನು ತರಿಸಲಾಗುವುದು. ಅಲ್ಲದೆ, ಈ ಮೊತ್ತದಿಂದ ಉನ್ನತ ಶಿಕ್ಷಣಕ್ಕೆ ಧನಸಹಾಯವಾಗಿ, ಅಂದರೆ ವೈದ್ಯಕೀಯ ಶಿಕ್ಷಣಕ್ಕೆ ಮೊದಲ ವರ್ಷದಲ್ಲಿ ೧೦,೦೦೦/– ಅನಂತರದ ವರ್ಷಗಳಲ್ಲಿ ೧,೦೦೦/– ಧನಸಹಾಯವನ್ನು ನೀಡಲಾಗುವುದು. ಹಾಗೆಯೆ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಮೊದಲ ವರ್ಷ ೫,೦೦೦/– ಅನಂತರದ ವರ್ಷಗಳಲ್ಲಿ ೧,೦೦೦/–ದಂತೆ ಪೊಲೀಸ್ ಉಪ ನಿರೀಕ್ಷಕರು ಹಾಗೂ ಕೆಳದರ್ಜೆಯ ಪೊಲೀಸು ಸಿಬ್ಬಂದಿಯ ಮಕ್ಕಳಿಗೆ ನೀಡಲಾಗುವುದು. ಅಲ್ಲದೆ, ವರ್ಷಕ್ಕೆ ಗರಿಷ್ಠ ರೂ. ೫,೦೦೦/–ದಂತೆ ವೈದ್ಯಕೀಯ ಚಿಕಿತ್ಸೆಗಾಗಿ ಈ ಮೊತ್ತದಲ್ಲಿ ಹಣವನ್ನು ಮಂಜೂರು ಮಾಡಲಾಗುವುದು ಹಾಗೂ ಪೊಲೀಸು ಸಿಬ್ಬಂದಿ ಮತ್ತು ಅವರ ಕುಟುಂಬದವರ ಆರೋಗ್ಯ ತಪಾಸಣೆಗಾಗಿ ಒಂದು ಪೊಲೀಸು ಆರೋಗ್ಯ ತಪಾಸಣಾ ಕೇಂದ್ರವಿದೆ.

## ಪೊಲೀಸು ನೌಕರರ ಸಹಕಾರ ಸಂಘ ನಿಯಮಿತ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಪೊಲೀಸ್ ನೌಕರ ಸಹಕಾರಿ ಸಂಘವಿದ್ದು, ಅದರ ಕಾರ್ಯವ್ಯಾಪ್ತಿ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸೀಮಿತವಾಗಿರುತ್ತದೆ. ಸಂಘದ ಸದಸ್ಯರ ಸಂಖ್ಯೆ ೧,೧೮೮. ೩೧–೩–೨೦೦೫ರಲ್ಲಿ ಇದ್ದಂತೆ, ಷೇರು ಬಂಡವಾಳ ರೂ. ೪೮,೩೧,೪೫೦ (೩೧–೩–೨೦೦೫ರ ಅಂತ್ಯಕ್ಕೆ) ಈ ಸಂಘದ ವತಿಯಿಂದ ೩೧–೩–೨೦೦೫ರ ತನಕ ನೀಡಲಾಗಿರುವ ಸಾಲ ರೂ. ೧,೧೮,೭೪,೬೫೦/– ಗಳಾಗಿವೆ. ಇದರ ಸದಸ್ಯರಿಗೆ ಗರಿಷ್ಠ ರೂ. ೫೦,೦೦೦/– ಸಾಲ ಮಂಜೂರು ಮಾಡಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸು ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ ಪ್ರಥಮ (ಲಭ್ಯ ಮಾಹಿತಿಯಂತೆ) ಪೊಲೀಸು ವರಿಷ್ಠಾಧಿಕಾರಿಯು(ಲಭ್ಯ ಮಾಹಿತಿಯಂತೆ) ಕರ್ನಲ್ ಹೆಸ್‌ಕಿನ್ಸ್ (೪–೧೦–೧೮೬೦–ಸೇರಿದ ದಿನಾಂಕ)ರಾಗಿದ್ದು, ಪ್ರಥಮ ಭಾರತೀಯ ಪೊಲೀಸು ವರಿಷ್ಠಾಧಿಕಾರಿಯು ಶ್ರೀ ಎ. ಸುಬ್ಬರಾವ್ (೨೪–೩–೧೯೧೧), ಸ್ವಾತಂತ್ರ್ಯನಂತರದ ಭಾರತೀಯ ಪೊಲೀಸು ವರಿಷ್ಠಾಧಿಕಾರಿ ಎಂ. ಸಿಂಗಾರವೇಲು (೧೬–೦೬–೧೯೪೮), ಅವರು ಪೊಲೀಸು ವರಿಷ್ಠಾಧಿಕಾರಿಯಾಗಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಿದ್ದು, ೧೯೦ರಿಂದ ಈ ವರೆಗೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಿದ ಪೊಲೀಸು ವರಿಷ್ಠಾಧಿಕಾರಿಗಳ ಪಟ್ಟಿ ಈ ಮುಂದಿನಂತಿದೆ.

**ಕೋಷ್ಟಕ ೧೦.೨೨**

| ಕ್ರ.ಸಂ | ಶ್ರೀಯುತರಾದ | ದಿನಾಂಕ |
|---|---|---|
| ೧. | ಕೆ. ಎಸ್. ಸುರೇಶ್‌ಬಾಬು | ೧೬–೦೨–೧೯೯೦ ರಿಂದ ೧೯–೦೩–೧೯೯೧ |
| ೨. | ಎಂ. ಆರ್. ಪೂಜಾರ್ | ೨೭–೦೩–೧೯೯೧ ರಿಂದ ೦೨–೦೩–೧೯೯೪ |
| ೩. | ಎ. ಎಂ ಪ್ರಸಾದ್ | ೦೨–೦೩–೧೯೯೪ ರಿಂದ ೧೦–೦೭–೧೯೯೬ |
| ೪. | ಎನ್. ಎಸ್. ಮೇಘರಿಕ್ | ೧೦–೦೭–೧೯೯೬ ರಿಂದ ೦೯–೦೭–೧೯೯೮ |
| ೫. | ಕಮಲ್‌ಪಂತ್ | ೦೯–೦೭–೧೯೯೮ ರಿಂದ ೨೨–೧೨–೨೦೦೦ |
| ೬. | ಸೀಮಂತ್‌ಕುಮಾರ್ ಸಿಂಗ್ | ೨೨–೧೨–೨೦೦೦ ರಿಂದ ೦೨–೦೨–೨೦೦೪ |
| ೭. | ಪಂಕಜ್‌ಕುಮಾರ್ ಠಾಕೂರ್ | ೦೪–೦೨–೨೦೦೪ ರಿಂದ ೧೪–೦೮–೨೦೦೪ |
| ೮. | ಸೌಮೆಂದು ಮುಖರ್ಜಿ | ೧೪–೦೯–೨೦೦೪ ರಿಂದ |
| ೯. | ಪಿ. ದಯಾನಂದ್ | |

## ಪದಕ ಗೌರವ ಪಡೆದ ಪೊಲೀಸು ಸಿಬ್ಬಂದಿ

ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸ್ ವೃಂದದಲ್ಲಿ ಒಬ್ಬರು ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಡಿ.ವೈ.ಎಸ್.ಪಿ); ಒಬ್ಬರು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಎ.ಎಸ್.ಪಿ); ಮೂವರು ಸರ್ಕಲ್ ಪೊಲೀಸ್ ಇನ್ಸ್‌ಪೆಕ್ಟರ್ (ಸಿ.ಪಿ.ಐ); ಇಬ್ಬರು ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್ (ಎ.ಎಸ್.ಐ); ಒಬ್ಬರು ಪೊಲೀಸ್ ಇನ್ಸ್‌ಪೆಕ್ಟರ್ (ಪಿ.ಐ); ಇಬ್ಬರು ಸಿವಿಲ್ ಹೆಡ್ ಕಾನ್‌ಸ್ಟೇಬಲ್ (ಸಿ.ಹೆಚ್.ಸಿ) ಹಾಗೂ ಒಬ್ಬ ಹೆಡ್ ಕಾನ್‌ಸ್ಟೇಬಲ್ (ಹೆಚ್. ಸಿ) ಅವರು ಸಲ್ಲಿಸಿದ ವಿಶಿಷ್ಟ ಸೇವೆಗಾಗಿ ಪದಕ ಗೌರವಕ್ಕೆ ಪಾತ್ರರಾಗಿರುವರು.

**ಕೋಷ್ಟಕ ೧೦.೨೩ : ೧೯೯೦ ರಿಂದ ೨೦೦೪ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರದಿಯಾದ ಕೊಲೆ, ದರೋಡೆ, ಸುಲಿಗೆ, ಮನೆಗಳ್ಳತನ ಮತ್ತು (Livestock) ದನಗಳ್ಳತನವೂ ಸೇರಿದಂತೆ ಕಳ್ಳತನ, ಇತರ ಕಳವು ಮತ್ತು ಅತ್ಯಾಚಾರ ಪ್ರಕರಣಗಳ ಸಂಖ್ಯೆ ಈ ಮುಂದಿನಂತಿದೆ**

| ವರ್ಷ | ಕೊಲೆ | ದರೋಡೆ | ಸುಲಿಗೆ | ಕಳ್ಳತನ | ಇತರ ಕಳವು ಪ್ರಕರಣಗಳು | ಅತ್ಯಾಚಾರ |
|---|---|---|---|---|---|---|
| ೧೯೯೦ | ೫೬ | ೨ | ೧೧ | ೪೨೩ | ೩೧೩ | ೩ |
| ೧೯೯೧ | ೫೬ | ೭ | ೧೫ | ೪೯೨ | ೪೫೨ | ೪ |
| ೧೯೯೨ | ೫೪ | ೮ | ೨೭ | ೪೮೯ | ೪೭೮ | ೧೦ |
| ೧೯೯೩ | ೫೨ | ೬ | ೪೦ | ೫೧೭ | ೪೨೮ | ೭ |
